ಮಾನವಿಕ ಕರ್ನಾಟಕ

ಸಂಪುಟ ೧೧ ಸಂಚಿಕೆ ೩

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೧

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ' ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು ; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಅವಶ್ಯಕವಾದ ಚಿತ್ರಗಳಿದ್ದರೆ ಅದನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು ; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರ ಪ್ರಚೋದಕವಾದ ಪತ್ರಗಳಿಗೆ ಸ್ವಾಗತ ಉಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೧೧ ಸಂಚಿಕೆ ೩

೪೩

ಮೋ ಸಂ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೧

MANAVIKA KARNATAKA, Kannada quarterly of the University of Mysore. Volume 11, Number 3, May 1981. Edited by Dr. B. R. Gopal and Dr. C. M. Muniramappa.

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಡಾ. ಬಾ. ರಾ. ಗೋಪಾಲ್

ಡಾ. ಸಿ. ಎಂ. ಮುನಿರಾಮಪ್ಪ

ಪ್ರಕಾಶಕರು

ಕೆ. ಟಿ. ವೀರಪ್ಪ

ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಮುದ್ರಕರು

ಶ್ರೀಲಕ್ಷ್ಮೀ ಮುದ್ರಣಾಲಯ, ರವೆ ಬೀದಿ, 2 ನೇ ಕ್ರಾಸ್, ಮೈಸೂರು - 1

ವಿಷಯ ಸೂಚಿ

ಈ ಸಂಚಿಕೆಯ ಲೇಖಕರು

೧. ಜಿ. ಶ್ರೀನಿವಾಸನ್	ಪ್ರಾಧ್ಯಾಪಕ, ತತ್ವಶಾಸ್ತ್ರ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು–೫೭೦ ೦೦೬
೨. ಗೊರೂರು ರಾಮಸ್ವಾಮಯ್ಯಂಗಾರ್	400, ಒಂದನೆಯ ಬ್ಲಾಕ್, ರಾಜಾಜಿನಗರ ಬೆಂಗಳೂರು–೫೬೦ ೦೧೦
೩. ಮಾವಿನಕುಳಿ ಶ್ರೀನಿವಾಸ	ಅಧ್ಯಾಪಕ, ಸಮಾಜಶಾಸ್ತ್ರ ವಿಭಾಗ, ಅಂಚೆ ಮತ್ತು ತೆರಪಿನ ಶಿಕ್ಷಣ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು
೪. ಪಿ.ಆರ್. ತಿಪ್ಪೇಸ್ವಾಮಿ	ಕ್ಯೂರೇಟರ್, ಜಾನಪದ ವಸ್ತು ಸಂಗ್ರಹಾಲಯ, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ ಮೈಸೂರು
೫. ಎಂ.ಜಿ. ಬಸವರಾಜ	ಅಧ್ಯಾಪಕ, ಅರ್ಥಶಾಸ್ತ್ರ ವಿಭಾಗ, ವಿದ್ಯಾವರ್ಧಕ ವಾಣಿಜ್ಯ ಮತ್ತು ವ್ಯವಹಾರ ನಿರ್ವಹಣಾ ಕಾಲೇಜು, ಮೈಸೂರು
೬. ವಿ.ಎನ್. ಶೇಷಗಿರಿರಾವ್	ಅಧ್ಯಾಪಕರು, ತತ್ವಶಾಸ್ತ್ರ ವಿಭಾಗ, ಮಾನಸ ಗಂಗೋತ್ರಿ, ಮೈಸೂರು
೭. ಎಸ್. ಎಸ್. ರಾಘವಾಚಾರ್	ಪ್ರಾಧ್ಯಾಪಕರು (ನಿವೃತ್ತ), 33, ಆರನೆಯ ಮೈನ್ ಮೂರನೆಯ ಬ್ಲಾಕ್, ಜಯಲಕ್ಷ್ಮೀಪುರಂ, ಮೈಸೂರು–೫೭೦ ೦೧೨
೮. ಸುಧಾಕರರಾವ್	'ಆನಂದ ಪ್ರಸಾದ' ಕರಂಗಲಪಾಡಿ, ಮಂಗಳೂರು–೫೭೫ ೦೦೩

ಜಿ. ಶ್ರೀನಿವಾಸನ್

ಶಂಕರರು ಮತ್ತು ಬ್ರಾಡ್ಲಿ

ವಿಶ್ವದಲ್ಲಿ ನಾವು ನೋಡುವುದು ಅನೇಕತೆ ; ಅನೇಕ ವಸ್ತುಗಳು, ಜೀವರಾಶಿಗಳು, ಇತ್ಯಾದಿ. ಆದರೆ ಈ ಅನೇಕತೆಯ ಹಿಂಬದಿಯಲ್ಲಿ, ಅವಕ್ಕೆ ಆಧಾರರೂಪವಾಗಿ ಒಂದು ಮೂಲಭೂತವಾದ ತತ್ತ್ವವು ಅಡಗಿರಬೇಕೆಂಬುದು ಹಲವಾರು ತಾತ್ತ್ವಿಕರ ಅಭಿಮತ. ಇದನ್ನು ನಾವು ಭಾರತೀಯ ಮತ್ತು ಪಾಶ್ಚಾತ್ಯ ತಾತ್ತ್ವಿಕರನೇಕರಲ್ಲಿ ಕಾಣಬಹುದು. ಆ ರೀತಿ ವಿಶ್ವದ ಮೂಲಭೂತವಾಗಿರುವ ಏಕೈಕ ತತ್ತ್ವದ ಸ್ವರೂಪವೇನು, ಸ್ವಭಾವವೇನು ಅದಕ್ಕೂ ವಿಶ್ವದಲ್ಲಿನ ಅನೇಕತೆಗೂ ಇರುವ ಸಂಬಂಧವೇನು, ಇತ್ಯಾದಿ ಗಹನವಾದ ವಿಷಯಗಳನ್ನು ಕುರಿತು ವಿಶ್ಲೇಷಣೆ ತಾತ್ತ್ವಿಕರಲ್ಲಿ ವಿಶೇಷವಾಗಿ ನಡೆದಿದೆ. ಈ ದಿಶೆಯಲ್ಲಿ ನಡೆದ ಪಾಶ್ಚಾತ್ಯ ತಾತ್ತ್ವಿಕರ ಚಿಂತನೆಯಲ್ಲಿ ಮುಖ್ಯವಾಗಿ ನಾಲ್ಕು ಮೈಲುಗಲ್ಲುಗಳನ್ನು ಗುರುತಿಸಬಹುದು. ಮೊದಲನೆಯದಾಗಿ ಪ್ಲೇಟೋ,1 ಎರಡನೆಯದಾಗಿ ಸ್ಪಿನೋಜಾ,2 ಮೂರನೆಯದಾಗಿ ಹೆಗಲ್,3 ಮತ್ತು ನಾಲ್ಕನೆಯದಾಗಿ ಬ್ರಾಡ್ಲಿ.4 ಪ್ಲೇಟೋ ವಿಶ್ವದ ಮೂಲತತ್ತ್ವವನ್ನು ಪರಮ ಶುಭ ತತ್ತ್ವ (The Idea of the Good) ಎಂದು ಕರೆದು, ವಿಶ್ವದ ವಸ್ತುಗಳು ಅದರ ಅನುಕರಣೆಗಳು ಮಾತ್ರವೆಂದೂ, ಅವುಗಳಿಗೆ ತಮ್ಮದೇ ಆದ ಅಸ್ತಿತ್ವ ಅಥವಾ 'ಸತ್ಯ' ವಿಲ್ಲವೆಂದೂ ನಿರೂಪಿಸಿದನು. ಪರಮತತ್ತ್ವವನ್ನು "Substance" ಎಂದು ಕರೆದು, ಅದು ಮಾತ್ರ ತನ್ನ ಅಸ್ತಿತ್ವವನ್ನು ತನ್ನಲ್ಲಿಯೇ ಹೊಂದಿದ್ದು, ಅದರ ಮೂಲಕವೇ ಅದನ್ನು ಅರಿಯಬೇಕೆಂದೂ ವಿಶ್ವದಲ್ಲಿನ ಇತರ ಎಲ್ಲ ವ್ಯಕ್ತಿ–ವಸ್ತುಗಳೂ ಆಲೋಚನೆ–ವಿಷಯಗಳೂ ಅದರ ಮೇಲೆ ಅವಲಂಬಿಸಿದ 'ಪ್ರಕಾರ'ಗಳೆಂದೂ ನಿರೂಪಿಸಿದನು. ಹೆಗಲ್ ಮತ್ತೊಂದು ಹೆಜ್ಜೆ ಮುಂದೆ ಹೋಗಿ ವಿಶ್ವದ ಆಧಾರವನ್ನು ಬ್ರಹ್ಮತತ್ತ್ವವೆಂದು ಕರೆದು, ಅದೇ ತತ್ತ್ವವೇ ವಿಶ್ವದ ಅನೇಕ ಹಂತಗಳಾಗಿ ಮಾರ್ಪಟ್ಟು, ಅಂತಿಮವಾಗಿ ತನ್ನ ಮೂಲವನ್ನು ಮುಟ್ಟುವುದೆಂದು ಅತ್ಯಂತ ದೀರ್ಘವಾಗಿ ನಿರೂಪಿಸಿದನು. ಆದರೆ ಈ ಮೂರು ತಾತ್ತ್ವಿಕರಲ್ಲಿಯೂ ವಿಶ್ವದ ಮೂಲಭೂತ ತತ್ತ್ವಕ್ಕೂ ಮತ್ತು ವಿಶ್ವದಲ್ಲಿನ ಅನೇಕ ವಸ್ತುಗಳಿಗೂ ಇರಬಹುದಾದ ಸಂಬಂಧದ ವಿಷಯದಲ್ಲಿ ಯಾವ ಖಚಿತವಾದ ಅಭಿಪ್ರಾಯವೂ ಹೊರಬರಲಿಲ್ಲ. ಇದಕ್ಕೆ ಕಾರಣ, ಮುಖ್ಯವಾಗಿ ಎರಡು : (1) ಪ್ರಸಂಚ

ದಲ್ಲಿನ ವಸ್ತು, ವಿಷಯಗಳು ಪರಮತತ್ತ್ವದ ದೃಷ್ಟಿಯಿಂದ ಕೇವಲ 'ಮಿಥ್ಯೆ'ಯೆಂದು ಸಾರುವ ಸಿದ್ಧಾಂತವನ್ನು ಮುಂದಿಡಲು ಈ ತಾತ್ತ್ವಿಕರು ಸಿದ್ಧರಾಗಿರಲಿಲ್ಲ ; ಇವರ ದರ್ಶನಗಳಲ್ಲಿ ಪ್ರಪಂಚವು ಪರಮತತ್ತ್ವದ ದೃಷ್ಟಿಯಿಂದ ಮಿಥ್ಯೆಯೆಂಬ ಅಭಿಪ್ರಾಯವು ಅಲ್ಲಲ್ಲಿ ಕಂಡುಬಂದರೂ, ಅದು ನಿರ್ದಿಷ್ಟವಾದ ರೂಪವನ್ನು ತಾಳಲಿಲ್ಲ ; ಅದಕ್ಕೆ ಬದಲಾಗಿ ಪ್ರಪಂಚಕ್ಕೆ ಯಾವುದಾದರೂ ಒಂದು ರೀತಿಯಾದ ಅರ್ಥದಲ್ಲಿ ಸತ್ಯವಾದ ಅಸ್ತಿತ್ವವನ್ನು ಅಂತಿಮವಾಗಿಯೂ ಕೊಡಲು ಪ್ರಯತ್ನಿಸಿದರು. ಆದರೆ ಈ ಪ್ರಯತ್ನ ವಿಫಲವಾಗಿ, ಇವರ ದರ್ಶನಗಳಲ್ಲಿ ಸಂದಿಗ್ಧತೆ ಅಲ್ಲಲ್ಲಿ ಕಂಡುಬರುವಂತಾಯಿತು. (2) ಅಲ್ಲದೆ, ಈ ದಾರ್ಶನಿಕರು ಬ್ರಹ್ಮತತ್ತ್ವಕ್ಕೂ ಈಶ್ವರತತ್ತ್ವಕ್ಕೂ ಇರಬಹುದಾದ ಸಂಬಂಧ ಅಥವಾ ವ್ಯತ್ಯಾಸವನ್ನು ನಿರ್ದಿಷ್ಟವಾಗಿ ನಿರೂಪಿಸಲಿಲ್ಲ. ಪ್ಲೇಟೋ ತನ್ನ ತತ್ತ್ವಶಾಸ್ತ್ರದಲ್ಲಿ ಎರಡು ತತ್ತ್ವಗಳಿಗೂ ವ್ಯತ್ಯಾಸವನ್ನೇ ಪ್ರತಿಪಾದಿಸಿದನು ; ಸ್ಪಿನೋಜಾ ಬ್ರಹ್ಮತತ್ತ್ವ ಮತ್ತು ಈಶ್ವರತತ್ತ್ವಗಳೆರಡೂ ಒಂದೇ ಎನ್ನುವಂತೆ ತನ್ನ ತತ್ತ್ವ ಶಾಸ್ತ್ರವನ್ನು ರೂಪಿಸಿದನು : ಇದಕ್ಕೆ ಕಾರಣ, ಸ್ಪಿನೋಜಾ ಕೇವಲ ತಾತ್ತ್ವಿಕನೇ ಅಲ್ಲದೇ ಅನುಭಾವಿಯೂ ಆಗಿದ್ದನು. ಹೆಗಲ್ ಈಶ್ವರತತ್ತ್ವ ಮತ್ತು ಬ್ರಹ್ಮತತ್ತ್ವಗಳಿಗೆ ವ್ಯತ್ಯಾಸವಿದೆಯೆಂದು ಪರಿಗಣಿಸಿದನು ; ಆದರೆ ಬ್ರಹ್ಮ ತತ್ತ್ವದ ದೃಷ್ಟಿಯಿಂದ ಈಶ್ವರತತ್ತ್ವದ ಸ್ಥಾನಮಾನಗಳ ನಿರ್ಣಯವನ್ನು ಮಾಡಲು ಪ್ರಯತ್ನಿಸಲಿಲ್ಲ. ಈ ಪ್ರಯತ್ನವು ಅತ್ಯಂತ ಖಚಿತವಾದ ರೂಪದಲ್ಲಿ ನಡೆದದ್ದು ಬ್ರಾಡ್ಲಿಯ ದರ್ಶನದಲ್ಲಿ ಮಾತ್ರ. ಬ್ರಹ್ಮ ತತ್ತ್ವದ ದೃಷ್ಟಿಯಿಂದ ಪ್ರಪಂಚದ ಸ್ಥಾನಮಾನವನ್ನು ಖಚಿತವಾಗಿ ನಿರ್ಣಯಿಸಿ ಒಂದು ಸಿದ್ಧಾಂತವನ್ನು ರೂಪಿಸುವ ಪ್ರಯತ್ನವನ್ನು ಮಾಡಿದವನೂ ಅವನೇ. ಆದ್ದರಿಂದಲೇ ಪಾಶ್ಚಾತ್ಯ ತತ್ತ್ವಶಾಸ್ತ್ರದಲ್ಲಿ ವಿಶ್ವಾಸ ಏಕತತ್ತ್ವ ಸ್ವರೂಪ, ಸ್ವಭಾವಗಳ ವಿಶ್ಲೇಷಣೆ ಅತಿ ನಿರ್ದಿಷ್ಟವಾದ ರೂಪವನ್ನು ಪಡೆದದ್ದು ಬ್ರಾಡ್ಲಿಯ ದರ್ಶನದಲ್ಲಿಯೇ ಎಂದು ಹೇಳಬಹುದು.

ಅದೇ ರೀತಿ ಭಾರತೀಯ ತತ್ತ್ವಶಾಸ್ತ್ರದಲ್ಲಿ ಏಕತ್ವವಾದವು ಉಪನಿಷತ್ತುಗಳಲ್ಲಿಯೇ ಪ್ರಾರಂಭವಾದರೂ ಅದು ನಿರ್ದಿಷ್ಟವಾದ, ಕ್ರಮಬದ್ಧವಾದ ಪ್ರತಿಪಾದನೆಯನ್ನು ತಾತ್ತ್ವಿಕವಾದ ರೀತಿಯಲ್ಲಿ ಪಡೆದದ್ದು ಶಂಕರರ ಅದ್ವೈತ ವೇದಾಂತದಲ್ಲಿ.[5] ಆದ್ದರಿಂದಲೇ ಶಂಕರ ಮತ್ತು ಬ್ರಾಡ್ಲಿಯವರ ದರ್ಶನಗಳಿಗೆ ಸಾಮ್ಯವಿರುವುದೇನೂ ಆಶ್ಚರ್ಯವೆನಿಸಲಾರದು. ಆದರೆ ಬ್ರಾಡ್ಲಿಯು ಶಂಕರರ ಅದ್ವೈತ ವೇದಾಂತದಿಂದ ಪ್ರಭಾವಿತನಾಗಿದ್ದನೇ, ಇಲ್ಲವೇ ಎನ್ನುವುದು ಸಂಶಯಾಸ್ಪದ. ಆ ರೀತಿಯಾದ ಪ್ರಭಾವವಿಲ್ಲದಿದ್ದರೂ ಬ್ರಾಡ್ಲಿಯು ತನ್ನದೇ ಆದ ವಿಚಾರಕ್ರಮವನ್ನು ಅನುಸರಿಸಿ ಶಂಕರರ ಅದ್ವೈತ ವೇದಾಂತವನ್ನು ಹೋಲುವ ನಿರ್ಣಯಕ್ಕೆ ಬಂದಿರಲು ಸಾಧ್ಯ. ಶಂಕರರು ಜೀವಿಸಿದ್ದು ಭಾರತದಲ್ಲಿ, ಎಂಟನೆಯ ಶತಮಾನದಲ್ಲಿ ; ಬ್ರಾಡ್ಲಿಯು ಇದ್ದದ್ದು ಬ್ರಿಟನ್ನಿನಲ್ಲಿ, ಹತ್ತೊಂಬತ್ತು–ಇಪ್ಪತ್ತನೆ ಶತಮಾನದಲ್ಲಿ. ಆದರೆ ದೇಶಗಳ ಅಂತರವಾಗಲೀ, ಕಾಲದ ಅಂತರವಾಗಲೀ ಈ ಇಬ್ಬರು ದಾರ್ಶನಿಕರು ಒಂದೇ ವಿಧವಾದ

ದರ್ಶನವನ್ನು ರೂಪಿಸಲು ಅಡ್ಡಿಯಾಗಲಿಲ್ಲ. ಆಶ್ಚರ್ಯದ ಸಂಗತಿಯೆಂದರೆ, ಬ್ರಾಡ್ಲಿಯು ಇಪ್ಪತ್ತನೇ ಶತಮಾನದಲ್ಲಿ ನಿರೂಪಿಸಿದ ತಾತ್ತ್ವಿಕ ಸಿದ್ಧಾಂತವನ್ನು ಶಂಕರರು ಎಂಟನೇ ಶತಮಾನದಲ್ಲಿಯೇ ಪ್ರತಿಪಾದಿಸಿದ್ದರೆನ್ನುವುದು. ಅದು ಹೇಗೇ ಇರಲಿ, ಭಾರತದಲ್ಲಿ ಈಚೆಗೆ ಶಂಕರರ ಅದ್ವೈತ ವೇದಾಂತವನ್ನು ಕುರಿತು ಇಂಗ್ಲಿಷ್‌ನಲ್ಲಿ ಬರೆದಿರುವ ಅನೇಕ ವಿದ್ವಾಂಸರು ಬ್ರಾಡ್ಲಿಯ ದರ್ಶನದ ಅಧ್ಯಯನದಿಂದ ಪ್ರಭಾವಿತ ರಾಗಿದ್ದಾರೆ. ಡಾ|| ಎಸ್. ರಾಧಾಕೃಷ್ಣನ್‌ರವರ ಬರಹಗಳಲ್ಲಿ ಈ ಪ್ರಭಾವ ಹೆಚ್ಚಾಗಿ ಕಂಡುಬರುತ್ತದೆ.

ಈ ಲೇಖನದ ಮುಖ್ಯ ಉದ್ದೇಶ ಶಂಕರರು ಮತ್ತು ಬ್ರಾಡ್ಲಿಯವರ ದರ್ಶನಗಳಲ್ಲಿ ಕಾಣುವ ಮುಖ್ಯವಾದ ಹೋಲಿಕೆ ಮತ್ತು ವ್ಯತ್ಯಾಸಗಳನ್ನು ನಿರೂಪಿಸುವುದು. ಬ್ರಹ್ಮ ತತ್ತ್ವದ ಸ್ವರೂಪವನ್ನು, ಸಾಮಾನ್ಯ ಲಕ್ಷಣಗಳನ್ನು ಕುರಿತು ಶಂಕರರು ಮತ್ತು ಬ್ರಾಡ್ಲಿ ಬಹುಮಟ್ಟಿಗೆ ಒಂದೇ ರೀತಿಯಾದ ವಿವರಣೆಯನ್ನು ನೀಡಿದ್ದಾರೆ. ಬ್ರಹ್ಮವು ಏಕ, ಅಖಂಡ, ನಿರ್ವಿಕಾರ ಮತ್ತು ಸಂಬಂಧರಹಿತವಾದದ್ದು. ಅದು ಕೇವಲ ತಾರ್ಕಿಕ ಸಿದ್ಧಾಂತ ಮಾತ್ರವಲ್ಲ ; ಅನುಭವಾತ್ಮಕವಾದ ಸತ್ಯ. ಅದರ ದೃಷ್ಟಿಯಿಂದ ಪ್ರಪಂಚವು ಕೇವಲ ತೋರಿಕೆ ; ಅದರಲ್ಲಿ ನಾವು ಕಾಣುವುದು ಬ್ರಹ್ಮದ ಲಕ್ಷಣಗಳಿಗೆ ವಿರೋಧವಾದ ಲಕ್ಷಣಗಳನ್ನು ಎಂದರೆ ಪ್ರಪಂಚದಲ್ಲಿ ಅನೇಕತೆ, ಬದಲಾವಣೆ ಮತ್ತು ಅನೇಕ ರೀತಿ ಯಾದ ಸಂಬಂಧಗಳನ್ನು, ಅಪೂರ್ಣತೆಯನ್ನು, ನಾವು ನೋಡುತ್ತೇವೆ. ಬ್ರಹ್ಮದ ಲಕ್ಷಣಗಳಿಗೆ ವಿರೋಧವಾದ ಪ್ರಪಂಚದಲ್ಲಿನ ಈ ಲಕ್ಷಣಗಳೆಲ್ಲವೂ, ಪ್ರಪಂಚವು ಬ್ರಹ್ಮದ ತೋರಿಕೆಯಾದ್ದರಿಂದಲೇ ಉಂಟಾಗುತ್ತವೆ. ಆದ್ದರಿಂದಲೇ ಪ್ರಪಂಚದ ಆಧಾರ ಅಥವಾ ಮೂಲಸತ್ಯ ಅಖಂಡವಾದ, ಅನಂತವಾದ, ನಿರ್ವಿಕಾರವಾದ ಬ್ರಹ್ಮ ತತ್ತ್ವ ; ಪ್ರಪಂಚವು ಅದರ ತೋರಿಕೆ ಮಾತ್ರ. ಹಗ್ಗವು ಹಾವಾಗಿ ಕಾಣಬಲ್ಲದು, ಆದರೆ ಹಗ್ಗವೇ ಹಾವಲ್ಲ, ಹಾವು ಹಗ್ಗವೂ ಅಲ್ಲ ; ಹಾವು ಹಗ್ಗದ ತೋರಿಕೆ ಮಾತ್ರ.

ಬ್ರಾಡ್ಲಿ ಮತ್ತು ಶಂಕರರಿಬ್ಬರೂ ಬ್ರಹ್ಮದ ನಿರ್ಗುಣತ್ವವನ್ನು ಪ್ರತಿಪಾದಿಸಿ ದ್ದಾರೆ. ಅವರಿಬ್ಬರ ಪ್ರಕಾರವೂ ಪರಮಸತ್ಯವು ನಿರ್ಗುಣವೇ ಹೊರತು ಸಗುಣವಲ್ಲ. ಯಾವ ರೀತಿಯಾದ ಗುಣಗಳನ್ನಾಗಲೀ, ವಿಶೇಷಣಗಳನ್ನಾಗಲೀ ಬ್ರಹ್ಮಕ್ಕೆ ಅನ್ವಯಿಸು ವುದು ತಾತ್ತ್ವಿಕವಾಗಿ ಸರಿಯಲ್ಲ. ಕಾರಣ, ಬ್ರಹ್ಮವು ಅಖಂಡ ಮತ್ತು ಅನಂತ. ಆದ್ದರಿಂದ ನಿರ್ಗುಣಬ್ರಹ್ಮಕ್ಕೆ ನೈತಿಕತೆಯನ್ನು ಅನ್ವಯಿಸಲಾಗದೆಂದು ಬ್ರಾಡ್ಲಿಯು ಒತ್ತಿ ಹೇಳಿದ್ದಾನೆ. ಏಕೆಂದರೆ, ಅವನ ಪ್ರಕಾರ ನೈತಿಕತೆಯು ಅಪೂರ್ಣತೆಯ ಕುರುಹು. ಆದ್ದರಿಂದ, ಅನಂತವಾದ ಬ್ರಹ್ಮಕ್ಕೆ ಅದನ್ನು ಅನ್ವಯಿಸಲಾಗದು.

ಸಗುಣ ಬ್ರಹ್ಮ ಅಥವಾ ಈಶ್ವರತತ್ತ್ವದ ವಿಷಯದಲ್ಲಿಯೂ ಶಂಕರ ಮತ್ತು ಬ್ರಾಡ್ಲಿಯವರು ಒಂದೇ ರೀತಿಯಾದ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ನಿರ್ಗುಣ ಬ್ರಹ್ಮವು ಮಾತ್ರ ಅಂತಿಮ ಸತ್ಯವಾಗಿರುವುದರಿಂದ ಸಗುಣಬ್ರಹ್ಮವು ಅಂತಿಮ ಸತ್ಯ ವಾಗಲು ಸಾಧ್ಯವಿಲ್ಲ. ಆದ ಕಾರಣ, ಸಗುಣಬ್ರಹ್ಮ ಅಥವಾ ಈಶ್ವರತತ್ತ್ವವು ಭಕ್ತ

ನೊಂದಿಗೆ, ವಿಶ್ವದೊಂದಿಗೆ ಅನೇಕ ರೀತಿಯಾದ ಸಂಬಂಧಗಳನ್ನು ಪಡೆದಿರುವ, ವಿಶಿಷ್ಟವಾದ ವ್ಯಕ್ತಿತ್ವವನ್ನು ಹೊಂದಿರುವ ಒಂದು ತತ್ತ್ವ. ನಿರ್ಗುಣ ಬ್ರಹ್ಮವು ಸಾಮಾನ್ಯ ಮನುಷ್ಯನ ಕಲ್ಪನೆಗೆ ನಿಲುಕದೆ ಹೋಗುವುದರಿಂದ ಸಗುಣ ಬ್ರಹ್ಮದ ಕಲ್ಪನೆಯನ್ನು ಅವನು ತನ್ನ ಆರಾಧನೆಗಾಗಿ ಕಲ್ಪಿಸಿಕೊಳ್ಳುತ್ತಾನೆ. ಆದ್ದರಿಂದಲೇ ಈಶ್ವರತತ್ತ್ವವು ಮಾಯಾಕಲ್ಪಿತವೆಂದು ಹೇಳಲಾಗಿದೆ. ನಿರ್ಗುಣ ಬ್ರಹ್ಮದ ಕಲ್ಪನೆಯನ್ನು ಮುಟ್ಟಲಾರದವರಿಗೆ ಶಂಕರರು ನೀಡಿರತಕ್ಕ ಒಂದು ಸುಲಭೋಪಾಯ ಈಶ್ವರತತ್ತ್ವ.

ಆದರೆ ಸಗುಣಬ್ರಹ್ಮ ಅಥವಾ ಈಶ್ವರತತ್ತ್ವಕ್ಕೆ ಶಂಕರ ಮತ್ತು ಬ್ರಾಡ್ಲಿಯವರ ದರ್ಶನಗಳಲ್ಲಿ ಯಾವ ಮೌಲ್ಯವೂ ಇಲ್ಲವೆಂದು ಊಹಿಸಿದರೆ ತಪ್ಪಾಗುತ್ತದೆ. ಶಂಕರ ಮತ್ತು ಬ್ರಾಡ್ಲಿಯವರು ನಾಸ್ತಿಕರಲ್ಲ. ಈಶ್ವರತತ್ತ್ವದ ಪ್ರಾಮುಖ್ಯತೆಯನ್ನು, ಮಹಿಮೆಯನ್ನು ತಮ್ಮ ದರ್ಶನಗಳಲ್ಲಿ ಅವರು ಎತ್ತಿ ಹಿಡಿದಿದ್ದಾರೆ. ನಿರ್ಗುಣಬ್ರಹ್ಮದ ಅರಿವನ್ನು ಅಂತಿಮವಾಗಿ ಪಡೆಯಬೇಕಾದರೆ ಸಗುಣಬ್ರಹ್ಮದ ಉಪಾಸನೆ ಒಂದು ಮುಖ್ಯವಾದ ಮಾಧ್ಯಮವಾಗಿ ಪರಿಣಮಿಸಬಹುದು. ಆದ್ದರಿಂದಲೇ, ಧಾರ್ಮಿಕ ಜೀವನದಲ್ಲಿನ ನೈಜವಾದ ನಂಬಿಕೆ, ಆಚಾರ, ಕರ್ಮ, ಉಪಾಸನೆ ಇತ್ಯಾದಿಗಳನ್ನು ನಾವು ಅಲ್ಲಗಳೆಯುವಂತಿಲ್ಲ.

ಈ ರೀತಿ ಶಂಕರ ಮತ್ತು ಬ್ರಾಡ್ಲಿಯವರ ದರ್ಶನಗಳ ಚೌಕಟ್ಟುಗಳು ಮುಖ್ಯವಾಗಿ ಒಂದೇ ಆಗಿವೆ. ಆದರೆ ಸೂಕ್ಷ್ಮವಾಗಿ ನೋಡಿದ ಪಕ್ಷಕ್ಕೆ ಅವರಲ್ಲಿ ಕೆಲವು ವ್ಯತ್ಯಾಸಗಳನ್ನೂ ಕಾಣಬಹುದು. ಮೊದಲನೆಯದಾಗಿ ಅವರ ವಿಚಾರಕ್ರಮಗಳಲ್ಲಿ ಸ್ವಲ್ಪ ವ್ಯತ್ಯಾಸವಿದೆ. ಶಂಕರರು ಭಾರತೀಯ ಸಾಂಪ್ರದಾಯಿಕ ಪದ್ಧತಿಯನ್ನು ಅನುಸರಿಸಿ ತಮ್ಮ ದರ್ಶನವನ್ನು ರೂಪಿಸಿದರು. ಪ್ರಸ್ಥಾನತ್ರಯಗಳಾದ ಉಪನಿಷತ್ತುಗಳು, ಭಗವದ್ಗೀತೆ ಮತ್ತು ಬ್ರಹ್ಮ ಸೂತ್ರಗಳ ಮೇಲೆ ಭಾಷ್ಯಗಳನ್ನು ಬರೆದು, ತಮ್ಮ ಸಿದ್ಧಾಂತವಾದ ಅದ್ವೈತ ವೇದಾಂತವು ಅವುಗಳಲ್ಲಿ ಹೇಗೆ ನಿರೂಪಿತವಾಗಿದೆಯೆಂದು ತೋರಿಸಿದರು. ಆದರೆ, ಪಾಶ್ಚಾತ್ಯ ದಾರ್ಶನಿಕನಾದ ಬ್ರಾಡ್ಲಿಯು ಯಾವ ಗ್ರಂಥವನ್ನೂ ಮೂಲವಾಗಿ ಆಧಾರವಾಗಿಟ್ಟುಕೊಳ್ಳದೆ, ಕೇವಲ ತರ್ಕವನ್ನೇ ಉಪಯೋಗಿಸಿ ತನ್ನ ದರ್ಶನವನ್ನು ರೂಪಿಸಿದನು. ಇದು ಶಂಕರರು ಮತ್ತು ಬ್ರಾಡ್ಲಿಯವರ ವಿಚಾರಪದ್ಧತಿಯಲ್ಲಿ ಮೇಲ್ನೋಟಕ್ಕೆ ತೋರಬಹುದಾದ ವ್ಯತ್ಯಾಸ. ಆದರೆ, ಇದರಿಂದ ಶಂಕರರು ಅದ್ವೈತವೇದಾಂತದಲ್ಲಿ ತರ್ಕದ ಉಪಯೋಗವೇ ಇಲ್ಲವೆಂದಾಗಲೀ, ಬ್ರಾಡ್ಲಿಯು ಬೇರಾವ ದಾರ್ಶನಿಕರಿಂದಲೂ ಪ್ರಭಾವಿತನಾಗಲಿಲ್ಲವೆಂದಾಗಲೀ ಊಹಿಸಿದರೆ ಬಹಳ ದೊಡ್ಡ ತಪ್ಪಾಗುತ್ತದೆ. ಶಂಕರರು ತಮ್ಮ ಅದ್ವೈತ ವೇದಾಂತದಲ್ಲಿ ತರ್ಕವನ್ನು ಪೂರ್ವಪಕ್ಷಗಳನ್ನು ಖಂಡಿಸುವುದರಲ್ಲಿಯೇ ಅಲ್ಲದೆ, ತಮ್ಮ ಸಿದ್ಧಾಂತವನ್ನು ಮಂಡಿಸುವುದರಲ್ಲಿಯೂ ಉಪಯೋಗಿಸಿದ್ದಾರೆ. ಅದೇ ರೀತಿ ಬ್ರಾಡ್ಲಿಯು ಹೆಗಲ್ ಮುಂತಾದ ದಾರ್ಶನಿಕರ ಸಿದ್ಧಾಂತಗಳನ್ನು ಪೂರ್ಣವಾಗಿ ಒಪ್ಪದೇ ಹೋದರೂ, ಅವರಿಂದ ವಿಶೇಷವಾಗಿ ಪ್ರಭಾವಿತನಾಗಿದ್ದನೆಂಬುದರಲ್ಲಿ ಯಾವ ಸಂದೇಹವೂ ಇಲ್ಲ.

ಎರಡನೆಯದಾಗಿ, ಶಂಕರರ ಅದ್ವೈತವೇದಾಂತದಲ್ಲಿ ಸತ್ಯದ ಮೂರು ಹಂತಗಳ (three orders of reality) ನಿರೂಪಣೆಯನ್ನು ನಾವು ನೋಡುತ್ತೇವೆ. ಪ್ರಾತಿಭಾಸಿಕ ಸತ್ಯ, ವ್ಯಾವಹಾರಿಕ ಸತ್ಯ, ಮತ್ತು ಪಾರಮಾರ್ಥಿಕ ಸತ್ಯ. ಆದರೆ, ಇವು ಮೂರೂ ಒಂದೇ ಸಮಯದಲ್ಲಿ, ಒಂದೇ ಹಂತದಲ್ಲಿ ಸತ್ಯವಾಗಿರಲು ಸಾಧ್ಯವಿಲ್ಲವೆಂದೂ ಅವರು ತೋರಿಸಿದ್ದಾರೆ. ಪ್ರಾತಿಭಾಸಿಕ ಸತ್ಯವು ಭ್ರಾಂತಿಯು ಇರುವವರೆಗೆ ಮಾತ್ರ ಸತ್ಯ. ಆದರೆ ಭ್ರಾಂತಿಯು ಹೋದಮೇಲೆ ವ್ಯಾವಹಾರಿಕ ಸತ್ಯದ ದೃಷ್ಟಿಯಿಂದ ಅಸತ್ಯವಾಗುತ್ತದೆ. ಅದೇ ರೀತಿ, ವ್ಯಾವಹಾರಿಕ ಸತ್ಯವು ವ್ಯಕ್ತಿಯಲ್ಲಿ ಅಜ್ಞಾನವಿರುವವರೆಗೆ ಸತ್ಯ ; ಅಜ್ಞಾನವು ಹೋಗಿ ಜ್ಞಾನವು ಗೋಚರಿಸಿದಾಗ, ಪಾರಮಾರ್ಥಿಕ ಸತ್ಯದ ದೃಷ್ಟಿಯಿಂದ ಅಸತ್ಯವಾಗುತ್ತದೆ. ಈ ರೀತಿ ಅಂತಿಮವಾಗಿ ಸತ್ಯವು ಒಂದೇ ಹೊರತು ಮೂರಲ್ಲ; ಪಾರಮಾರ್ಥಿಕ ಸತ್ಯವು ಮಾತ್ರವೇ ಅಂತಿಮ ಸತ್ಯ. ಇದನ್ನೇ ಶಂಕರರು ತಮ್ಮ ವೇದಾಂತವಲ್ಲಿ ಪ್ರತಿಪಾದಿಸಿದ್ದಾರೆ. ಆದುದರಿಂದಲೇ, ಅವರ ವೇದಾಂತಕ್ಕೆ ಅದ್ವೈತ ವೇದಾಂತವೆಂದು ಹೆಸರು ಬಂದಿದೆ. ಈ ರೀತಿ ಒಂದು ಹಂತದಲ್ಲಿ ಕಾಣುವ ಸತ್ಯವು ಅದರ ಮೇಲಿನ ಹಂತದ ಸತ್ಯದ ದೃಷ್ಟಿಯಿಂದ ವಿರೋಧಿಸಲ್ಪಡಬಹುದೆಂಬ ತತ್ತ್ವವನ್ನು ಶಂಕರರು ಒಪ್ಪುತ್ತಾರೆ. ಆದರೆ, ಈ ತತ್ತ್ವವನ್ನು ಬ್ರಾಡ್ಲಿ ತನ್ನ ದರ್ಶನದಲ್ಲಿ ಒಪ್ಪಿದಂತೆ ಕಾಣುವುದಿಲ್ಲ. ಅವನ ಪ್ರಕಾರ ಪ್ರಪಂಚದಲ್ಲಿನ ವಿಷಯಗಳೆಲ್ಲವೂ ಬ್ರಹ್ಮದ ತೋರಿಕೆಗಳೇ ಆದರೂ, ಪ್ರತಿಯೊಂದರಲ್ಲಿಯೂ ಸ್ವಲ್ಪ ಸತ್ಯಾಂಶವಿದೆಯೆಂದೂ ಹೇಳಬೇಕಾಗುತ್ತದೆ. ಆ ವಿಷಯದ ವಿಸ್ತಾರ, ಅವಿರೋಧತೆ ಹೆಚ್ಚಿದಷ್ಟೂ ಅದರ ಸತ್ಯಾಂಶವೂ ಹೆಚ್ಚುತ್ತದೆ.

ಈ ವ್ಯತ್ಯಾಸಗಳೇನೇ ಇದ್ದರೂ ಅವು ಅಷ್ಟು ಮುಖ್ಯವೆನಿಸುವುದಿಲ್ಲ. ಕಾರಣ, ಶಂಕರರು ಮತ್ತು ಬ್ರಾಡ್ಲಿಯವರ ದರ್ಶನಗಳಲ್ಲಿ ಮೂಲವಾಗಿ ಅಡಗಿರುವ ತತ್ತ್ವಗಳ ಸಾಮ್ಯತೆ. ಇಬ್ಬರೂ ಬ್ರಹ್ಮವಾದಿಗಳು. ಪ್ರಪಂಚವು ಅಂತಿಮವಾಗಿ ಬ್ರಹ್ಮದ ತೋರಿಕೆಯೆಂದು ಒಪ್ಪಿದವರು. ನಿರ್ಗುಣ ಬ್ರಹ್ಮವನ್ನು ಮಾತ್ರ ಸತ್ಯವನ್ನಾಗಿ ಪರಿಗಣಿಸಿ, ಸಗುಣ ಬ್ರಹ್ಮಕ್ಕೆ ಧಾರ್ಮಿಕ ಉಪಾಸನೆಯ ದೃಷ್ಟಿಯಿಂದ ಒಂದು ಸ್ಥಾನದ ಅವಶ್ಯಕತೆಯನ್ನು ನಿರ್ಧರಿಸಿದವರು. ಅಂತಿಮವಾಗಿ ವ್ಯಕ್ತಿಯ ಜೀವನದ ಆಧ್ಯಾತ್ಮಿಕ ಉದ್ದೇಶ ಬ್ರಹ್ಮ ಸಾಕ್ಷಾತ್ಕಾರವನ್ನು ಪಡೆಯುವುದೆಂದು ಸಾರಿದವರು. ಈ ರೀತಿ ಕಾಲ, ದೇಶ, ವ್ಯಕ್ತಿಗಳು ಬೇರೆಯಾದರೂ, ಅವರ ಸಮಸ್ಯೆಯು ಒಂದೇ ಆಗಿದ್ದು, ಅವರ ಮಾನಸಿಕ ದೃಷ್ಟಿಗಳೂ ಒಂದೇ ಆಗಿದ್ದರೆ, ಅವರ ಸಿದ್ಧಾಂತಗಳೂ ಸಾಮ್ಯವನ್ನು ಪಡೆಯುವುದರಲ್ಲಿ ಆಶ್ಚರ್ಯವಿಲ್ಲ.

ಅಡಿ ಟಿಪ್ಪಣಿಗಳು

1 ಪ್ಲೇಟೊ : ಕ್ರಿ.ಪೂ. 4ನೇ ಶತಮಾನದ ಗ್ರೀಕ್ ತತ್ತ್ವಜ್ಞಾನಿ; ಸಾಕ್ರಟೀಸನ ಮುಖ್ಯ ಶಿಷ್ಯ; ತನ್ನ ಗುರುವಿನ ತಾತ್ತ್ವಿಕ ಚಿಂತನೆಗಳನ್ನು ಸಂಭಾಷಣಾ ಗ್ರಂಥಗಳ (*Dialogues*) ರೂಪದಲ್ಲಿ ಬರೆದಿಟ್ಟ ಕೀರ್ತಿ ಇವನದು; ಸ್ವತಃ ತಾತ್ತ್ವಿಕನೂ ಹೌದು; ಮುಖ್ಯವಾದ ಗ್ರಂಥಗಳು *The Republic, Sophist, Pheado* ಇತ್ಯಾದಿ.

2 ಸ್ಪಿನೋಜಾ : ಕ್ರಿ.ಶ. 17ನೇ ಶತಮಾನದ ಯಹೂದಿ ತತ್ತ್ವಜ್ಞಾನಿ; ಅನುಭಾವಿ; ಮುಖ್ಯಗ್ರಂಥ *Ethics*.

3 ಹೆಗಲ್ : ಕ್ರಿ.ಶ. 19ನೇ ಶತಮಾನದ ಜರ್ಮನ್ ತತ್ತ್ವಜ್ಞಾನಿ; ಬ್ರಹ್ಮತತ್ತ್ವವಾದವನ್ನು ಪಾಶ್ಚಾತ್ಯರಲ್ಲಿ ವ್ಯವಸ್ಥಿತ ರೂಪದಲ್ಲಿ ಕೂಲಂಕಷವಾಗಿ ರೂಪಿಸಿದ ಕೀರ್ತಿ ಇವನದು; ಮುಖ್ಯವಾದ ಗ್ರಂಥಗಳು *The Phenomenology of Spirit, Logic* ಇತ್ಯಾದಿ.

4 ಬ್ರಾಡ್ಲಿ ಎಫ್. ಎಚ್. : ಕ್ರಿ.ಶ. 19–20ನೇ ಶತಮಾನದ ಪ್ರಸಿದ್ಧ ಅಂಗ್ಲ ತತ್ತ್ವಜ್ಞಾನಿ; ಇಂಗ್ಲಿಷ್ ಸಾಹಿತ್ಯ ವಿಮರ್ಶಕರಲ್ಲಿ ಪ್ರಸಿದ್ಧನಾದ ಎ. ಸಿ. ಬ್ರಾಡ್ಲಿಯ ಸಹೋದರ; ನಿರ್ಗುಣ ಬ್ರಹ್ಮತತ್ತ್ವ ಮತ್ತು ಪ್ರಪಂಚವು ಬ್ರಹ್ಮದ 'ತೋರಿಕೆ'ಗಳೆಂಬ ತನ್ನ ವಾದಗಳಿಂದ ವಿಶೇಷವಾದ ವಿಮರ್ಶೆಗೊಳಗಾಗಿ ಮೆಚ್ಚುಗೆಯನ್ನು ಗಳಿಸಿದ ತಾತ್ತ್ವಿಕ; ಮುಖ್ಯವಾದ ಗ್ರಂಥಗಳು *Appearance and Reality, Essays on Truth and Reality* ಇತ್ಯಾದಿ.

5 ಶಂಕರರು : ಕ್ರಿ.ಶ. 8ನೇ ಶತಮಾನದ ಭಾರತೀಯ ಆಚಾರ್ಯ ಪುರುಷರು; ಬೌದ್ಧ ತತ್ತ್ವಗಳನ್ನು ವಿರೋಧಿಸಿ ವೈದಿಕ ತತ್ತ್ವಗಳನ್ನು ಭಾರತದಲ್ಲಿ ನೆಲೆಯೂರುವಂತೆ ಮಾಡಿದ ಕೀರ್ತಿ ಇವರದು; ಗೌಡಪಾದರಿಂದ ಪ್ರಭಾವಿತರಾಗಿ, ಅದ್ವೈತ ವೇದಾಂತವನ್ನು ಆಮೂಲಾಗ್ರವಾಗಿ ಪ್ರತಿಪಾದಿಸಿ, ಅದನ್ನು ನಿಯಮ ಬದ್ಧವಾಗಿ ಸ್ವಯಂ ಪೂರ್ಣವಾದ 'ದರ್ಶನ'ವನ್ನಾಗಿ ಸ್ಥಾಪಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ; ಬಾದರಾಯಣರ ಬ್ರಹ್ಮ ಸೂತ್ರಗಳ ಮೇಲೆ ಇವರು ಬರೆದ ಭಾಷ್ಯ, ಭಗವದ್ಗೀತೆಯ ಮೇಲೆ ಬರೆದ ಭಾಷ್ಯ, ಉಪನಿಷತ್ತುಗಳ ಮೇಲೆ ರಚಿಸಿದ ಭಾಷ್ಯಗಳು ಇವರು ಮುಖ್ಯ ಗ್ರಂಥಗಳು.

ಸೂಚನೆ : ಈ ಲೇಖನದ ಮೊದಲ ಪುಟದಲ್ಲಿ 14 ನೆಯ ಸಾಲಿನಲ್ಲಿ 'ಸ್ಪಿನೋಜಾ' ಎಂಬುದನ್ನು ಸೇರಿಸಿಕೊಂಡು ವಾಕ್ಯವನ್ನು ಓದಬೇಕಾಗಿ ಕೋರಿದೆ.

ಗೊರೂರು ರಾಮಸ್ವಾಮಿ ಅಯ್ಯಂಗಾರ್

ಸಿಗರೇಟಿನಿಂದ ಅಪಾಯ

ನಮ್ಮ ದೇಶ, ಪತ್ರಿಕೆಗಳು ಇವುಗಳನ್ನು ಕುರೂಪಗೊಳಿಸಿರುವ ವಸ್ತುಗಳ ಪೈಕಿ ಜಾಹೀರಾತುಗಳ ಪಾತ್ರ ಅತಿಪ್ರಬಲವಾದುದು. ಈ ವ್ಯಾಧಿ ನಮ್ಮ ದೇಶಕ್ಕೆ ಅಮೆರಿಕದಿಂದ ಬಂದದ್ದು. ಅಮೆರಿಕದವರು ಜಾಹೀರಾತುಗಳಿಗಾಗಿಯೇ ಅನೇಕ ದಶಕೋಟಿ ಡಾಲರುಗಳನ್ನು ವೆಚ್ಚಮಾಡುತ್ತಾರೆ. ಜೀವನದ ಮಟ್ಟವನ್ನು ಹೆಚ್ಚಿಸಿಕೊಳ್ಳಬೇಕೆಂಬುದೇ ಈ ಎಲ್ಲ ಜಾಹೀರಾತುಗಳ ಗುರಿ. ಜನರು ತಮ್ಮ ಸ್ಥಿತಿಯಲ್ಲಿ ಸದಾ ಅತೃಪ್ತರಾಗಿ ಇನ್ನೂ ಹೆಚ್ಚು ಹೆಚ್ಚು ಸುಖಗಳನ್ನು ಬಯಸುವಂತೆ ಮಾಡುವುದೇ ಜಾಹೀರಾತುಗಳ ಗುರಿ. ಈ ಕಾರ್ಯ ಸಿಗರೇಟಿನ ಜಾಹೀರಾತು, ತಯಾರಕರಿಂದ ಮತ್ತು ಅದರಲ್ಲಿ ಬಂಡವಾಳ ಹೂಡಿದವರಿಂದ ಅನಿಚ್ಛಿನ್ನವಾಗಿ ನಡೆಯುತ್ತಲೇ ಇದೆ. ವಿಶ್ವಸಂಸ್ಥೆಯ ಆರೋಗ್ಯ ವರದಿಯಲ್ಲಿ ಒಂದೆಡೆ ಸಿಗರೇಟ್–ಜಾಹಿರಾತನ್ನು "ಮನುಷ್ಯನು ಬಂದೂಕಿನ ಮದ್ದನ್ನು ಕಂಡು ಹಿಡಿದ ಈಚೆಗೆ, ಅತ್ಯಂತ ಭಯಾನಕವಾದ ಮತ್ತು ಅಪಾಯಕರವಾದ ಸಾಮಾಜಿಕ ಆಪಘಾತ" ಎಂದು ಹೇಳಿದ್ದಾರೆ. ಸಿಗರೇಟಿನ ರುಚಿ ಮಹಿಮೆ ಗಂಧ ಇವುಗಳ ವರ್ಣನೆಗೆ ಜಾಹೀರಾತಿನಲ್ಲಿ ಆಕರ್ಷಣೀಯವಾಗಿ ಶೇಕಡ 90 ಭಾಗ ಪ್ರದೇಶವನ್ನು ಆಕ್ರಮಿಸಿ, ಒಂದು ಮೂಲೆಯಲ್ಲಿ–ಆನೆಯ ಕಣ್ಣಿನಷ್ಟು ಪ್ರದೇಶದಲ್ಲಿ–"ಸಿಗರೇಟಿನಿಂದ ಆರೋಗ್ಯಕ್ಕೆ ಅಪಾಯವಿದೆ" ಎಂದು ಸಣ್ಣ ಅಕ್ಷರದಲ್ಲಿ ಬರೆದಿರುತ್ತಾರೆ. ಕಾನೂನನ್ನು ಹಾಸ್ಯ ಮಾಡುವುದಕ್ಕೋ ಎಂಬಂತೆ "ಇದು ಕಾನೂನಿಗಾಗಿ ಎಚ್ಚರಿಕೆ" (Statutory warning) ಎಂದು ಕೊರೆದಿರುತ್ತಾರೆ. ನಮ್ಮ ದೇಶವನ್ನು ಕುರೂಪಗೊಳಿಸಿರುವ ಜಾಹೀರಾತುಗಳಲ್ಲಿ ಸಿಗರೇಟ್ ಜಾಹಿರಾತು ಪ್ರಮುಖವಾದುದು.

ಕಳೆದ 50–60 ವರುಷಗಳಿಂದ ಪಾಶ್ಚಾತ್ಯ-ರಾಷ್ಟ್ರಗಳಲ್ಲಿ ಮತ್ತು ಭಾರತದಲ್ಲಿ ಸಹ-ಅರ್ಬುದ ರೋಗ (ಕ್ಯಾನ್ಸರ್) ಪ್ರಬಲವಾಗಿರುವುದು ವೈದ್ಯರಿಗೆ ದೊಡ್ಡ ಸಮಸ್ಯೆಯಾಗಿದೆ. ಜನರು ತಿನ್ನುವ ಆಹಾರ, ಬಹುಮಟ್ಟಿಗೆ ಕ್ಯಾನ್ಸರ್ ರೋಗಕ್ಕೆ ಕಾರಣವಾಗಿದೆಯೆಂದು ಸ್ಥಾಪಿತವಾಗಿದೆ. ರೋಂ ನಗರದಲ್ಲಿ ಕೆಲವು ವರುಷಗಳ ಕೆಳಗೆ ನಡೆದ ಜಾಗತಿಕ ಕ್ಯಾನ್ಸರ್ ಪ್ರವೀಣರ ವಿಚಾರ ವಿನಿಮಯ ಸಭೆಯಲ್ಲಿ "ಪಾಶ್ಚಾತ್ಯರ ಆಹಾರ ವಸ್ತುಗಳಲ್ಲಿ ಉಪಯೋಗಿಸುವ ಬಣ್ಣಗಳು, ಆಹಾರವನ್ನು ಗಟ್ಟಿಯಾಗಿ ಅಥವಾ ಘನೀಭೂತವಾಗಿ ಮಾಡುವ ವಸ್ತು

ಗಳು ಸಿಹಿ ಮಾಡುವ ವಸ್ತುಗಳು, ಆಹಾರವನ್ನು ರಕ್ಷಿಸುವ ಕ್ರಮ ಇವೆಲ್ಲ ಜನರಲ್ಲಿ ಕ್ಯಾನ್ಸರನ್ನು ಬೆಳೆಸುತ್ತಿವೆ "ಯೆಂದೂ ಬೆಳಸುವ ಮೂಲಭೂತ ಶಕ್ತಿಯುಳ್ಳವಾಗಿವೆಯೆಂದೂ ಸಿದ್ಧಾಂತವಾಯಿತು. ಈ ಅಪಾಯದ ವಿಷಯದಲ್ಲಿ ಸಾರ್ವಜನಿಕರನ್ನು ಎಚ್ಚರಿಸಬೇಕೆಂದು ಸಭೆ ರಾಷ್ಟ್ರಗಳಿಗೆಲ್ಲ ಕರೆಕೊಟ್ಟಿತು. ಅನೇಕ ಪತ್ರಿಕೆಗಳು ಇದನ್ನು ಪುಷ್ಟೀಕರಿಸಿ–ಅಮೇರಿಕದ ನ್ಯೂ ಲೀಡರ್–ಅಂಕಿ ಅಂಶಗಳನ್ನೆಲ್ಲ ಒದಗಿಸಿತು.

ಇವೆಲ್ಲವುಗಳಿಂದ ಒಂದು ಅಂಶ ಸ್ಪಷ್ಟವಾಗುತ್ತದೆ. ಆಹಾರದ ವಿಷಯದಲ್ಲಿ ಹಿಂದುಗಳ ಅಥವಾ ಬ್ರಾಹ್ಮಣರ ಮಾರ್ಗವನ್ನು ಅನುಸರಿಸುವುದು ಉತ್ತಮ. ಈಚೆಗೆ ಆ ಸಂಗಡದವರೇ ಅದನ್ನು ಅನುಸರಿಸದಿರುವುದು ತುಂಬ ಶೋಚನೀಯ. ಆ ನಿಯಮವೆಂದರೆ ಆಗಲೇ ಮನೆಯಲ್ಲಿ ಅಡಿಗೆ ಮಾಡಿದ ಆಹಾರವನ್ನು ಬಿಸಿಯಾಗಿ ತಿನ್ನುವುದು; ಮಿಕ್ಕ ಆಹಾರವನ್ನು ಟಿನ್‌ನಲ್ಲಿ ಹಾಕಿರಲಿ ಅಥವಾ ಹಾಕದಿರಲಿ ತಿನ್ನದಿರುವುದು. ವೈಜ್ಞಾನಿಕ ಸತ್ಯವೇನೆಂದರೆ ಹೆಚ್ಚಾಗಿಯೋ ಕಡಿಮೆಯಾಗಿಯೋ ವಿಷವನ್ನೂ ಬೆರಸದಿದ್ದರೆ, ಆಹಾರ ವಸ್ತುಗಳನ್ನು ಕೆಲವು ಕಾಲವಾದರೂ ಇಟ್ಟು ರಕ್ಷಿಸಲು ಸಾಧ್ಯವಾಗುವುದಿಲ್ಲ.

ಸರ್ಕಾರಗಳ ವೈಜ್ಞಾನಿಕ ಶಾಖೆಯ ವಿಜ್ಞಾನಿಗಳು, ವಿಷಯಗಳನ್ನು ಪರೀಕ್ಷಿಸಿ ಸಾರ್ವಜನಿಕರಿಗಾಗಿ ಪ್ರಕಟಿಸಿ ಕಾರ್ಯ ಮಾಡಬಹುದೆಂದು ನಿರೀಕ್ಷಿಸಿದರೆ ಅದು ಆಗದ ಮಾತು. ಅಮೇರಿಕದ ಫೆಡರಲ್ ಫುಡ್ ಮತ್ತು ಡ್ರಗ್ ಆ್ಯಕ್ಟ್ ಶಾಖೆಯಲ್ಲಿ ನಲವತ್ತು ವರುಷಗಳಿಂದ, ಈ ಭಾಗದಲ್ಲಿ ಕಾರ್ಯ ನಡೆದಿದೆ. ಇತರ ರಾಷ್ಟ್ರಗಳಲ್ಲಿರುವ ವಿಜ್ಞಾನಿಗಳು ಅವರಿಗಿಂತ ಹೆಚ್ಚು ದಕ್ಷರೂ–ದಕ್ಷರಾಗಿದ್ದರೂ ವೈಜ್ಞಾನಿಕ ಉಪಕರಣಗಳುಳ್ಳವರೂ–ಆಗಿರುವರೆಂದು ಹೇಳಲು ಸಾಧ್ಯವಿಲ್ಲ. " ವ್ಯಾಪಾರಿಗಳೂ ತಯಾರಕರೂ ದಿನದಿನವೂ ಟಿನ್‌ಗಳಲ್ಲಿ ತುಂಬುವ ಆಹಾರಗಳಿಗೆ ಹೊಸ ಹೊಸ ಕೃತಕ ವಸ್ತುಗಳನ್ನು ಸೇರಿಸುತ್ತಲೇ ಹೋಗುತ್ತಿದ್ದಾರೆ. ಅವುಗಳನ್ನು ಪರೀಕ್ಷಿಸುವುದೆಂದರೆ ಅಸಾಧ್ಯ ಊಹನಾತೀತ " ಎಂದು ಫೆಡರಲ್ ವಿಜ್ಞಾನಿಗಳೇ ಹೇಳುತ್ತಾರೆ. ಆದುದರಿಂದ ಆಗಲೇ ಬೇಯಿಸಿದ ಆಹಾರವನ್ನೇ ತಿನ್ನುವುದು ಉತ್ತಮ ಮಾರ್ಗ.

ಕ್ಯಾನ್ಸರ್ ವಿಷಯ ಹೇಳುವಾಗ ಸ್ವಾಭಾವಿಕವಾಗಿಯೇ ಸಿಗರೇಟ್ ಹೊಗೆಸೊಪ್ಪಿನ ವಿಚಾರ ಬರುತ್ತದೆ. ಕ್ಯಾನ್ಸರಿಗೂ ಸಿಗರೇಟಿಗೂ ಇರುವ ನಿಕಟ ಬಾಂಧವ್ಯದ ವಿಷಯದಲ್ಲಿ ವೈಜ್ಞಾನಿಕ ಒಪ್ಪಿಗೆ ಬೆಳೆಯುತ್ತಿರುವುದನ್ನು ನೋಡಿ, ಸಿಗರೇಟ್ ತಯಾರಕರೂ ವ್ಯಾಪಾರಿಗಳೂ ತಯಾರಕರೂ, ಆ ವಿಷಯದ ಇತರ ಹಿತಾಸಕ್ತರೂ ಸಿಗರೇಟ್ ಅಭ್ಯಾಸಿಗಳಿಗೆ " ಫಿಲ್ಟರ್ ಟಿಪ್ಡ್ " (ವಿಷಶೋಧಕ) ಸಿಗರೇಟುಗಳನ್ನು ಸೇದುವುದರಲ್ಲಿ ಯಾವ ಅಪಾಯವೂ ಇಲ್ಲವೆಂದು " ಹೇಳತೊಡಗಿದರು. ಅಭ್ಯಾಸಿ ಸಿಗರೇಟ್ ಚಟದವರಿಗೆ ಇದು ಕೆಡುಕು ಎಂದು ತೋರಿದರೂ ಕೆಡುಕಲ್ಲ ಎಂದು ಸ್ಥಾಪಿಸುವುದು ಸಮಾಧಾನದ ಸಂಗತಿ. ಅದನ್ನು ಅರಿತೂ ಅವರು " ಸಿಗರೇಟು ಅಪಾಯವಲ್ಲ " ಎಂದು ಯಾರಾದರೂ ಹೇಳಿದರೂ, ಸುಳ್ಳು ವೈದ್ಯರು ಹೇಳಿದರೂ, ಅಷ್ಟೇ ಸಾಕೆಂದು ನಂಬಿ ತಮ್ಮ ಭಯವನ್ನು ಶಾಂತಗೊಳಿಸಲು ಬಯಸುವರೆಂಬುದು ಸಿಗರೇಟ್ ತಯಾರಕರಿಗೆ ಗೊತ್ತು. ಫಿಲ್ಟರ್

ಟಿಪ್ ಮಾಡುವುದರಿಂದ ಉಂಟಾಗುವ ನಿಕೋಟೈನ್ ಮತ್ತು ಟಾರ್ ವ್ಯತ್ಯಾಸದಿಂದ ಸಿಗರೇಟು ಮೊದಲು ಮಾಡುತ್ತಿದ್ದ ದೈಹಿಕ ದುಷ್ಟ ಪರಿಣಾಮದಲ್ಲಿ ಯಾವ ವ್ಯತ್ಯಾಸವೂ ಆಗುವುದಿಲ್ಲವೆಂದು ಅಮೇರಿಕನ್ ಮೆಡಿಕಲ್ ಅಸೋಸಿಯೇಶನ್ ಪ್ರಕಟಿಸಿದೆ. "ಈ ಫಿಲ್ಟರ್ಡ್ ಟಿಪ್‌ನಿಂದ ಸಹಾಯವಾಗುತ್ತದೆಯೇ ? ಉಪಯೋಗವಿದೆಯೇ ?" ಎಂದು ಕೇಳಿದುದಕ್ಕೆ ನ್ಯೂ ಆರ್ಲಿಯಾನ್ಸ್‌ನ ಪ್ರಸಿದ್ಧ ಡಾಕ್ಟರ್ ಆಲ್ಟನ್ ಓಚ್‌ಸ್ನರ್ (Alton Ochsner) "ಹೌದು ಸಿಗರೇಟನ್ನು ಹೆಚ್ಚಾಗಿ ಮಾರಲು ಇದರಿಂದ ಸಹಾಯವಾಗುತ್ತದೆ„ ಎಂದರು. ಫಿಲ್ಟರ್ ಮಾಡುವುದರಿಂದ ದೊರೆಯಬಹುದಾದ ರಕ್ಷಣೆಯನ್ನು ಅರಿಯಲು, ಅದರಿಂದ ಎಷ್ಟು ಭಾಗ ವಿಷ ಕಡಿಮೆಯಾಗುತ್ತದೆ ಮತ್ತು ಎಷ್ಟು ಭಾಗ ಹೊಗೆಸೊಪ್ಪು ಉಪಯೋಗವಾಗುತ್ತದೆ ಎಂಬುದನ್ನು ಅರಿತರೆ ಸಾಧ್ಯ. ಬ್ರಿಟಿಷ್ ಮೆಡಿಕಲ್ ಜರ್ನಲ್‌ನಲ್ಲಿ ಡಾ|| ವಿಂಡರ್ಸ್ ಹೀಗೆ ಬರೆದರು. "ಫಿಲ್ಟರ್ ಮಾಡುವುದರಿಂದ ಶೇಕಡ 40 ವಿಷ, ಕಡಿಮೆಯಾಗಬಹುದು. ಅದರೆ ಹೊಗೆಸೊಪ್ಪಿನಿಂದ ಬೇರೆ ವಿಧವಾಗಿ ವಿಷ ವೃದ್ಧಿಯಾಗದಂತೆ ಅದನ್ನು ಕತ್ತರಿಸುವುದು, ಪ್ಯಾಕ್ ಮಾಡುವುದು ನಡೆಯಬೇಕು. ಫಿಲ್ಟರ್ ಆಗಿದೆ ಎಂದು ಸೇದುವವರ ಮನಸ್ಸಿಗೆ ತೃಪ್ತಿಯನ್ನುಂಟುಮಾಡಿ, ಅವರ ಚಟವನ್ನು ತೃಪ್ತಿಪಡಿಸುವುದಕ್ಕಾಗಿ ಕೆಳದರ್ಜೆಯ ಹೊಗೆಸೊಪ್ಪನ್ನು ಈಗ ಉಪಯೋಗಿಸುತ್ತಿದ್ದಾರೆ. ಇದರಿಂದ "ಫಿಲ್ಟರ್ಸ್"ನ ಪ್ರಯೋಜನ ದೊರೆಯುವುದಿಲ್ಲ.

ಕ್ಯಾನ್ಸರ್ ಹರಡುವುದರಲ್ಲಿ ಸಿಗರೇಟಿನ ಪಾತ್ರವೇನು ಎಂಬ ವಿಷಯದಲ್ಲಿ ಸ್ಪಷ್ಟವಾದ ಸಾಕ್ಷ್ಯ ಎಂದಿಗೂ ಬರದೆ ಇರಬಹುದು. ಆದರೆ ಈಗಾಗಲೇ ತಿಳಿದಿರುವ ಅಂಕಿ ಅಂಶಗಳು ವಿವೇಕಿಗಳು ಎಚ್ಚೆತ್ತುಕೊಳ್ಳಲು ಸಾಕು. ಸಂಶಯದ ಲಾಭ, ಸಿಗರೇಟಿಗೆ ದೊರೆಯಬಾರದು ; ಆದರೆ ಜನರಿಗೆ ದೊರೆಯಬೇಕು. ಎಲ್ಲಿಯವರೆಗೆ ವಿಜ್ಞಾನವು "ಸಿಗರೇಟಿನಿಂದ ಅಪಾಯವಿದೆ ಎಂಬ ವಿಷಯ ನಿಸ್ಸಂಶಯವಾಗಿಲ್ಲ ಎಂದು ಹೇಳುತ್ತದೆಯೋ" ಅಲ್ಲಿಯವರೆಗೆ ವಿಜ್ಞಾನದಿಂದ ಜನಕ್ಕೆ ಸಹಾಯ ದೊರೆಯುವುದಿಲ್ಲ. ಯಾವುದಕ್ಕೂ ಪೂರ್ಣ ಸಾಕ್ಷ್ಯ ಬೇಕೆಂದರೆ ಸಾಧ್ಯವೇ ಇಲ್ಲ. ಆದರೆ ಸಿಗರೇಟು ಸೇದುವುದನ್ನು ಬಿಡುವುದರಿಂದ ಎಂದೆಂದಿಗೂ ಮಂಗಳವುಂಟು. ನಿಮ್ಮ ಬಾಯನ್ನು ವಿಷದ ಹೊಗೆಕೊಳವೆ ಮಾಡಿಕೊಳ್ಳುವುದಕ್ಕಿಂತ ಇನ್ನೂ ಉತ್ತಮವಾದ ಅನೇಕ ಮನೋರಂಜನೆಗಳಿವೆ. ಅಂತರ ರಾಷ್ಟ್ರೀಯ ಕ್ಯಾನ್ಸರ್ ಪ್ರವೀಣ ಇ. ಎ. ಗ್ರಹಾಂರವರು "ಸಿಡುಬನ್ನು ತಡೆಯಲು ದೇವಿ ಹಾಕಿಕೊಳ್ಳುವುದು ಸರಿ ಎಂಬುದಕ್ಕೆ ಎಷ್ಟು ಸಾಕ್ಷ್ಯಗಳಿವೆಯೋ ಸಿಗರೇಟಿನಿಂದ ಕ್ಯಾನ್ಸರ್ ಬರುತ್ತದೆ ಎಂಬುದಕ್ಕೆ ಅದಕ್ಕಿಂತ ಹೆಚ್ಚಾದ ಸಾಕ್ಷ್ಯಗಳಿವೆ" ಎನ್ನುತ್ತಾರೆ. ಅಮೇರಿಕ ಅಧ್ಯಕ್ಷರ ಹೃದಯ ಪರೀಕ್ಷಾ ವೈದ್ಯರು ಹೀಗೆ ಹೇಳುತ್ತಾರೆ. "ಹೊಗೆಸೊಪ್ಪು ಬಹಳ ಕೆಟ್ಟ ಗಿಡ. ಇದು ಜನರ ಹೊಟ್ಟೆಯನ್ನೂ, ಶ್ವಾಸಕೋಶಗಳನ್ನೂ ಅನವಶ್ಯಕವಾಗಿ ಉದ್ರೇಕಗೊಳಿಸುತ್ತದೆ. ರಕ್ತದ ಒತ್ತಡವನ್ನು ಹೆಚ್ಚಿಸುತ್ತದೆ. ಹೃದಯದ ಸಮತ್ವವನ್ನು ಅವ್ಯವಸ್ಥೆಗೊಳಿಸುತ್ತದೆ".

ವಯಸ್ಕರಾದ ಸಿಗರೇಟು ಕುಡುಕರು ಈ ವಿವೇಕಗಳಿಗೆಲ್ಲ ಲಕ್ಷ್ಯಮಾಡದೆ ಇರಬಹುದು. ಅದರೆ ಯುವಕರೂ ಭವ್ಯ ಭವಿಷ್ಯ ಜೀವನದ ಆಸೆಯುಳ್ಳವರೂ ಈ ಅಪಾಯವನ್ನು ಲಕ್ಷಿಸಲೇ ಬೇಕು. ನಮಗೆ ಮುಖ್ಯವಾಗಿರುವುದು ಮುಂದಲ ಪೀಳಿಗೆಯ ಅಭಿವೃದ್ಧಿ. ನಾವು ಯಾವ ಆಳವಾದ ಕೂಪಕ್ಕೆ ಬೀಳಲು ಓಡುತ್ತಿದ್ದೇವೆ ಎಂಬುದು ಯುವಕರಿಗೆ ತಿಳಿಯಬೇಕು. ಒಮ್ಮೆ ಪ್ರಾರಂಭಿಸಿದರೆ ಅನಂತರ ಬಿಡುವುದು ಬಹಳ ಕಷ್ಟ. ಒಂದು ಸಲ ಮಹಾತ್ಮ ಗಾಂಧೀಜಿಯವರನ್ನು ವಿದ್ಯಾರ್ಥಿಗಳು ಹೀಗೆ ಕೇಳಿದರು. “ ಜನರು -ಮುಖ್ಯವಾಗಿ ವಿದ್ಯಾರ್ಥಿಗಳು ಬಹಳವಾಗಿ ಬೀಡಿ, ಸಿಗರೇಟು ಸೇದುತ್ತಾರೆ. ನೀವು ಇದಕ್ಕಾಗಿ ಯಾಕೆ ಚಳುವಳಿ ಹೂಡುವುದಿಲ್ಲ ? ” ಗಾಂಧೀಜಿ “ ಬೀಡಿ ಚುಟ್ಟ ಸಿಗರೇಟುಗಳಿಂದ ಮದ್ಯಪಾನದಿಂದ ಅಗುವಷ್ಟೇ-ಆದರೆ ನಿಧಾನವಾಗಿ-ಕೇಡು ಸಂಭವಿಸುತ್ತದೆ. ಅದಕ್ಕಾಗಿ ಚಳುವಳಿ ಮಾಡಬೇಕಾದುದು ಸರಿ. ಆದರೆ ನನಗೆ ಸಮಯವಿಲ್ಲ. ನಾನೂ ಬಾಲ್ಯದಲ್ಲಿ ಒಂದೆರಡು ಸಲ ಕದ್ದು ಸಿಗರೇಟು ಸೇದಿದೆ. ಯೋಚಿಸಿಕೊಂಡರೆ ಈಗಲೂ ನಾಚಿಕೆಯಾಗುತ್ತದೆ. ಆದರೆ ಈಗಿನ ವಿದ್ಯಾರ್ಥಿಗಳು ಬಹಿರಂಗವಾಗಿಯೇ ಸೇದುತ್ತಾರೆ. ಇದು ಫ್ಯಾಶನ್ ಆಗಿದೆ. ಸ್ವದೇಶಿಯಾಗಲಿ ವಿದೇಶಿಯಾಗಲಿ ಹೊಗೆಸೊಪ್ಪನ್ನು ಪೂರ್ತಾ ಬಿಡಬೇಕು ” ಎಂದರು.

ಮದ್ಯ, ಸಿಗರೇಟ್ ಟಿನ್‌ಗಳಲ್ಲಿ ಶೇಖರಿಸಿಟ್ಟ ಆಹಾರ ಇವುಗಳನ್ನು ಹತ್ತಿರ ಸೇರಿಸಬಾರದು. ಬಿಸಿಯಾಗಿ ಆಗತಾನೇ ಮಾಡಿದ ಆಹಾರವನ್ನು ಸೇವಿಸುವುದು ಉತ್ತಮ. ವಿನೋದ ಮನರಂಜನೆ ಇವು ದೇಹಶ್ರಮದ ಕಾಯಕ. ಆಟ ಪಾಠ, ಗ್ರಂಥ ವ್ಯಾಸಂಗ, ಬುದ್ಧಿ ಚಮತ್ಕಾರ ಸ್ವಾರಸ್ಯ ಸಂಭಾಷಣೆಗಳಿಂದ ದೊರೆಯಬೇಕು. ಈ ವಿನೋದಗಳಿಂದ ಮನುಷ್ಯನ ದೇಹ ಬುದ್ಧಿಗಳು ಪೂರ್ಣವಾಗಿ ಬೆಳೆಯುತ್ತವೆ. ಗುಣವಾಗದಿರುವ ರೋಗಗಳು ದೇಹದಲ್ಲಿ ಮನೆ ಮಾಡಿಕೊಳ್ಳುವುದು ತಪ್ಪುತ್ತದೆ. ಅಮೇರಿಕ ಸಂಯುಕ್ತ ಸಂಸ್ಥಾನದ ರಾಷ್ಟ್ರೀಯ ಕ್ಯಾನ್ಸರ್ ಸಲಹಾ ಮಂಡಲಿಯು “ ಶ್ವಾಸಕೋಶ ಕ್ಯಾನ್ಸರ್‌ನಿಂದ ಈಗ ಮುವತ್ತು ವರ್ಷಗಳಿಂದ ಸಾಯುತ್ತಿದ್ದುದಕ್ಕಿಂತ ಹತ್ತರಷ್ಟು ಹೆಚ್ಚಾಗಿ” ಈಗ ಸಾಯುತ್ತಿದ್ದಾರೆಂದು ತಿಳಿಸಿವೆ. ಇವೆಲ್ಲ ನಮಗೆ ಎಚ್ಚರಿಕೆಯಾಗಬೇಕು.

ಮಾವಿನಕುಳಿ ಶ್ರೀನಿವಾಸ

ಇಂಡಿಯಾದ ಯುವಜನ-ಒಂದು ಪಕ್ಷಿನೋಟ

ಸ್ವಾತಂತ್ರ್ಯ ಬಂದಿತೆಂದು ಹೇಳಲಾದ ಇಂಡಿಯಾದಲ್ಲಿ ಯುವಜನರ ಸಂಖ್ಯೆ ಗಾತ್ರದಲ್ಲಿ ಹೆಚ್ಚುತ್ತಾ ಬಂದಿರುವುದನ್ನು ಅಲ್ಲಗಳೆಯುವಂತಿಲ್ಲ. ಯುವಜನ ಇಂಡಿಯಾಕ್ಕೆ ಒಂದು ಸಮಸ್ಯೆ ಎನ್ನುವುದಕ್ಕಿಂತ ಇಂಡಿಯಾದ ಪರಿಸ್ಥಿತಿಗಳು ಯುವಜನತೆಗೆ ಒಂದು ಸವಾಲು ಎಂಬುದು ನಿಸ್ಸಂಶಯ. ಪ್ರಜಾಪ್ರಭುತ್ವದ ಹೆಸರಿನಲ್ಲಿ ಇಂಡಿಯಾದ ರಾಜಕೀಯ ಹೇಗೆ ಗುತ್ತೇದಾರಿಕೆ ಮತ್ತು ಪಾಳೇಗಾರಿಕೆಯ ಮೂಲಕ ಜನರನ್ನು ವಂಚಿಸುತ್ತಾ ಬಂದಿದೆ ಎಂಬುದೂ ಸರ್ವ ವಿದಿತ. ಕಾರ್ಲ್‌ಮಾರ್ಕ್ಸ್‌ನ ತತ್ವವನ್ನು ಅನ್ವಯಿಸಿ ಜಾತಿ ಮೂಲವಾದ ಈ ರಾಜಕೀಯ ವ್ಯವಸ್ಥೆಯನ್ನು ಬದಲಾಯಿಸುವುದು ಪ್ರಸ್ತುತದಲ್ಲಿ ಸಾಧ್ಯವಿಲ್ಲ. ಆದರೆ ಆರ್ಥಿಕ ಶೋಷಣೆಯಿಂದ ಮುಕ್ತವಾದ ಸಮಾಜ ನಿರ್ಮಾಣವಾಗಬೇಕೆನ್ನುವ ಈ ತತ್ವದ ಬಿಸಿ ಇಂಡಿಯಾವನ್ನು ಮುಟ್ಟದಿರುವುದು ಅಚ್ಚರಿಯ ಸಂಗತಿ. ಇದರಿಂದಾಗಿ ಅನಿವಾರ್ಯ ಸನ್ನಿವೇಶಗಳಲ್ಲಿ ಹಿಂಸೆ ಮತ್ತು ಕ್ರೌರ್ಯಗಳು ಅಗತ್ಯ ಎನ್ನುವವರು ಕೂಡ, ಇಂಡಿಯಾ ರೌಡಿಸಂ ಮತ್ತು ಗೂಂಡಾಯಿಸಂಗಳಿಂದ ಕೂಡಿದ ಯುವ ಜನರಿಂದ ಹೆಚ್ಚಾಗಿ ತುಂಬಿಕೊಳ್ಳುತ್ತಿರುವುದನ್ನು ಒಪ್ಪುತ್ತಾರೆ. ಈ ವಿಷಮ ಸ್ಥಿತಿಗೆ ಬಡತನದಿಂದ ನಿರುದ್ಯೋಗದ ತನಕ ಹಲವಾರು ಅಂಶಗಳನ್ನು ಹೆಸರಿಸಬಹುದು. ಆದರೂ ದುಡಿಮೆಯ ಅಗತ್ಯತೆ ಹಾಗೂ ಅವಕಾಶಗಳಿಂದ ವಂಚಿತರಾದ ಶೇಕಡಾ ೫೦ಕ್ಕಿಂತ ಹೆಚ್ಚು ಯುವಜನ ಶಕ್ತಿಯ ಅಪವ್ಯಯವಾಗುತ್ತಿದೆ ಎನ್ನುವುದು ಇಂಡಿಯಾದ ದುರಂತಗಳಲ್ಲಿ ಒಂದು.

ಅನಕ್ಷರತೆಯನ್ನು ಹೋಗಲಾಡಿಸುಕೊಳ್ಳುವಲ್ಲಿ ಸ್ವಲ್ಪಮಟ್ಟಿಗೆ ಯಶಸ್ಸನ್ನು ಸಂಪಾದಿಸಿಕೊಂಡ ಯುವಜನರು ಅದಕ್ಕೆ ಸರಿಯಾಗಿ ಅಸ್ಪೃಶ್ಯತೆ, ಬೆಳೆಯುತ್ತಿರುವ ಜನಸಂಖ್ಯೆ, ಜಾತಿಪದ್ಧತಿ, ಭಿಕ್ಷಾಟನೆ, ವೇಶ್ಯಾವೃತ್ತಿ, ಮದ್ಯಪಾನ, ಕೊಳಚೆ ಪ್ರದೇಶಗಳು, ಶಾರೀರಕ ಮತ್ತು ಮಾನವಿಕ ಅನಾರೋಗ್ಯ ಮುಂತಾದ ಹಲವಾರು ಸಾಮಾಜಿಕ ಸಮಸ್ಯೆಗಳ ಬಗ್ಗೆ ತಮ್ಮದೇ ಆದ ಅಭಿಪ್ರಾಯಗಳನ್ನು ರೂಢಿಸಿಕೊಳ್ಳುವುದರಲ್ಲಿ ವಿಫಲರಾಗಿದ್ದಾರೆ. ಮಿಗಿಲಾಗಿ, ಮೂಲಭೂತ ಅವಶ್ಯಕತೆಗಳಾದ ಅನ್ನ, ಬಟ್ಟೆ, ವಸತಿಗಳನ್ನು ಒದಗಿಸಿಕೊಡದ ಇಂದಿನ ಶಿಕ್ಷಣ ವ್ಯವಸ್ಥೆ ಮತ್ತು ಪ್ರಸ್ತುತ ಸಮಾಜ

ವ್ಯವಸ್ಥೆಯ ಪುನರ್ರಚನೆಗೆ ಪೂರಕ ಕ್ರಮಗಳನ್ನು ಕೈಗೊಳ್ಳುವುದರಲ್ಲಿ ಯುವಜನ ವಲಯಗಳಲ್ಲಿ ಅನಾಸಕ್ತಿ ಕಂಡುಬಂದಿದೆ. ಅವಿಭಕ್ತ ಕುಟುಂಬ ವ್ಯವಸ್ಥೆಯಿಂದ ಕೂಡಿದ ಹಳ್ಳಿಗಳಿಂದ ಸಾಲ ಮೂಲವಾಗಿ ವಿದ್ಯಾವಂತರಾಗಲು, ಸ್ಥಾನಮಾನಗಳಿಸಲು ನಗರಗಳಿಗೆ ವಲಸೆ ಬಂದ ಯುವಜನರಿಗೆ ಅರ್ಹತೆಗೆ ತಕ್ಕ ಉದ್ಯೋಗವಿರಲಿ, ಕನಿಷ್ಠ ಜೀವನೋಪಾಯಕ್ಕೂ ಅಗತ್ಯ ಉದ್ಯೋಗಗಳು ದೊರಕಿಲ್ಲ. ಅಲ್ಲದೆ ತಮ್ಮ ಕುಟುಂಬಗಳು ಛಿದ್ರ ವಿಚ್ಛಿದ್ರಗೊಳ್ಳುವುದನ್ನು, ಜಮೀನುಗಳನ್ನು ತುಂಡು ತು ಡಾಗುವುದನ್ನು ನೋಡಿ ಹಳ್ಳಿಗಳಿಗೆ ಮರಳಲಾಗದೆ ನಗರಗಳಲ್ಲೇ ಬೀಡುಬಿಟ್ಟು ಅಲೆಮಾರಿಗಳಂತೆ ತಿರುಗುತ್ತಿರುವುದು ಸ್ಲೋಗನ್‌ಗಳು ಮತ್ತು ಇಸಂಗಳಿಂದ ತುಂಬಿಕೊಂಡ ಇಂಡಿಯಾದ ಕೊಳೆತ ವ್ಯವಸ್ಥೆಯ ಪ್ರತೀಕಗಳಲ್ಲಿ ಒಂದು.

ಇಂಡಿಯಾದ ಅಧಿಕಾರಶಾಹಿ ಮತ್ತು ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಉಳ್ಳವರ ಮತ್ತು ಇಲ್ಲದವರ ನಡುವಣ ಅಂತರ ಕಡಿಮೆಯಾಗಿಲ್ಲ, ನಿಜ. ಆದರೆ, ಕಾರ್ಮಿಕರ ದಿನಗೂಲಿಯಿಂದ ಹಿಡಿದು ವಿವಿಧ ಕ್ಷೇತ್ರಗಳಲ್ಲಿ ವಿವಿಧ ಹುದ್ದೆಗಳಲ್ಲಿ ಹಾಗೂ ಒಂದೇ ಕ್ಷೇತ್ರದಲ್ಲಿ ಒಂದೇ ಬಗೆಯ ಹುದ್ದೆಗಳಲ್ಲಿ ದುಡಿಯುವ ವಿವಿಧ ಜನರ ನಡುವಣ ವೇತನದ ಅಂತರ. ಭ್ರಷ್ಟ ಆರ್ಥಿಕ ವ್ಯವಸ್ಥೆಗೆ ಇನ್ನಷ್ಟು ರಾಡಿಯನ್ನು ಒದಗಿಸಿದೆ. ದುಡಿಮೆಯಿಂದ ಗಳಿಕೆಯೇ ಪ್ರಧಾನವಾದ, ಈ ಗಳಿಕೆಯನ್ನು ತನ್ನ ಸ್ವಂತಕ್ಕೆ ಇರಿಸಿಕೊಳ್ಳದ, ಯಾರೂ ಸೋಮಾರಿಯಾಗಿರಲು ಅವಕಾಶವಿಲ್ಲದ ಹಾಗೂ ಯಾವ ದೊಡ್ಡ ಸಮಸ್ಯೆಯೂ ಇಲ್ಲದ ಚೈನಾದಿಂದ ನಮ್ಮ ಯುವಜನ ಪಾಠ ಕಲಿಯಬೇಕಾಗಿದೆ. ತುತ್ತು ಅನ್ನಕ್ಕಿಂತ, ಮಾನ ಮರ್ಯಾದೆಗಳಿಗಿಂತ ಪ್ರತಿಷ್ಠೆ ಹಾಗೂ ಸ್ಥಾನಮಾನಗಳಿಗಾಗಿ ಹಣಕ್ಕೆ ಪ್ರಾಧಾನ್ಯತೆ ನೀಡಿದ್ದರಿಂದ ಹಣದುಬ್ಬರ ಹೆಚ್ಚುತ್ತಾ ಬಂದಿದೆ. ಹೀಗಾಗಿ ಇದರ ಮೂಲಕ ಇತರ ಸಮಸ್ಯೆಗಳನ್ನು ಹುಟ್ಟು ಹಾಕುತ್ತಾ ಬಂದ ಇಂಡಿಯಾದ ಪ್ರಸ್ತುತ ಸಮಾಜ ವ್ಯವಸ್ಥೆಯೊಂದಿಗೆ ರಾಜಿಯಾಗುವ ಆಲೋಚನೆಯನ್ನು ನಮ್ಮ ಯುವಜನ ಇನ್ನಾದರೂ ಕೈ ಬಿಡಬೇಕು. ಕ್ರಾಂತಿಯೊಂದೇ ಇವುಗಳಿಗೆಲ್ಲ ಮದ್ದು, ನಿಜ. ಆದರೆ, ಕೇವಲ ರಾಜಕೀಯ ಹಾಗೂ ಸ್ವಲಾಭಕ್ಕಾಗಿ ಸ್ವಾರ್ಥಮೂಲವಾದ ಸಣ್ಣ ಅಥವಾ ದೊಡ್ಡ ಚಳವಳಿ, ಹೋರಾಟಗಳೆಲ್ಲ ಕ್ರಾಂತಿಗಳಾಗಲು ಸಾಧ್ಯವಿಲ್ಲ, ಹಾಗೆ ನೋಡಿದರೆ, ಇಂಡಿಯಾದಂಥ ಕರಾಳ ವ್ಯವಸ್ಥೆಯಲ್ಲಿ ಜೀವ ಹಿಡಿದುಕೊಂಡಿರುವ ಮುಗ್ಧ ಜನರನ್ನು ಮೂರ್ಖರನ್ನಾಗಿ ಮಾಡುತ್ತಾ ಈ ಬಗೆಯ ಅರ್ಥಹೀನ 'ಕ್ರಾಂತಿ'ಗಳು ನಡೆಯುತ್ತಲೇ ಬಂದಿವೆ.

ಸುಧಾರಣೆಯ ಹೆಸರಿನಲ್ಲಿ ದೊಡ್ಡ ದೊಡ್ಡ ಯೋಜನೆಗಳನ್ನು ಹಮ್ಮಿಕೊಂಡು ಅಲ್ಲಿಂದಿಲ್ಲಿಗೂ ವ್ಯಾಪಕವಾದ ಭ್ರಷ್ಟಾಚಾರಕ್ಕೆ ಮಾಧ್ಯಮವಾಗಿ ಹೊಸ ಹೊಸ ತಂತ್ರಗಳನ್ನು ರೂಢಿಸಿಕೊಳ್ಳುತ್ತ ಈಗ ಒಂದು ತಿರುವಿನ ಘಟ್ಟದಲ್ಲಿ ಬಂದು ನಿಂತಿರುವ ಇಂಡಿಯಾದ ರಾಜಕಾರಣವನ್ನು ನಮ್ಮ ಯುವಜನ ವಿಶಾಲ ನಿಟ್ಟಿನಲ್ಲಿ ಅರ್ಥೈಸಬೇಕಾಗಿದೆ. ಆದರೂ, ಯಾವ ಗಳಿಗೆಯಲ್ಲಿ ಏನಾಗುತ್ತದೆ ಎಂದು ಹೇಳಲು ಬಾರದ,

ಮಾನವೀಯ ಮೌಲ್ಯಗಳನ್ನು ಸುಲಭವಾಗಿ ಗಾಳಿಯಲ್ಲಿ ತೇಲಿಸಿಕೊಂಡು ಹೋಗುವ ಇಂಡಿಯಾದ ಬಣ್ಣ ಬದಲಾಯಿಸುವ ಕೋಡಂಗಿ ವೇಷದ ರಾಜಕಾರಣವನ್ನು ವಿಶ್ಲೇಷಿಸುವುದು ಅಷ್ಟು ಸುಲಭವಲ್ಲ. ಕೆಲವೊಮ್ಮೆ ಈ ಬಗೆಯ ವಿಶ್ಲೇಷಣೆಗಳು ಯುವಜನರ ವಿಚಾರಧಾರೆಯನ್ನೇ ಮಂಕುಗೊಳಿಸಿ ಅದರ ಪರಿಸ್ಥಿತಿಯನ್ನು ಮತ್ತಷ್ಟು ಅಸಹನೀಯಗೊಳಿಸಿದೆ ಎಂಬುದು ನಿರ್ವಿವಾದ. ಅಲ್ಲದೆ, ಇಂಡಿಯಾದ ಬುದ್ಧಿ ಜೀವಿಗಳು ಅದರಲ್ಲೂ ಹಿಂದುಳಿದ ವರ್ಗಗಳಿಂದ ಬಂದ ಬುದ್ಧಿಜೀವಿಗಳು ಮತ್ತು ಮುಖಂಡರು ಹೇಗೆ ತಮ್ಮ ಬರವಣಿಗೆ ಮತ್ತು ಮಾತುಗಳ ಮೂಲಕ ತಮ್ಮ ನವಪೀಳಿಗೆಯನ್ನು ಮೋಸಗೊಳಿಸಿದ್ದಾರೆ ಎಂಬುದೂ ಒಂದು ಹಳೆಯ ಕಥೆ.

ದಲ್ಲಾಳಿಗಳ ರಾಜ್ಯವಾದ ಇಂಡಿಯಾದಲ್ಲಿ ದಲ್ಲಾಳಿಗಳಿಂದ ಮಾತ್ರವೇ ಸ್ಥಿರವಾಗಿ ಉಳಿಯುವ ಆಡಳಿತಯಂತ್ರ ನಮ್ಮ ಯುವಜನರ ಆಶೋತ್ತರಗಳನ್ನು ಈಡೇರಿಸುತ್ತದೆ ಎನ್ನುವ ನಂಬಿಕೆ ಹುಸಿಯಾಗಿದೆ. ಕೃಷಿ ಮತ್ತು ಕೈಗಾರಿಕಾ ಪ್ರಧಾನವಾದ ಸಂಪನ್ಮೂಲಗಳು ಹೇರಳವಾಗಿದ್ದರೂ ಕೂಡ ಕೃಷಿಗೆ ಕೊಟ್ಟ ಪ್ರಾಮುಖ್ಯತೆಯ ಸರಿಯಾದ ಉಪಯೋಗ ಮಾಡದಿರುವುದು, ನಗರಗಳಲ್ಲಿ ದೊಡ್ಡ ಕೈಗಾರಿಕೆಗಳ ಬದಲಾಗಿ ಗ್ರಾಮೀಣ ಪ್ರದೇಶಗಳ ಆಯಕಟ್ಟುಗಳಲ್ಲಿ ಸಣ್ಣ ಸಣ್ಣ ಕೈಗಾರಿಕೆಗಳನ್ನು ಸ್ಥಾಪಿಸಿ ಯುವಜನರ ಉದ್ಯೋಗಾವಕಾಶಗಳನ್ನು ಸೃಷ್ಟಿ ಮಾಡದಿರುವುದು; ಉತ್ಪಾದನೆಗೆ ಸಂಚಕಾರ, ನಿರುದ್ಯೋಗ ಮತ್ತು ಹಣದುಬ್ಬರ ಹೆಚ್ಚುವುದಕ್ಕೆ ಮೂಲಕಾರಣಗಳು. ಪ್ರಸ್ತುತ ಸಮಾಜ ವ್ಯವಸ್ಥೆಯಲ್ಲಿ ಆಮೂಲಾಗ್ರವಾಗಿ ಬದಲಾವಣೆ ಬೇಕು ಎನ್ನುವ ಯುವಜನ ಇಂಡಿಯಾದ ಕೊಳೆತ ಅರ್ಥವ್ಯವಸ್ಥೆಯಲ್ಲಿ ಮೂಲಭೂತ ಬದಲಾವಣೆಯಾಗಬೇಕು ಎನ್ನುವುದನ್ನು ಒಪ್ಪಿಕೊಳ್ಳಲು ಸಿದ್ಧರಿರಬೇಕು.

ಪ್ರಸ್ತುತ ಅರ್ಥವ್ಯವಸ್ಥೆ ಯುವಜನತೆಯನ್ನು ಇಬ್ಭಾಗಮಾಡಿರುವುದು ಪಟ್ಟಭದ್ರ ಹಿತಾಸಕ್ತಿಗಳಿಗೆ ಒಂದು ವರವಾಗಿ ಪರಿಣಮಿಸಿದೆ. ಒಂದು: ಆರ್ಥಿಕ ಅನುಕೂಲವುಳ್ಳ ಕುಟುಂಬಗಳಿಂದ ಬಂದು ಶೋಷಕರಾಗುತ್ತಿರುವ ಯುವಜನವರ್ಗ; ಇನ್ನೊಂದು: ಬಡ ಕುಟುಂಬಗಳಿಂದ ಬಂದು ಶೋಷಿತರಾಗುತ್ತಿರುವ ಯುವಜನ ವರ್ಗ. ಈ ಎರಡು ವರ್ಗಗಳ ನಡುವೆ ತ್ರಿಶಂಕು ಸ್ಥಿತಿಯಲ್ಲಿ ನೋವಿನಲ್ಲಿ ನಲಗುವ ಮತ್ತೊಂದು ವರ್ಗ—ಮಧ್ಯಮ ಯುವಜನ ವರ್ಗ. ಮೊದಲನೆಯ ವರ್ಗ ಅಟ್ಟಹಾಸದಿಂದ ಗುಂಡಾಗಿರಿ ನಡೆಸುತ್ತದೆ. ಎರಡನೆಯ ವರ್ಗ ಅತೃಪ್ತಿ, ಅಸಹಾಯಕತೆಗಳಿಂದ ಗೂಂಡಾಗಿರಿಗೆ ಇಳಿಯಲು ಹವಣಿಸುತ್ತದೆ. ಹೀಗೆ ಬಂಡವಾಳ ಹೆಚ್ಚಾಗಿರುವ ಕಡೆಗಳಲ್ಲಿ ಯುವಜನರ ಬಂಡಾಯ ಹೆಚ್ಚುತ್ತಾ ಹೋಗಿದೆ. ಈ ಬಗೆಯ ಬಂಡವಾಳದಿಂದಲೇ ಚಾಲೂ ಆಗುತ್ತಿರುವ ಇಂಡಿಯಾದ ಆಡಳಿತಯಂತ್ರ ಈ ಬಂಡಾಯವನ್ನು ಹತ್ತಿಕ್ಕುವ ಕ್ರಮಗಳನ್ನು ಕೈಗೊಳ್ಳುತ್ತಾ ಹೋಗಿದೆ. ಯುವಜನರನ್ನು ಆಟವಾಡಿಸುವ ಈ ಬಗೆಯ ನಾಟಕಕ್ಕೆ ಅಂತಿಮ ತೆರೆ ಬೀಳಬೇಕಾಗಿದೆ. ಮಧ್ಯಮ ವರ್ಗದ ಯುವಜನ ಕೆಳವರ್ಗದ ಯುವಜನರೊಂದಿಗೆ ಸಂಘಟಿತರಾಗಬೇಕಾದರೆ ಪಟ್ಟಭದ್ರ ಹಿತಾಸಕ್ತಿಗಳಿಂದ ತಪ್ಪಿಸಿಕೊಂಡು

ಹೊರಬರಬೇಕು. ಜೊತೆಗೆ ಮೇಲ್ವರ್ಗದ ಯುವಜನರನ್ನು ತಮ್ಮ ಕಡೆಗೆ ಸೆಳೆದು ಕೊಳ್ಳುವ ತೀವ್ರ ಪ್ರಯತ್ನಗಳನ್ನು ಮುಂದುವರಿಸಬೇಕು. ಆಗ ಮಾತ್ರ ನಿಜವಾದ ಅರ್ಥದಲ್ಲಿ ಬದಲಾವಣೆ ಎಂಬ ಮಾತಿಗೆ ಬೆಲೆ ಬಂದು ಇಂಡಿಯಾದ ಯುವಜನರ ಬದುಕಿಗೆ ಹೊಸ ಆಯಾಮ ಒದಗುತ್ತದೆ.

ಪಿ. ಆರ್. ತಿಪ್ಪೇಸ್ವಾಮಿ

ಕಲಾವಿದ ಸೇನಗುಪ್ತ

ಐದಾರು ವರ್ಷಗಳ ಹಿಂದಿನ ಮಾತು. ಬೆಂಗಳೂರಿನ ಕಲಾವಿದ ಎಸ್. ಎಸ್. ಕುಕ್ಕೆ ಅವರನ್ನು ಸಂದರ್ಶಿಸಿದ ಸಂದರ್ಭ. ಕೇಂದ್ರದ ಡಿಸೈನ್ ಸೆಂಟರಿನಲ್ಲಿ ಕಲಾ ವಿಭಾಗದ ಮುಖ್ಯಸ್ಥರಾಗಿದ್ದ ಬಂಗಾಳಿಯ ಖ್ಯಾತ ಕಲಾವಿದ ಸೇನಗುಪ್ತರನ್ನು ನೆನಪು ಮಾಡಿಕೊಂಡೆವು ಅವರನ್ನು ಅವರ ಕೃತಿಗಳನ್ನು ನೋಡಿಬರುವ ಆಸೆ ನನಗಾಯಿತು. ನಾವೀರ್ವರೂ ಜಯನಗರದ ಕೊನೆಯಲ್ಲಿ ವಾಸವಾಗಿದ್ದ ಗುಪ್ತರ ಮನೆಗೆ ಹೋದೆವು. ಅಂದು ಭಾನುವಾರ ಅವರು ಮನೆಯಲ್ಲೇ ಇದ್ದರು. ತುಂಬಿದ ಸಂಸಾರ. ಮನೆಯ ವಾತಾವರಣ ಬಂಗಾಳಿ ಸಂಸ್ಕೃತಿಯಿಂದ ಕೂಡಿತ್ತು. ಚಹ ಕೊಟ್ಟರು. ಅವರು ರಚಿಸಿದ ಚಿತ್ರಗಳ ಕಡೆ ನನ್ನ ಗಮನ ಹೋಯಿತು. ಗುಪ್ತರು ಚಿತ್ರಗಳನ್ನೆಲ್ಲಾ ಒಂದೊಂದಾಗಿ ತೋರಿಸಿದರು. ಅವರದೇ ಆದ ಬಂಗಾಳಿ ಶೈಲಿ. ಇವರೊಬ್ಬರು ಪ್ರತಿಭಾವಂತ ಚಿತ್ರಕಾರ ಎಂದು ಒಮ್ಮೆಗೇ ಅನಿಸಿತು.

ಇವರು ಚಿತ್ರಕಲೆಯಲ್ಲಿ ತಾಂತ್ರಿಕ ಸಿದ್ಧಿಯನ್ನು ಪಡೆದುಕೊಂಡಿದ್ದಾರೆ. ಇವರ ರೇಖಾವಿನ್ಯಾಸ ಬಹುಸುಂದರವಾದುದು. ಚಿತ್ರಗಳಲ್ಲಿ ಲಾಲಿತ್ಯ, ರೇಖೆಗಳಲ್ಲಿ ದೃಢತೆ, ಕಲ್ಪನೆಗೆ ತಕ್ಕ ವರ್ಣ ವಿನ್ಯಾಸ ಎಲ್ಲವೂ ಸ್ಪಷ್ಟವಾಗಿ ತೋರುತ್ತಿದ್ದುವು. ಸ್ವತಂತ್ರ ಪ್ರವೃತ್ತಿ ಇವರದು. ಬಂಗಾಳಿ ಸಂಸ್ಕೃತಿ, ಅಲ್ಲಿಯ ಹಳ್ಳಿಗರ ಜನಜೀವನ, ನಿಸರ್ಗದ ಸೊಬಗು ಕೃತಿಗಳಲ್ಲಿ ಎದ್ದುತೋರುತ್ತದೆ. ತಮ್ಮದೇ ಆದ ಜಾನಪದ ಬಂಗಾಳಿ ಶೈಲಿಯನ್ನು ರೂಢಿಸಿಕೊಂಡು ಬಂದಿದ್ದಾರೆ. ಇವರ ಚಿತ್ರಗಳು ದೊಡ್ಡ ಪ್ರಮಾಣದಿಂದ ಹಿಡಿದು ಕಿರು ಆಕಾರದವರೆಗೆ ಇರುವುದನ್ನು ಯಾರಾದರೂ ಗಮನಿಸಬಹುದು. ಜಲ ವರ್ಣದ ಇವರ ಕೆಲವು ಚಿತ್ರಗಳು ತೈಲವರ್ಣದಂತೆ ತೋರುತ್ತವೆ. ಇವರು ಅಪೂರ್ವ ಕಲ್ಪನೆ, ಸ್ವಚ್ಛಂದ ಹಾಗೂ ವಿಶಿಷ್ಟವಾದ ಶೈಲಿಯನ್ನು ಉಳಿಸಿಕೊಂಡು ಬಂದಿದ್ದಾರೆ. ಕೆಲವು ಚಿತ್ರಗಳನ್ನು ಗಮನಿಸಿದಾಗ ಸೇನಗುಪ್ತರು ಪುರಾಣ ಕಥೆಗಳನ್ನು ಚೆನ್ನಾಗಿ ಅಧ್ಯಯನ ಮಾಡಿರುವುದು ವ್ಯಕ್ತವಾಗುತ್ತದೆ.

ಸೇನಗುಪ್ತರ ಸ್ವಭಾವ ಸರಳ. ಆದರೆ ಗಡಿಬಿಡಿಯ ವ್ಯಕ್ತಿಯಂತೆ ಕಾಣುತ್ತಾರೆ. ಬಂಗಾಳಿ ಕಚ್ಚೆ ಪಂಚೆ, ಬಿಳಿದೊಗಳೆ ಜುಬ್ಬ. ಹಿಂದೆ ಬಾಚಿದ ನೀಳ ನೆರೆತಕೂದಲು,

ದಪ್ಪಕನ್ನಡಕ, ಗಾಂಧಿ ಚಪ್ಪಲಿ ಎಲ್ಲವೂ 'ಕಲಾವಿದ' ಎಂದು ತೋರುವ ಸಹಜ ವೇಷ ಭೂಷಣ ಇವರದು. ಅರೆಬರೆಯ ಇಂಗ್ಲಿಷ್ ಕನ್ನಡ ಮಾತಾಡುತ್ತಾರೆ. ಬೆಂಗಳೂರಿನಲ್ಲಿ ಇವರ ಪರಿಚಯುವಾದುದು ಒಳ್ಳೆಯದೇ ಆಯಿತು. ಇವರ ಕೃತಿಗಳ ಪ್ರದರ್ಶನವನ್ನು ಮೈಸೂರಿನಲ್ಲಿ ಏರ್ಪಡಿಸುವಂತಾಯಿತು. ಇದು ನನಗೆ ಸಮಾಧಾನ ತಂದಿತು. ಇವರು ನಿವೃತ್ತಿ ಆದಮೇಲೆ ಪ್ರಶಾಂತ ನೆಲೆಯಾದ ಮೈಸೂರಿಗೆ ಬಂದು ನೆಲಸಿದ್ದಾರೆ. ಅವರದೇ ಕರಕುಶಲ ಕಾರ್ಯದಲ್ಲಿ ತೊಡಗಿದ್ದಾರೆ. ಆದರೂ ಜೀವನ ಸಾಗಿಸಲು ಅಗತ್ಯ ಧನ ದೊರಕಿಸಿಕೊಳ್ಳಲು ಹೋರಾಟವನ್ನೇ ಮಾಡುತ್ತಿದ್ದಾರೆ. ಇವರ ಇಬ್ಬರು ಪುತ್ರರು ಇವರಿಗೆ ನೆರವು ನೀಡುತ್ತಿದ್ದಾರೆ. ಒಂದೆರಡು ಬಾರಿ ನನ್ನ ಹಾಗೂ ಗುಪ್ತರ ಕಲಾಕೃತಿಗಳ ಪ್ರದರ್ಶನ ಲಾಭ ಹಂಚಿಕೊಂಡಿದ್ದೇವೆ. ಬೆಂಗಳೂರಿನಿಂದ ಮೈಸೂರಿಗೆ ಬಂದ ತರುಣದಲ್ಲಿ ಚಾಮರಾಜ ಕಲಾಶಾಲೆಯ ಕಲಾ ಅಧ್ಯಾಪಕರಾಗಿ ಹಂಗಾಮಿ ಕೆಲಸ ಮಾಡಿದರು. ಆದರೆ ಈ ಕೆಲಸ ಅಷ್ಟಾಗಿ ಇವರಿಗೆ ತೃಪ್ತಿ ಕೊಡಲಿಲ್ಲ.

ಸೇನಗುಪ್ತರ ಜೀವನದುದ್ದಕ್ಕೂ ಹೋರಾಟದ ಬದುಕನ್ನೇ ಗುರುತಿಸಬಹುದು. ಇವರು ಹುಟ್ಟಿದ್ದು ಪೂರ್ವಬಂಗಾಳದ ಒಂದು ಸಾಮಾನ್ಯ ಕುಟುಂಬದಲ್ಲಿ. ಢಾಕಾ ಜಿಲ್ಲೆಯ ಬೆವಥಹಳ್ಳಿ ಇವರದು. 1920ರಲ್ಲಿ ಇವರ ಜನನ. ತಂದೆ ಶಾರದಪ್ರಸನ್ನ ಸೇನ ಗುಪ್ತ. ತಾಯಿ ನಿರ್ಮಲ. ಇವರಿಗೆ ಎರಡು ಗಂಡು ಎರಡು ಹೆಣ್ಣು ಮಕ್ಕಳು. ಸೇನಗುಪ್ತರೇ ಹಿರಿಯ ಮಗ. ತಂದೆಗೆ ಡಾರ್ಜಲಿಂಗ್ ಬಳಿಯ ಟೀ ಎಸ್ಟೇಟಿನಲ್ಲಿ ಕೆಲಸ. ಅಲ್ಲಿಯ ಫಣೀಂದ್ರದೇವ ವಿದ್ಯಾಶಾಲೆಯಲ್ಲಿ ಗುಪ್ತರ ವ್ಯಾಸಂಗ ನಡೆಯಿತು. ಹೈಸ್ಕೂಲಿನಲ್ಲಿ ಈ ಬಾಲಕ ಬರೆದ ಎರಡು ಚಿತ್ರಗಳಿಗೆ ಬಹುಮಾನ ಬಂದುವು. ರವೀಂದ್ರ ಹಾಗೂ ಗಾಂಧಿ ಚಿತ್ರಗಳೇ ಅವು. ಇವರ ವಂಶದಲ್ಲಿ ಯಾರಿಗೂ ಚಿತ್ರಕಲೆಯಲ್ಲಿ ಅಭಿರುಚಿಯಾಗಲೀ ಆಸಕ್ತಿಯಾಗಲೀ ಇರಲಿಲ್ಲ. ಇವರ ಕಲೆಗೆ ತಾಯಿಯವರ ರಂಗೋಲಿ ಕಲೆ ಸ್ಫೂರ್ತಿ ನೀಡಿದ್ದಲ್ಲದೆ ಸ್ವಚ್ಛಂದ ರೇಖಾವಿನ್ಯಾಸದಲ್ಲಿ ಆಸಕ್ತಿ ಮೂಡಿಸಿತು. ಅಲ್ಲದೆ ಇವರು ಯುವಕರ ಗುಂಪಿನಲ್ಲಿ ಅಗ್ರಗಣ್ಯ ಕ್ರಾಂತಿಕಾರಿಯಾಗಿದ್ದರು. ದೊಣ್ಣೆ, ಲಾಠಿ, ಕತ್ತಿ ವರಸೆಗಳಲ್ಲಿ ಇವರ ಕೈ ಪಳಗಿದ್ದಿತು. ಎರಡುಮೂರು ಜನ ಬ್ರಿಟಿಷರನ್ನು ತೀರಿಸಲೂ ಮನಸ್ಸು ಮಾಡಿದ ಭೂಪತಿ ಇವರು. ಕಲ್ಕತ್ತದ ಕಲಾಶಾಲೆಯಲ್ಲಿ ಕಲಾ ಡಿಪ್ಲೊಮಾ ವಿದ್ಯಾರ್ಥಿಯಾಗಿದ್ದ ಮಿತ್ರ ಯಜ್ಞೇಶ್ವರ ಷಾ ಒಮ್ಮೆ ಸೇನಗುಪ್ತರ ಹಳ್ಳಿಗೆ ಬಂದಿದ್ದ. ಈತನ ಚಿತ್ರಗಳು ಗುಪ್ತರಿಗೆ ಮತ್ತೂ ಸ್ಫೂರ್ತಿ ಕೊಟ್ಟುವು. ತಾನೂ ಕಲಾವಿದನಾಗಲೇ ಬೇಕೆಂದು ಅಂದೇ ಈ ಯುವಕ ನಿರ್ಧರಿಸಿದ.

ಆ ಕಾಲದಲ್ಲಿ ಕಲಾಶಾಲೆಗೆ ಸೇರುವವರಿಗೆ ಯಾರೂ ಪ್ರೋತ್ಸಾಹ ಕೊಡುತ್ತಿರಲಿಲ್ಲ. ಕೆಲಸವಿಲ್ಲದೆ ಸೋಮಾರಿಯಾಗುವರೆಂಬ ಭಾವನೆ ಇತ್ತು. ಇದಕ್ಕಾಗಿ ಇವರ ಮನೆಯವರೂ ಸೇನಗುಪ್ತರನ್ನು ಅಡ್ಡಿಮಾಡಿದರು. ಡಾಕ್ಟರು ಇಲ್ಲವೇ ವಕೀಲನಾಗಲಿ ಎಂದೇ ಒತ್ತಾಯಿಸಿದರು. ಆದರೆ ಅವರೆಲ್ಲರ ವಿರುದ್ಧ ಚಿತ್ರಕಲಾಭ್ಯಾಸ ನಡೆಸಲು ಕಲ್ಕತ್ತದ ಕಡೆ ಹೊರಟರು. 300 ಮೈಲಿಗಳ ದೂರದ ಕಲ್ಕತ್ತೆಗೆ ಈ ಯುವಕ ಹೇಗೋ

ಬಂದ. ಜೇಬಿನಲ್ಲಿ ಒಂದು ಪುಡಿಕಾಸೂ ಇರಲಿಲ್ಲ. ತಂದೆ ಬೇಕೆಂದೇ ಹಣಕೊಡಲಿಲ್ಲ. ಹೀಗಾದರೂ ಮಗ ಮನೆಗೆ ಹಿಂದಿರುಗಿಯಾನು ಎಂದು ತಂದೆತಾಯಿಗಳ ಅನಿಸಿಕೆ. ಐದುವರ್ಷಗಳ ಕಲಾಶಾಲೆಯಲ್ಲಿ ಕಲಿಕೆ. ಮೈಗೆ ಸರಿಯಾದ ಬಟ್ಟೆ ಇಲ್ಲ. ಕೈಲಿ ಹಣವಿಲ್ಲ. ಸೋದರಮಾವನ ಮನೆಯೇ ಆಶ್ರಯ. ಏಳೆಂಟು ರೂಪಾಯಿಗಳ ವಿದ್ಯಾರ್ಥಿ ವೇತನದಲ್ಲೇ ದಿನ ತಳ್ಳಬೇಕು. ಹೋರಾಟದಲ್ಲೂ ಕಲಾಶಿಕ್ಷಣ ಮುಗಿಸಿದರು. ಫ್ರೆಸ್ಕೊ ಅಂಡ್ ಮ್ಯೂರಲ್ ಪೈಂಟಿಂಗ್‌ನಲ್ಲಿ ಡಿಪ್ಲೊಮಾ ಗಳಿಸಿದರು. ಆಗ ಪ್ರಿನ್ಸಿಪಾಲರು ಮುಕುಲ್ ಡೇ (ಮುನಿಷಿ ಡೇ ಅವರ ಅಣ್ಣ). ರವೀಂದ್ರನಾಥ ಚಕ್ರವರ್ತಿ ಅಧ್ಯಾಪಕರು. ಇವರೆಲ್ಲಾ ಅವನೀಂದ್ರನಾಥಠಾಕೂರರ ಶಿಷ್ಯರು. ನಂದಲಾಲ ಬೋಸರ ಶಿಷ್ಯ ಸತ್ಯೇಂದ್ರನಾಥ ಬಂದೋಪಾಧ್ಯಾಯ ಕಲಾ ಶಿಕ್ಷಕರಾಗಿದ್ದರು. ಸೇನಗುಪ್ತರ ಸಹಪಾಠಿಗಳಲ್ಲಿ ಇಬ್ಬರು ಹೆಸರಿಸುವಂತಹ ಕಲಾವಿದರು ಇದ್ದರು. ತಾರಾಪಾಲ ಬೆಸ್ವಾಸ್ ಮತ್ತು ಅಮೂಲ್ಯಭೂಷಣ. ಸೇನಗುಪ್ತರು ಡಿಪ್ಲೊಮಾ ಗಳಿಸಿದ ಮರುವರ್ಷದಲ್ಲೇ ಅಕಾಡೆಮಿ ಆಫ್ ಫೈನ್ ಆರ್ಟ್ಸ್ ಸ್ವರ್ಣ ಪದಕ ಇವರ 'ಸಂಕೀರ್ತನ' ಚಿತ್ರಕ್ಕೆ ದೊರಕಿತು. ಇವರ ಚಿತ್ರಗಳು ಪ್ರವಾಸಿ, ಮಾಡ್ರನ್ ರಿವ್ಯೂ, ಭಂಗಶ್ರೀ ಮುಂತಾದ ಮಾಸಿಕಗಳಲ್ಲಿ ಪ್ರಕಟವಾದವು. ಇವರು ರಜಾ ದಿನಗಳಲ್ಲಿ ಹಳ್ಳಿಯಲ್ಲಿರಲಿ ಅಥವಾ ಕಲ್ಕತ್ತದಲ್ಲಿರಲಿ ಬಿಡುವಿಲ್ಲದೆ ರೇಖಾಚಿತ್ರಗಳನ್ನೂ ನಿಸರ್ಗಚಿತ್ರಗಳನ್ನೂ ಬಿಡಿಸುತ್ತಿದ್ದರು. ಅಸ್ಸಾಂನ ರಮಣೀಯ ನಿಸರ್ಗದ ನಡುವೆ ಕುಳಿತು ಚಿತ್ರ ಬಿಡಿಸಿಕೊಂಡು ಬಂದರು. ಎರಡನೇ ಮಹಾ ಯುದ್ಧ ಪ್ರಾರಂಭವಾದ ಸಮಯ ಕಲ್ಕತ್ತದಲ್ಲಿ ಅಮೆರಿಕದ ಸೈನಿಕರು ತಂಗಿದ್ದರು. ಇವರಿಂದಾಗಿ ತಿನ್ನುವ ಪದಾರ್ಥ ಬೆಲೆ ಏರಿತ್ತು. ಗುಪ್ತರ ಜೀವನವು ಕಷ್ಟದಲ್ಲೇ ಸಾಗಿತ್ತು.

ನಂತರ ಇವರು ಕೆಲಸ ಹುಡುಕಿಕೊಂಡು ಕಲ್ಕತ್ತದಿಂದ ಬೊಂಬಾಯಿಗೆ ಬಂದರು. ಇಲ್ಲಿ ಇವರ ಮತ್ತೊಬ್ಬ ಸೋದರಮಾವ ವಿಭೂತಿ ಭೂಷಣ ಸೇನಗುಪ್ತ ಇವರಿಗೆ ನೆರವು ನೀಡಿದರು. ಜಾಹಿರಾತು ಕಂಪನಿಯೊಂದರಲ್ಲಿ ಒಂದೆರಡು ತಿಂಗಳು ಕೆಲಸಮಾಡಿದರು. ನಂತರ ರತನಬಾಟ್ರ ಸ್ಟುಡಿಯೋವಿಗೆ ಸೇರಿಕೊಂಡರು. ಪುರಾಣ ಕಥಾಚಿತ್ರಮಾಲಿಕೆಯ ರಚನಾಕಾರ್ಯದಲ್ಲಿ ಕೆಲಸ ನಿರ್ವಹಿಸಿದರು. ಆಗ ಕಮ್ಯೂನಿಸ್ಟ್ ಸಾಂಸ್ಕೃತಿಕ ಸಂಸ್ಥೆಯ ಸದಸ್ಯರೂ ಆದರು. ಇಲ್ಲಿ ರವಿಶಂಕರ್ ಸೋದರ ಸಚೀನಶಂಕರ್, ಶಾಂತಿ ವರ್ಧನ ಮುಂತಾದ ಖ್ಯಾತ ನೃತ್ಯಗಾರರೊಡನೆ ಕಲೆತು ನಾಟಕ ನೃತ್ಯಗಳ ಅಭ್ಯಾಸ ಕುದುರಿಸಿಕೊಂಡರು. ಈ ಗುಂಪಿನಲ್ಲಿ ಪ್ರಸಿದ್ಧ ಚಿತ್ರಕಾರ ಚಿತ್ತಪ್ರಸಾದ್ ಇವರಿಗೆ ಆತ್ಮೀಯ ಗೆಳೆಯರಾಗಿದ್ದರು. ಒಂದು ವರ್ಷ ಕಳೆದ ನಂತರ ಗುಪ್ತರ ಆರೋಗ್ಯ ಸರಿಯಿಲ್ಲದೆ ಕಲ್ಕತ್ತೆಗೆ ಮತ್ತೆ ಹಿಂದಿರುಗಿದರು. ಮಿತ್ರ ಕಲಾವಿದ ಪರ್ಯಲ್‌ಸೇನ್ ಅವರ ಸಂಗಡ ಕೂಡಿಕೊಂಡು ಚಿತ್ರರಚನೆಯನ್ನು ಮುಂದುವರಿಸಿದರು. ಯಾವ ಕೆಲಸವೂ ಇಲ್ಲ. ಪತ್ರಿಕೆಗಳಿಗೆ ಚಿತ್ರಬಿಡಿಸಿಕೊಂಡಬೇಕು ದಿನ ತಳ್ಳಬೇಕು. ಬಟ್ಟೆಗಳು ಅಷ್ಟಾಗಿರಲಿಲ್ಲ. ಸ್ವಯಂಪಾಕ. ಏಕಾಂಗಿಯಾಗಿ ಒಂದೆರಡು ವರ್ಷ ಕಲ್ಕತ್ತದ ಉಪನಗರವಾದ

ಥಾಕುರಿಯುದಲ್ಲಿ ಜೀವನ ಸಾಗಿಸಿದರು. 1947ರ ಆಗಸ್ಟ್ 15ರಂದು ಕಲ್ಕತ್ತದ ಹಿಂದೂ ಮುಸ್ಲೀಮರ ಮತೀಯ ಗಲಭೆ. ಸಾವಿರಾರು ಮುಸ್ಲೀಮರ ಹೆಣಗಳನ್ನು ಕಂಡ ಈ ಯುವ ಕಲಾವಿದನ ಹೃದಯ ಘಾಸಿಗೊಂಡಿತು. 1948ರಲ್ಲಿ ಕಲ್ಕತ್ತದಿಂದ ಇವರು ಹಿಂದೆ ಕಲಾಭ್ಯಾಸಮಾಡಿದ್ದ ಜಲಪೈಗುರಿಗೆ ಹಿಂದಿರುಗಿದರು. ಚಿಕ್ಕಮ್ಮನ ಮನೆಯ ವಾಸ. ಅಲ್ಲಿಯ ಶಾಲೆಯಲ್ಲಿ ಕಲಾಧ್ಯಾಪಕರಾದರು. ಇವರ ತಂದೆ ನಿವೃತ್ತರಾಗಿ ಇವರೊಡನೆ ಸೇರಿಕೊಂಡರು. ಈ ವೇಳೆಗೆ ಇವರ ಓರ್ವ ತಂಗಿ ಲಗ್ನವಾಗಿ ಇನ್ನೊಬ್ಬಳು ತನ್ನ ದೊಡ್ಡಪ್ಪನ ಆಶ್ರಯದಲ್ಲಿದ್ದಳು. ತಾವು ಮೆಚ್ಚಿದ ಸಂಬಂಧಿಕರ ಹುಡುಗಿಯೊಡನೆ ಲಗ್ನವಾಗದಿರಲು ಇವರ ಆರ್ಥಿಕ ಸ್ಥಿತಿಯೇ ಒಂದು ದೊಡ್ಡ ನೆಪವಾಯಿತು. ಇದು ಇವರ ಜೀವನದಲ್ಲಿ ಒಂದು ದೊಡ್ಡ ನೋವನ್ನು ತಂದಿತು. ಆದರೆ ಈ ಆಘಾತದಿಂದ ಪಾರಾಗಲು ಮುಂದೆ ಸೇಡು, ಸ್ಪರ್ಧೆ ಇವೆರಡೂ ಇವರ ಪ್ರಗತಿಗೆ ಕಾರಣವಾಯಿತು. ಜಲಪೈಗುರಿಯ ಕಲಾಶಾಲೆಯಲ್ಲಿ ಅನಿಲ್ ಎಂಬ ಮಿತ್ರನ ಸ್ನೇಹ ಗಾಢವಾಗಿ ಬೆಳೆಯಿತು ಅನಿಲ್‌ನ ತಂಗಿ ಮಗಳು ಅಭಯಳ ಭೇಟಿ ಸೇನಗುಪ್ತರಿಗೆ ಆಗಾಗ ಆಗುತ್ತಿತ್ತು. ಅಕೆಯ ಗುಣ ಮೇಲಾಗಿ ಸೌಂದರ್ಯಕ್ಕೆ ಗುಪ್ತರು ಮಾರುಹೋದರು. ಇವರೀರ್ವರ ಪ್ರೇಮವನ್ನು ಕಂಡ ಮಿತ್ರ ಅನಿಲ್ ಅಭಯಳನ್ನು ಲಗ್ನವಾಗುವಂತೆ ಗುಪ್ತರಿಗೆ ಒತ್ತಾಯ ಮಾಡಿದರು. ಸಂಸಾರ ತೂಗಿಸಲು ಆಗದಷ್ಟು ಕಡಿಮೆ ಪಗಾರದಲ್ಲೂ ಲಗ್ನವಾಗಲು ಒಪ್ಪಿದರು. ಯಾವ ವರದಕ್ಷಿಣೆಯನ್ನೂ ಪಡೆಯದೆ ಸರಳರೀತಿಯಲ್ಲಿ ಕಲ್ಕತ್ತೆಯಲ್ಲಿ ಹಿಂದೂ ಪದ್ಧತಿಯಂತೆ ಲಗ್ನವಾದರು. ಇವರ ಅತ್ತೆಮಾವಂದಿರು ಪೂರ್ವಪಾಕಿಸ್ತಾನದಿಂದ ಕಲ್ಕತ್ತೆಗೆ ಬಂದು ನಿರಾಶ್ರಿತರ ಆಶ್ರಯದಲ್ಲಿದ್ದರು. ಗುಪ್ತರು ಲಗ್ನ ಆದನಂತರ ಕಲ್ಕತ್ತದಿಂದ ಜಲಪೈಗುರಿಗೆ ಬಂದರು. ಪುಟ್ಟ ಸಂಸಾರ. ಇಲ್ಲೇ ಪುತ್ರನ ಜನನವಾಯಿತು ಆ ವೇಳೆಗೆ ಪಶ್ಚಿಮಬಂಗಾಳದ ಬರನ್‌ಪುರದಲ್ಲಿ ಕಲಾಧ್ಯಾಪಕವೃತ್ತಿಯೊಂದು ದೊರಕಿತು. ಇಲ್ಲಿ ಕೇವಲ ಎರಡೂವರೆ ವರ್ಷಗಳು ಮಾತ್ರ ಇದ್ದರು. ಈ ವೇಳೆಯಲ್ಲಿ ಅನೇಕ ಚಿತ್ರಗಳನ್ನು ರಚಿಸಿದರು. ಬಹುಪಾಲು ಕಲ್ಕತ್ತ ಪತ್ರಿಕೆಗಳಲ್ಲಿ ಅವು ಪ್ರಕಟಗೊಂಡವು.

1952ರಲ್ಲಿ ಬರನ್‌ಪುರ ಬಿಟ್ಟು ಮತ್ತೆ ಬೊಂಬಾಯಿಗೆ ಬಂದರು. ಹಿಂದೆ ಇವರು ಕೆಲಸಮಾಡುತ್ತಿದ್ದ ರತನಬಾಟ್ರ ಸ್ಟೂಡಿಯೋವಿಗೆ ಸೇರಿದರು. ಇಲ್ಲೇ ರಾಮಾಯಣ ಗ್ರಂಥದಿಂದ ಚಿತ್ರಗಳನ್ನು ಮಕ್ಕಳಿಗಾಗಿ ಚಿತ್ರಿಸತೊಡಗಿದರು. ಇಲ್ಲಿ ಮೂರು ವರ್ಷ ಕಳೆದು ನಂತರ ಈ ಸ್ಟೂಡಿಯೋ ಬಿಟ್ಟು ಆಲ್ ಇಂಡಿಯಾ ಹ್ಯಾಂಡಿಕ್ರಾಫ್ಟ್ ಬೋರ್ಡ್ ನಡೆಸುತ್ತಿದ್ದ ಡಿಸೈನ್ ಸೆಂಟರಿಗೆ ಸೇರಿಕೊಂಡರು. ಇಲ್ಲಿಗೆ ಅವರ ಅಲೆದಾಟ ಮುಕ್ತಾಯಗೊಂಡಿತು. ಸ್ಥಿರತೆ ಜೀವನದಲ್ಲಿ ಮೂಡಿತು. ಇಲ್ಲಿ ಪ್ರಮುಖ ಡಿಸೈನರಾಗಿ ಕೆಲಸ ಮಾಡತೊಡಗಿದರು ಇದು ಇವರ ಅಲೆಮಾರಿತನಕ್ಕೆ ಮತ್ತೂ ಸಹಾಯ ಮಾಡಿತು ವಿವಿಧ ಸ್ಥಳಗಳಿಗೆ ಪ್ರವಾಸ ಮಾಡುವ, ಅನೇಕ ಕರಕುಶಲ ಕಲಾಕಾರರ ಪರಿಚಯ ಮಾಡಿಕೊಳ್ಳುವ ಸದವಕಾಶ ಇಲ್ಲಿ ದೊರಕಿತು. ಆಗ ಬೊಂಬಾಯಿ ಆರ್ಟ್

ಸೊಸೈಟಿಯ ಸದಸ್ಯರೂ ಆಗಿದ್ದರು ಇಲ್ಲಿ ಅನೇಕ ಚಿತ್ರಗಳು ಪ್ರದರ್ಶನಗೊಂಡವು. 'ಕಾಳಿದಾಸ ಸಮಾರಂಭ" ಎಂಬ ಇವರ ಕೃತಿಗೆ ಜೈನ ಕಲಾಪ್ರದರ್ಶನದಲ್ಲಿ ಬಹುಮಾನ ದೊರೆಯಿತು. ಇವರ ಕೀರ್ತಿ ಮೆರೆಯಿತು. ಬೊಂಬಾಯಿಯ 13 ವರ್ಷಗಳ ಕಲಾ ಜೀವನ ಮರೆಯುವಂತಹುದಲ್ಲ. ರಾಜಾಸ್ತಾನ, ಸೌರಾಷ್ಟ್ರ, ಕಚ್, ಮಧ್ಯಪ್ರದೇಶ, ಮಹಾರಾಷ್ಟ್ರ, ಗೋವಾಗಳ ಸಂದರ್ಶನ,ಕಲಾವಿದರ ಸಂಪರ್ಕ ಇವರಿಗಾಯಿತು. ಇದ ರಿಂದಾಗಿ ಇವರ ಚಿತ್ರಗಳಲ್ಲಿ ಆಯಾಪ್ರಾಂತೀಯ ಚೆಲುವು ಒಲವನ್ನು ಇವರು ಚಿತ್ರ ಗಳಲ್ಲಿ ತರುವಂತಾಯಿತು.

ಇವರು ಸಂಯೋಗ ಚಿತ್ರಗಳನ್ನು ಹೆಚ್ಚು ರಚಿಸುತ್ತ ಬಂದಿದ್ದಾರೆ ಟೆಂಪ್ರಾ ಜಲ ವರ್ಣಗಳ ಬಳಕೆ ಇವರದು. ಜಪಾನಿ ಶೈಲಿ ತಂತ್ರವನ್ನೂ ರೂಢಿಸಿಕೊಂಡಿದ್ದಾರೆ. ಅಬನೀಂದ್ರನಾಥ ಠಾಕೂರರು ವಾಷ್‌ಮೆತೆಡ್ ಕರಗತ ಮಾಡಿಕೊಂಡಂತೆ ಸೇನಗುಪ್ತರು ಅದನ್ನು ಅನುಸರಿಸಿದರು. ಸೇನಗುಪ್ತರ ಅತಿ ದೊಡ್ಡ ಕೃತಿ 'ಸೀತಾಪಹರಣ', 'ಸ್ಟೀಮರ್ ಆಟ 'ಬಾಂಗ್ಲದೇಶ', ಬಿಹಾರದ ಹೋಲಿಹಬ್ಬ, ಮೇಘ ಸಂದೇಶ, ರಾಮ ಲಕ್ಷ್ಮಣ ಸೀತಾ, ಮೂಲವಂಶ, ರಾಧಾಕೃಷ್ಣ, ಹೋಲಿ, ಬುದ್ಧನ ಜನನ, ಕೃಷ್ಣ ಜ್ಞಾನ, ಇಂಥ ಅನೇಕ ಚಿತ್ರಗಳು ಬೊಂಬಾಯಿನಲ್ಲಿ ವಿಕ್ರಯಗೊಂಡವು.

1969ರಲ್ಲಿ ಬೊಂಬಾಯಿನಿಂದ ಬೆಂಗಳೂರಿಗೆ ಇವರಿಗೆ ವರ್ಗವಾಯಿತು. ಇಲ್ಲಿ ಒಂಬತ್ತು ವರ್ಷಗಳ ಕಾಲ ಮುಖ್ಯ ಡಿಸೈನರಾಗಿ ಕೆಲಸ ಮಾಡಿದರು. ಇಲ್ಲಿದ್ದಾಗ ದಕ್ಷಿಣಭಾರತ ಪ್ರವಾಸಮಾಡುವ ಅವಕಾಶ ದೊರಕಿತು. ಕೇಂದ್ರಸರ್ಕಾರದ ಆದೇಶ ದಂತೆ ಲಕ್ಷದ್ವೀಪಕ್ಕೆ ತೆರಳಿ ಅಲ್ಲಿ ಮರದ ಕೆತ್ತನೆಯ ಪ್ರದರ್ಶನದಲ್ಲಿ ಪಾಲುಗೊಂಡರು. ಮರ, ದಂತ, ಶಿಲೆ, ಲೋಹ, ಮಣ್ಣು ಬೊಂಬು, ಪೇಪರಪಲ್ಪ ಕರಕುಶಲ ಕಲೆಗಾರಿಕೆಗೆ ಸೇನಗುಪ್ತರು ಹೊಸ ಹೊಸ ಮಾದರಿಗಳನ್ನು ತಯಾರಿಸಲು ಸೃಷ್ಟಿಸಲು ಕಾರಣ ಪುರುಷರಾದರು. ಇವರಿಂದ ಕರಕುಶಲ ಮಂಡಲಿ ಒಳ್ಳೆಯ ಕೊಡುಗೆಯನ್ನು ಪಡೆಯಿತು.

ಇವರ ಚಿತ್ರಗಳಲ್ಲಿ ವೇಷಭೂಷಣ ಬಂಗಾಳದ್ದೇ ಮಹಾರಾಷ್ಟ್ರದ್ದೇ ಎಂದು ಸ್ಪಷ್ಟವಾಗಿ ಗುರುತಿಸಬಹುದು. ಆಯಾ ಪ್ರದೇಶಗಳ ಸೊಬಗನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದಾರೆ ಎಂಬುದು ಇವರ ಚಿತ್ರಗಳಲ್ಲಿ ವ್ಯಕ್ತವಾಗುತ್ತದೆ. ಇವರು ಈ ತನಕ ಎರಡು ಸಾವಿರದ ಐನೂರಕ್ಕೂ ಹೆಚ್ಚು ಚಿತ್ರಗಳನ್ನು ರಚಿಸಿದ್ದಾರೆ. ಸೇನಗುಪ್ತರು ಚಿತ್ರ ಕಾರರು ಮಾತ್ರ ಅಲ್ಲ ಕವಿಗಳೂ, ಕತೆಗಾರರೂ, ಲೇಖಕರೂ ಆಗಿದ್ದಾರೆ. ಅನೇಕ ಇವರ ಲೇಖನಗಳು ಅಮೃತಬಜಾರ ಪತ್ರಿಕೆಯಲ್ಲಿ ಪ್ರಕಟವಾಗಿವೆ. ಬಂಗಾಳಿ ಚಲನ ಚಿತ್ರ ತಯಾರಕರಲ್ಲಿ ಅನೇಕರು ಸೇನಗುಪ್ತರ ಪರಮಮಿತ್ರರು. ರಾಜಕಪೂರ್, ಮಾಲಾಸಿನ್ಹ, ಕಿಶೋರ್‌ಕುಮಾರ್, ಉತ್ತಮಕುಮಾರ್, ಬಾಸುಚಟರ್ಜಿ, ರಿಷಿ ಚಟರ್ಜಿ, ಬಾಸುಭಟ್ಟಾಚಾರ್ಯ, ಇವರೇ ಮೊದಲಾದವರ ವ್ಯಕ್ತಿಗಳ ಪರಿಚಯವನ್ನು ಬಂಗಾಳಿ ಪತ್ರಿಕೆಯ ಮೂಲಕ ಮಾಡಿಕೊಟ್ಟಿದ್ದಾರೆ. ಹಿಂದಿನ ಡಿಸೆಂಬರಿನಲ್ಲಿ ಪ್ರಸಿದ್ಧ ಛಾಯಾಚಿತ್ರ ಚಿತ್ರನಿರ್ದೇಶಕರಾದ ನಿಮಾಯ್‌ಘೋಷ್ ಅವರು ಮೈಸೂರಿಗೆ

ಬಂದಿದ್ದರು. ನಾನು ಅವರೂ ಕೂಡಿ ಮೈಸೂರು ವಿಶ್ವವಿದ್ಯಾನಿಲಯದ ವಜ್ರ ಮಹೋತ್ಸವದ ನೆನಪಿನ ಸಾಕ್ಷ್ಯಚಿತ್ರವನ್ನು ತೆಗೆಯುತ್ತಿದ್ದ ಸಂದರ್ಭ. ಇದು ಸೇನಗುಪ್ತರಿಗೆ ಹೇಗೋ ಗೊತ್ತಾಯಿತು. ನಿಮಾಯ್‌ಘೋಷ್ ಅವರ ಪರಿಚಯವು ಅವರಿಗೆ ಇತ್ತು. ನಮ್ಮಿಬ್ಬರನ್ನು ಸೇನಗುಪ್ತರು ಅವರ ಮನೆಗೆ ಒಮ್ಮೆ ರಾತ್ರಿ ಊಟಕ್ಕೆ ಆಹ್ವಾನಿಸಿದರು. ಅಚ್ಚುಕಟ್ಟಾದ ಮನೆ, ವಿವಿಧ ರೀತಿಯ ಬಂಗಾಳಿ ತಿನಿಸು, ಅನೇಕ ರೀತಿಯ ಮೀನಿನ ಭಕ್ಷ್ಯ. ಸಸ್ಯಹಾರಿಯಾದ ನನಗೆ ಈ ಬಂಗಾಳಿಯರಿಬ್ಬರ ಊಟದ ಮೋಜು ನೋಡುವುದರಲ್ಲಿಯೇ ತೃಪ್ತಿಯಾಯಿತು. ಅವರಿಬ್ಬರ ದೇಶಪ್ರೇಮ, ವಾತ್ಸಲ್ಯ, ಅವರ ಮಾತುಗಳಲ್ಲೇ ವ್ಯಕ್ತವಾಯಿತು.

ಸೇನಗುಪ್ತರ ಚಿತ್ರಗಳು ಮೈಸೂರಿನಲ್ಲಿ ಕೆಲವು ಕಡೆ ಇವೆ. ಜಾನಪದ ವಸ್ತು ಸಂಗ್ರಹಾಲಯ, ಭಾರತ ಭಾಷಾಮಂದಿರ, ರಾಮಕೃಷ್ಣ ಆಶ್ರಮ ಹಾಗೂ ಶ್ರೀ ವೆಂಕಟ ರಮಣಸ್ವಾಮಿಯ ದೇವಾಲಯಗಳಲ್ಲಿ ನೋಡಸಿಗುತ್ತವೆ. ಇವರ ಕಲೆಯ ಬೆಲೆಯನ್ನು ಅಳೆಯಲು ಈ ಕೃತಿಗಳೇ ಸಾಕು. ಮೈಸೂರಿನ ಒಂದು ಕೊನೆಯಿಂದ ಇನ್ನೊಂದು ಕೊನೆಗೆ ಬೈಸ್‌ಕಲ್ಲು ತುಳಿದು ಸಂಚರಿಸುವ ಅರವತ್ತೆರಡು ವರ್ಷದ ಈ ತರುಣ ಬಂಗಾಳಿ ಬಾಬು ಕೆಲವರಿಗೆ ಈಗಾಗಲೇ ಪರಿಚಿತ ವ್ಯಕ್ತಿಯಾಗಿದ್ದಾರೆ. ಈ ಇಳಿವಯಸ್ಸಿನಲ್ಲೂ ಯುವಕರನ್ನು ನಾಚಿಸುವ ದಿಟ್ಟ ನಿಲುವು ಕೆಚ್ಚು, ಕಾವು ಕಾಣಬಹುದಾಗಿದೆ. ಅತಿ ಆಸೆಯೊಂದು ಇಲ್ಲದಿದ್ದರೆ ಇವರ ಕಲಾಜೀವನ ಯುವಕ ಪೀಳಿಗೆಗೆ ಒಂದು ಆದರ್ಶವಾಗುತ್ತಿತ್ತು. ಈ ಹಿರಿಯ ಸಾಹಸಿ ಕಲಾವಿದರು ನಮ್ಮೊಂದಿಗೆ ಇರುವುದೊಂದು ಹೆಮ್ಮೆಯ ಸಂಗತಿ. ಆದರೆ ಹತ್ತು ವರ್ಷಗಳ ಕಾಲ ಕನ್ನಡನಾಡಿನಲ್ಲಿದ್ದೂ ಕನ್ನಡ ಓದು ಬರಹ ಮಾತುಗಾರಿಕೆ ಬರದಿರುವುದು ಒಂದು ದೊಡ್ಡ ಕೊರತೆ. ಈಗಲಾದರೂ ಕನ್ನಡ ಭಾಷೆ ಕಲಿತು ನಮ್ಮೊಡನೆ ಬಾಳುವಂತಾಗಲಿ.

ಎಂ. ಜಿ. ಬಸವರಾಜ

ಭಾರತದ ಸಣ್ಣ ಕೈಗಾರಿಕೆಗಳ ರಫ್ತುಗಳು

ಭಾರತದ ಆರ್ಥಿಕಾಭಿವೃದ್ಧಿಯಲ್ಲಿ ಸಣ್ಣ ಕೈಗಾರಿಕೆಗಳು ಮಹತ್ವಪೂರ್ಣವಾದ ಪಾತ್ರವಹಿಸುತ್ತಿವೆ. ಈ ಕೈಗಾರಿಕೆಗಳು ಪ್ರಗತಿಯಾಗಬೇಕಾದರೆ ರಫ್ತು ಅಭಿವೃದ್ಧಿಯಾಗಬೇಕು. ಇದರಿಂದ ಹೆಚ್ಚು ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತವೆ, ಉತ್ಪಾದನೆ ಹೆಚ್ಚುತ್ತದೆ, ವಸ್ತುಗಳ ಗುಣಮಟ್ಟ ಶ್ರೇಷ್ಠವಾಗುತ್ತದೆ ಮತ್ತು ಅಮೂಲ್ಯವಾದ ವಿದೇಶಿ ವಿನಿಮಯ ಗಳಿಸಬಹುದು. ಇತ್ತೀಚಿನ ವರ್ಷಗಳಲ್ಲಿ ಕೈಗಾರಿಕಾವಲಯದ ಉತ್ಪಾದನೆ ಮತ್ತು ರಫ್ತು ಪ್ರಮಾಣ ಹೆಚ್ಚುವಲ್ಲಿ ಸಣ್ಣ ಕೈಗಾರಿಕೆಗಳು ಪ್ರಮುಖ ಪಾತ್ರವಹಿಸಿವೆ. ಭಾರತದ ಆರನೇ ಪಂಚವಾರ್ಷಿಕ ಯೋಜನೆ (1980–85)ಯ ಕರಡಿನ ಪ್ರಕಾರ, 1974–80ರ ವೇಳೆಯಲ್ಲಿ ಕೈಗಾರಿಕೆಗಳ ರಫ್ತು 538 ಕೋಟಿ ರೂಪಾಯಿಗಳಿಂದ 1050 ಕೋಟಿ ರೂಪಾಯಿಗಳಿಗೆ ಹೆಚ್ಚಿದೆ. ರಫ್ತು ಅಭಿವೃದ್ಧಿ ಪರಿಷತ್ತುಗಳು ಪ್ರಕಟಿಸಿರುವ ಅಂಕಿ–ಅಂಶಗಳ ಪ್ರಕಾರ ಸಣ್ಣ ಕೈಗಾರಿಕೆಗಳ ರಫ್ತು 1978–79ರಲ್ಲಿ 953 ಕೋಟಿ ರೂಪಾಯಿಗಳಿಂದ 1979-80ರ ವೇಳೆಗೆ 1044 ಕೋಟಿ ರೂಪಾಯಿಗಳಿಗೆ ಏರಿದೆ.

ಸಣ್ಣ ಕೈಗಾರಿಕೆಗಳು ರಫ್ತು ಮಾಡುವ ವಸ್ತುಗಳು :

ಭಾರತದ ಸಣ್ಣ ಕೈಗಾರಿಕೆಗಳು ಇಂದು ಇಂಜಿನಿಯರಿಂಗ್ ವಸ್ತುಗಳು, ಮೂಲ ರಸಾಯನಿಕಗಳು, ರಸಾಯನಿಕ ವಸ್ತುಗಳು, ಪ್ಲಾಸ್ಟಿಕ್ ಉತ್ಪಾದನೆಗಳು, ಪಾದರಕ್ಷೆಗಳು, ಆಹಾರ ಪದಾರ್ಥಗಳು ಮತ್ತು ತಿನಿಸುಗಳು, ಸಾಗರೋತ್ಪನ್ನಗಳು, ರೇಯಾನ್ ಸಿಂತೆಟಿಕ್ ಉಡುಗೆಗಳು, ಉಣ್ಣೆ ಬಟ್ಟೆಗಳು, ಕ್ರೀಡಾವಸ್ತುಗಳು, ತಂಬಾಕಿನ ಉತ್ಪಾದನೆಗಳು, ಮುಂತಾದವುಗಳನ್ನು ಉತ್ಪಾದಿಸಿ ಹೊರದೇಶಗಳಿಗೆ ರಫ್ತು ಮಾಡಲಾಗುತ್ತಿದೆ. ಅಲ್ಲದೆ ಈ ಕೈಗಾರಿಕೆಗಳೇ ತಯಾರಿಸುವ ರೇಡಿಯೋ, ಟ್ರಾನ್ಸಿಸ್ಟರ್, ದೂರದರ್ಶಕಗಳು, ವಾರ್ನಿಷ್, ಬಣ್ಣಗಳು, ಯಂತ್ರೋಪಕರಣಗಳು, ಬೈಸಿಕಲ್ ಮತ್ತಿತರ ಬಿಡಿ ಭಾಗಗಳನ್ನೂ ಹೊರದೇಶಗಳಿಗೆ ರಫ್ತು ಮಾಡಲಾಗುತ್ತಿದೆ.

ಭಾರತದ ಒಟ್ಟು ರಫ್ತಿನಲ್ಲಿ ಸಣ್ಣ ಕೈಗಾರಿಕೆಗಳ ಪಾಲು :

ವರ್ಷ	ಭಾರತದ ಒಟ್ಟು ರಫ್ತುಗಳು	ಸಣ್ಣ ಕೈಗಾರಿಕೆಗಳ ರಫ್ತುಗಳು	ಸಣ್ಣ ಕೈಗಾರಿಕೆಗಳ ಪಾಲು
1972–73	1,970.83	305·79	15·5%
1973–74	2,523·40	383·16	15·6%
1974–75	3,304·14	540·71	16·4%
1976–77	5,142·71	765·83	14·89%
1977–78	5·407·87	844·82	15·62%
1978–79	5,726·26	953·55	16·65%
1979–80	6,424·57	1,043·55	16·24%

ಮೂಲ : 1980–81ರ ವರದಿ, ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಸಂಸ್ಥೆ, ನವದೆಹಲಿ ಪುಟ 53

ಮೇಲೆ ತಿಳಿಸಿದ ಅಂಕಿ–ಅಂಶಗಳಲ್ಲದೆ, ಹಲವು ಸಣ್ಣ ಕೈಗಾರಿಕೆಗಳ ವಸ್ತುಗಳು ಪರೋಕ್ಷವಾಗಿ ವ್ಯಾಪಾರಿ ರಫ್ತುದಾರರ, ರಫ್ತುಮಳಿಗೆಗಳ, ಮತ್ತು ಇತರ ರಫ್ತುದಾರರ ಮೂಲಕ ವಿದೇಶಿ ಮಾರುಕಟ್ಟೆಗೆ ರಫ್ತಾಗುತ್ತಿವೆ. ಅಲ್ಲದೆ ಸಣ್ಣ ಕೈಗಾರಿಕೆಗಳ ಬಿಡಿಭಾಗಗಳು ಭಾರೀ ಕೈಗಾರಿಕೆಗಳ ವಸ್ತುಗಳ ಮೂಲಕ ವಿದೇಶಿ ಮಾರುಕಟ್ಟೆಗೆ ರಫ್ತಾಗುತ್ತಿವೆ. ರಫ್ತು ಅಭಿವೃದ್ಧಿ ಸಮಿತಿಯ ಅಂದಾಜಿನ ಪ್ರಕಾರ ಸಣ್ಣ ಕೈಗಾರಿಕೆಗಳು 1984–85ರ ವೇಳೆಗೆ ಸುಮಾರು 2000 ಕೋಟಿ ರೂಪಾಯಿಗಳಷ್ಟು ವಸ್ತುಗಳನ್ನು ರಫ್ತುಮಾಡಲು ಸಾಧ್ಯವಾಗಬಹುದು. ಭಾರತದ ಸಣ್ಣ ಕೈಗಾರಿಕೆಗಳ ರಫ್ತು ಅಭಿವೃದ್ಧಿಯಲ್ಲಿ ಕೆಲವು ಅಡಚಣೆಗಳಿವೆ. ಅವುಗಳೆಂದರೆ : (1) ಭಾರತದ ಸಣ್ಣ ಕೈಗಾರಿಕ್ಯೋದ್ಯಮಿಗಳು ರಫ್ತು ಅಭಿವೃದ್ಧಿಗೆ ಹೆಚ್ಚು ಆಸಕ್ತಿ ತೋರದೆ ಇರುವುದು (2) ಸಣ್ಣ ಕೈಗಾರಿಕೆಗಳಿಗೆ ಬೇಕಾಗುವ ಕಚ್ಚಾ ವಸ್ತುಗಳ ಕೊರತೆ (3) ವಿಶಾಲವಾದ ದೇಶೀಯ ಮಾರುಕಟ್ಟೆ (4) ಸಾಲ ಸೌಲಭ್ಯದ ಕೊರತೆ (5) ಅಂತರ ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸಣ್ಣ ಕೈಗಾರಿಕೆಗಳ ವಸ್ತುಗಳ ಬಗ್ಗೆ ಸಾಕಷ್ಟು ಜಾಹೀರಾತು ಇಲ್ಲದೆ ಇರುವುದು (6) ಸಣ್ಣ ಕೈಗಾರಿಕೋದ್ಯಮಿಗಳು ಮತ್ತು ರಫ್ತು ಅಭಿವೃದ್ಧಿ ಪರಿಷತ್ತುಗಳ ಮಧ್ಯೆ ಸಾಕಷ್ಟು ಸಂಪರ್ಕ ಇಲ್ಲದೇ ಇರುವುದು (7) ತಾಂತ್ರಿಕ ಜ್ಞಾನದ ಕೊರತೆ (8) ಆಧುನಿಕ ಯಂತ್ರೋಪಕರಣಗಳ ಕೊರತೆ (9) ಅಂತರರಾಷ್ಟ್ರೀಯ ಮಾರುಕಟ್ಟೆಯ ಸ್ಥಿತಿ–ಗತಿಗಳ ಜ್ಞಾನ ಸಣ್ಣ ಕೈಗಾರಿಕೋದ್ಯಮಿಗಳಿಗೆ ಇಲ್ಲದೆ ಇರುವುದು (10) ಬಿಗಿ ವ್ಯಾಪಾರ ನೀತಿಯನ್ನು ಎಲ್ಲಾ ದೇಶಗಳೂ ಪಾಲಿಸುತ್ತಿರುವುದು ಮುಂತಾದವುಗಳು. ಈ ಅಡಚಣೆಗಳು ನಿವಾರಣೆಯಾದರೆ ಸಣ್ಣ ಕೈಗಾರಿಕೆಗಳ ರಫ್ತು ಅಭಿವೃದ್ಧಿಗೆ ಅನುಕೂಲವಾಗುತ್ತದೆ.

ಸಣ್ಣ ಕೈಗಾರಿಕೆಗಳ ವಸ್ತುಗಳ ಅಭಿವೃದ್ಧಿಗೆ ಅನುಸರಿಸಬೇಕಾದ ಆಗತ್ಯ ಕ್ರಮಗಳು :

(1) ಭಾರತದ ಸಣ್ಣ ಕೈಗಾರಿಕೆಗಳ ವಸ್ತುಗಳಿಗೆ ಹೆಚ್ಚು ಬೇಡಿಕೆಗಳನ್ನುಂಟು ಮಾಡಲು ಆಗ್ನೇಯ ಏಷಿಯಾ ರಾಷ್ಟ್ರಗಳು, ಆಫ್ರಿಕಾ ರಾಷ್ಟ್ರಗಳು ಮತ್ತು ಲ್ಯಾಟಿನ್ ಅಮೇರಿಕಾ ರಾಷ್ಟ್ರಗಳು ಮುಂತಾದ ಅಭಿವೃದ್ಧಿ ಶೀಲ ರಾಷ್ಟ್ರಗಳಲ್ಲಿ ಈ ಕೈಗಾರಿಕೆಗಳು ತಯಾರಿಸುವ ಯಂತ್ರೋಪಕರಣಗಳು, ಬಿಡಿಭಾಗಗಳ ಬಗ್ಗೆ ವ್ಯಾಪಾರ ಜಾಹೀರಾತು ನೀಡುವುದು ಪರಿಣಾಮಕಾರಿಯಾಗಬಲ್ಲುದು. ಇದೇ ರೀತಿಯಾಗಿ ಅರಬ್ಬೀ ರಾಷ್ಟ್ರಗಳ ಮಾರುಕಟ್ಟೆಯಲ್ಲಿಯೂ ಹೆಚ್ಚು ಬೇಡಿಕೆಯನ್ನು ಪಡೆಯಲು ವ್ಯಾಪಕ ಕ್ರಮ ತೆಗೆದು ಕೊಳ್ಳಬೇಕು.

(2) ಯೂರೋಪ್ ಆರ್ಥಿಕ ಸಮುದಾಯದಿಂದ, ಹೆಚ್ಚಾಗಿ ಇದರ ಸದಸ್ಯ ರಾಷ್ಟ್ರವಾದ ಪಶ್ಚಿಮ ಜರ್ಮನಿಯಿಂದ ಬೈಸಿಕಲ್, ಕೊಳವೆಗಳು, ತಿರುಪುಗಳು, ನಾಜೂಕಾದ ಉಡುಗೆಗಳಿಗೆ ಭಾರೀ ಬೇಡಿಕೆಯಿದೆ. ಈ ಸಮುದಾಯದ ಇತರ ರಾಷ್ಟ್ರ ಗಳಿಂದಲೂ ಹೆಚ್ಚು ಬೇಡಿಕೆ ಗಳಿಸಲು ಉಭಯ ರಾಷ್ಟ್ರಗಳ ವ್ಯಾಪಾರಿ ಒಪ್ಪಂದಗಳು ನೆರವಾಗಬಲ್ಲವು. ಈ ರಾಷ್ಟ್ರಗಳು ಇಷ್ಟಪಡುವ ವಸ್ತುಗಳ ಉತ್ಪಾದನೆಯನ್ನು ಸಣ್ಣ ಕೈಗಾರಿಕೆಗಳ ಮೂಲಕ ಪ್ರಾರಂಭಿಸಬೇಕು. ಉದಾ ! ಜಮಖಾನಗಳು, ಅಮೂಲ್ಯ ವಾದ ಮುತ್ತು ರತ್ನಗಳ ಮತ್ತು ಬಂಗಾರದ ಒಡವೆಗಳು, ಆಧುನಿಕ ಉಡುಗೆಗಳು, ಯಂತ್ರಗಳ ಬಿಡಿ ಭಾಗಗಳು, ಮೂಲ ರಸಾಯನಿಕಗಳು, ಇಂಜಿನಿಯರಿಂಗ್ ಸಾಮಗ್ರಿ ಗಳು, ಸೈಕಲ್ಲುಗಳು, ಗೋಡಂಬಿ ಬೀಜದಿಂದ ತಯಾರಿಸಿದ ತಿನಿಸುಗಳು ಹಾಗೂ ಇತರ ಡಬ್ಬಿಯ ಆಹಾರ ಪದಾರ್ಥಗಳು ಮುಂತಾದ ಪದಾರ್ಥಗಳಿಗೆ ಬೇಡಿಕೆ ಈ ರಾಷ್ಟ್ರಗಳಿಂದ ಇರುವುದರಿಂದ ವ್ಯಾಪಾರ ಒಪ್ಪಂದಗಳನ್ನು ಮಾಡಿಕೊಳ್ಳುವುದು ಒಳ್ಳೆಯದು.

(3) ಸಣ್ಣ ಕೈಗಾರಿಕೆಗಳು ಉತ್ಪಾದಿಸುವ ವಸ್ತುಗಳು ನಾಜೂಕಾಗಿ ಇರಲು ಮತ್ತು ಶ್ರೇಷ್ಠ ಗುಣಮಟ್ಟದಿಂದ ಇರಲು ನವೀಕೃತ ಯಂತ್ರೋಪಕರಣಗಳನ್ನು ಉಪ ಯೋಗಿಸಬೇಕು. ಪ್ರಮುಖವಾಗಿ, ರಫ್ತು ಮಾಡುವ ವಸ್ತುಗಳಿಗೆ ಹೆಚ್ಚು ಗಮನ ನೀಡಬೇಕು.

(4) ರಫ್ತು ಮಾಡುವ ಸಣ್ಣ ಕೈಗಾರಿಕೆಗಳಿಗೆ ಸಾಕಷ್ಟು ಕಚ್ಚಾ ವಸ್ತುಗಳನ್ನು ಪೂರೈಕೆ ಮಾಡಬೇಕು. ಸಾಲ ಸೌಲಭ್ಯ ಬೇಕಾದಾಗ ದೊರಕಬೇಕು. ವಿದ್ಯುಚ್ಛಕ್ತಿಯ ಕಡಿತವನ್ನು ಈ ಕೈಗಾರಿಕೆಗಳಿಗೆ ಮಾಡಬಾರದು. ಈ ಕೈಗಾರಿಕೆಗಳಿಗೆ ಬೇಕಾಗುವ ಕಚ್ಚಾ ವಸ್ತುಗಳು ಸರ್ವಕಾಲದಲ್ಲೂ ದೊರೆಯಲು ಸರಕಾರವು ಕಾಪು ದಾಸ್ತಾನು ಮಾಡಿ, ಬೇಕಾದಾಗ ಪೂರೈಕೆ ಮಾಡಬೇಕು. ಈ ಕೈಗಾರಿಕೆಗಳಿಗೆ ಬೇಕಾಗುವ ಹಣ ಕಾಸು ರಿಯಾಯಿತಿ ಬಡ್ಡಿ ದರದಲ್ಲಿ, ಮಧ್ಯಾವಧಿ ಸಾಲದ ರೂಪದಲ್ಲಿ ದೊರಕಬೇಕು. ರಫ್ತು-ಆಮದು ಬ್ಯಾಂಕ್ ಈ ಮಧ್ಯಾವಧಿ ಸಾಲವನ್ನು ಪೂರೈಕೆ ಮಾಡಬೇಕು. ವಾಣಿಜ್ಯ ಬ್ಯಾಂಕುಗಳು ಅಲ್ಪಾವಧಿ ಸಾಲವನ್ನು ಸಕಾಲದಲ್ಲಿ ಪೂರೈಕೆ

ಮಾಡಲು ಬ್ಯಾಂಕ್ ನೀತಿಯನ್ನು ರೂಪಿಸಬೇಕು. ರಫ್ತು ಮಾಡಿದ ವಸ್ತುಗಳಿಂದ ಬರುವ ಹಣದ ಸಂದಾಯ ಈ ಕೈಗಾರಿಕೆಗಳಿಗೆ ಬೇಗ ಆಗುವಂತೆ ರಫ್ತು-ಆಮದು ಬ್ಯಾಂಕ್ ನೋಡಿಕೊಳ್ಳಬೇಕು.

(5) ಸಣ್ಣ ಕೈಗಾರಿಕೆಗಳಿಗೆ ಬೇಕಾಗುವ ಯಂತ್ರೋಪಕರಣಗಳನ್ನು ಆಮದು ಮಾಡಿಕೊಳ್ಳಲು ಸುಂಕರಿಯಾಯಿತಿ ಅವಶ್ಯಕ. ಯಂತ್ರೋಪಕರಣಗಳ ಪೂರೈಕೆ ಸರಕಾರೀ ಸಂಸ್ಥೆಗಳ ಮೂಲಕ ಸುಸೂತ್ರವಾಗಿ ಆಗಬೇಕು.

(6) ಸಾಗರೋತ್ಪನ್ನಗಳನ್ನು ಸಂಸ್ಕರಿಸುವ ಸಣ್ಣ ಕೈಗಾರಿಕೆಗಳಿಗೆ ಬೇಕಾಗುವ ಶೀತಲೀಕರಣದ ಯಂತ್ರಗಳು, ಮತ್ತು ಇತರ ಯಂತ್ರೋಪಕರಣಗಳ ಅವಶ್ಯಕತೆಯನ್ನು ಪೂರೈಸಬೇಕು. ಸಾಗರೋತ್ಪನ್ನಗಳ ಪ್ಯಾಕಿಂಗ್ ಮಾಡಲು ಆಧುನಿಕ ವಸ್ತುಗಳನ್ನು ಉಪಯೋಗಿಸಬೇಕು.

(7) ಸಣ್ಣ ಕೈಗಾರಿಕೆಗಳು ರಫ್ತು ವ್ಯಾಪಾರದಲ್ಲಿ ಬರುವ ತೊಡಕನ್ನು ನಿವಾರಿಸಿ ಕೊಳ್ಳಲು ತಮದೇ ಆದ ಸಹಕಾರೀ ಸಂಸ್ಥೆಗಳನ್ನು ರಚಿಸಿಕೊಳ್ಳುವುದು ಉತ್ತಮ. ಇದರಿಂದ ವಸ್ತುಗಳ ವಿತರಣಾ ವೆಚ್ಚದಲ್ಲಿ ಉಳಿತಾಯವಾಗುತ್ತದೆ. ಅಲ್ಲದೆ ಈ ಸಹಕಾರೀ ಸಂಸ್ಥೆಯಿಂದ ರಫ್ತು ಮಾಡುವ ವಸ್ತುಗಳನ್ನು ಪಟ್ಟಿ ರೂಪದಲ್ಲಿ ಜಾಹೀರಾತು ಮಾಡುವುದರಿಂದ ಜಾಹೀರಾತು ವೆಚ್ಚದಲ್ಲಿಯೂ ಉಳಿತಾಯವಾಗುತ್ತದೆ.

(8) ಸಣ್ಣ ಕೈಗಾರಿಕೆಗಳ ವಸ್ತುಗಳ ರಫ್ತು ಅಭಿವೃದ್ಧಿಗಾಗಿ ಇರುವ ರಫ್ತು ಅಭಿವೃದ್ಧಿ ಪರಿಷತ್ತುಗಳು, ರಫ್ತು ಅಭಿವೃದ್ಧಿ ಸೇವಾ ಸಂಸ್ಥೆಗಳು, ಸ್ಟೇಟ್ ಟ್ರೇಡಿಂಗ್ ನಿಗಮ, ರಫ್ತು ಅಭಿವೃದ್ಧಿ ನಿಗಮ, ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಸಂಸ್ಥೆ ಮುಂತಾದ ಸರಕಾರದ ಸಂಸ್ಥೆಗಳಲ್ಲಿ ಪರಸ್ಪರ ಹೊಂದಾಣಿಕೆಯಿರಬೇಕು. ಅಲ್ಲದೆ ಈ ಸಂಸ್ಥೆಗಳು ಅಂತರರಾಷ್ಟ್ರೀಯ ಮಾರುಕಟ್ಟೆಗಳ ಮೂಲಕ, ಬುಲೆಟಿನ್‌ಗಳ ಮೂಲಕ, ರೇಡಿಯೋ ಮೂಲಕ ತಿಳಿಸುತ್ತಾ ಇರಬೇಕು.

ಮೇಲೆ ತಿಳಿಸಿದ ಅಗತ್ಯ ಕ್ರಮಗಳನ್ನು ಅನುಸರಿಸುವುದರಿಂದ ಮತ್ತು ಸಣ್ಣ ಕೈಗಾರಿಕೆಗಳು ಉತ್ಪಾದನಾ ವೆಚ್ಚವನ್ನು ಕಡಿಮೆಗೊಳಿಸಿ ಶ್ರೇಷ್ಠ ಗುಣ ಮಟ್ಟದ ವಸ್ತುಗಳನ್ನು ಉತ್ಪಾದಿಸುವುದರಿಂದ ಸರಕಾರದ ಸಹಕಾರದೊಡನೆ ರಫ್ತು ಅಭಿವೃದ್ಧಿಯಲ್ಲಿ ಹೆಚ್ಚಳವನ್ನು ಕಾಣಬಹುದು.

ಗ್ರಂಥ ಋಣ

1 Govt. of India, Planning Commission, Draft Sixth Five Year plan (1980-85) p.199

2 D. C. Small Industries Development Organisation. Annual Report for 19_0-31. p.53 New Delhi

3 D. C. Small Industries Development Organisation. Export and Thrive, An Elementary Guide. p. 5 New Delhi

ವಿ. ಎನ್. ಶೇಷಗಿರಿರಾವ್

ರಾಮಕೃಷ್ಣ ದರ್ಶನ

ಶ್ರೀ ರಾಮಕೃಷ್ಣರ (1835-1886) ಹೆಸರು ಇಂದು ಮನೆಮಾತಾಗಿದೆ. ಅಜ್ಞೇಯವಾದ (Agnosticism), ನಾಸ್ತಿಕವಾದ (Atheism), ಸಂದೇಹ ವಾದ (Scepticism), ವಿಷಯ ಲೋಲುಪ ಭೌತಿಕವಾದ (Gross Materialism), ಮುಂತಾದ ವಾದಗಳ ತಲೆದೋರುವಿಕೆಯ ಪರಿಣಾಮವಾಗಿ ಆಧುನಿಕ ಕಾಲದಲ್ಲಿ ಉಂಟಾದ 'ನಂಬಿಕೆ ರಹಿತ ಬುದ್ಧಿಗೆ' ಉತ್ತರವಾಗಿ ಆಧ್ಯಾತ್ಮಿಕತೆ ಯನ್ನು ತಂದವರು ಶ್ರೀ ರಾಮಕೃಷ್ಣರು. ಸಾರ್ವತ್ರಿಕ ಸತ್ಯಗಳನ್ನು ಹರಡಿದ ಮಹಾ ತ್ಮರು. ಅವರ ಜೀವನ ಆಧ್ಯಾತ್ಮಿಕತೆ (spirituality)ಗೆ ಮತ್ತೊಂದು ಹೆಸರು. ದೇವರನ್ನು ಕುರಿತ ಶ್ರದ್ಧೆ, ಪ್ರೀತಿ, ಸ್ವಾರ್ಥತ್ಯಾಗ, ಸಚ್ಚಾರಿತ್ರ್ಯ, ಆತ್ಮಾರ್ಪಣ— ಇವುಗಳಿಗೆ ಇನ್ನೊಂದು ಹೆಸರೇ ಶ್ರೀ ರಾಮಕೃಷ್ಣರು ಎನ್ನುವಷ್ಟರ ಮಟ್ಟಿಗೆ ಅವರು ಪ್ರಸಿದ್ಧರಾಗಿದ್ದಾರೆ. ಇಷ್ಟಾದರೂ ತಾವು ಯಾವುದೇ ಒಂದು ಹೊಸ ಧರ್ಮದ ಸಂಸ್ಥಾಪಕರೆಂದು ಹೇಳಿಕೊಂಡಿಲ್ಲ. ಪ್ರಸಿದ್ದ ತಾತ್ತ್ವಿಕ ಬರಹಗಾರನಾದ ರೊಮೈನ್ ರೋಲಾಂಡ್ ಶ್ರೀ ರಾಮಕೃಷ್ಣರನ್ನು 'The Messiah of Bengal'[1] ಎಂದು ಕರೆದಿದ್ದಾನೆ.

ಶ್ರೀ ರಾಮಕೃಷ್ಣರದು ವಿಶಾಲವಾದ ಸಮರಸ ದೃಷ್ಟಿ. 'ಧರ್ಮ' ಅವರಿಗೆ ಕೇವಲ ಪದಮಾತ್ರವಾಗಿರಲಿಲ್ಲ ; ಸಂಪ್ರದಾಯದಿಂದ ಪಡೆದ ವಿಚಾರಹೀನವಾದ ನಂಬಿಕೆಯೂ (dogma) ಅದಾಗಿರಲಿಲ್ಲ. ಧರ್ಮ ಅವರ ಜೀವನದ ಉಸಿರಾಗಿತ್ತು. ಇಡೀ ಮಾನವ ಜನಾಂಗ ಒಂದು ಎಂದು ಅವರು ಸಾಕ್ಷಾತ್ಕರಿಸಿಕೊಂಡಿದ್ದರು. ಪ್ರತಿಯೊಬ್ಬ ಮಾನವನಲ್ಲೂ ಅವ್ಯಕ್ತವಾಗಿ ಅಡಗಿರುವ ದೈವೀಶಕ್ತಿಯನ್ನು ವ್ಯಕ್ತಗೊಳಿಸುವುದೇ ಪ್ರಪಂಚದ ಪ್ರತಿಯೊಂದು ಧರ್ಮದ ಸಾಧನೆಯ ಗುರಿ ಎಂದು ಅವರು ನಂಬಿದ್ದರು. ದೇವರ ಪ್ರೇಮದ ಮತ್ತಿನಿಂದ ಅವರು ಹುಚ್ಚರಾಗಿದ್ದರು. ಅವರು ಭಕ್ತಿ ಎಂಬ ಅಮಲಿನಲ್ಲಿ ಸದಾ ಮುಳುಗಿರುತ್ತಿದ್ದರು. ದೇವರ ಮೇಲಿನ ಅವರ ಅಪರಿಮಿತ ಭಕ್ತಿ ಎಲ್ಲಾ ಭೇದಭಾವನೆಗಳನ್ನು ನುಂಗಿಬಿಡುತ್ತದೆ. ಅವರು ಧೈರ್ಯ, ಭರವಸೆ, ಸ್ಫೂರ್ತಿ ಗಳ ಪ್ರತೀಕವಾಗಿದ್ದರು. ಅವರಲ್ಲಿ ನಡೆ-ನುಡಿಯ ಸಾಮರಸ್ಯವಿತ್ತು. ಅವರು ಪ್ರತಿ

ಪಾದಿಸಿದ ಧರ್ಮವನ್ನು ಆ ಧರ್ಮ ಈ ಧರ್ಮ ಎನ್ನದೆ 'ಮಾನವತಾಧರ್ಮ' ಎಂದೇ ಕರೆಯಬೇಕು.

ಶ್ರೀ ರಾಮಕೃಷ್ಣರು ಸದಾ ಜ್ಞಾನಪ್ರಭೆಯಿಂದ ಬೆಳಗುತ್ತಿದ್ದರು. ಅವರಿಗೆ ಸುಮಧುರ ಕಂಠವಿತ್ತು. ಭಗವನ್ನಾಮ ಸಂಕೀರ್ತನೆ ಅವರ ಜೀವನದ ಸ್ಫೂರ್ತಿ ಬುಗ್ಗೆಯಾಗಿತ್ತು. ಅವರ ಸನ್ನಿಧಾನದಲ್ಲಿರುವುದೆಂದರೆ ಭಕ್ತಿರಸದಲ್ಲಿ ತಲ್ಲೀನರಾಗುವುದಾಗಿತ್ತು. ಆಧ್ಯಾತ್ಮಿಕತೆಯ ಬಗ್ಗೆ ಅವರು ಅಧಿಕಾರಯುತವಾಗಿ ಮಾತನಾಡಬಲ್ಲವರಾಗಿದ್ದರು. ವಿಶ್ವದ ಸಕಲ ಆಗುಹೋಗುಗಳಲ್ಲೂ ದೈವೀಶಕ್ತಿಯ ಕೈವಾಡವಿದೆಯೆಂದು ಅವರು ದೃಢವಾಗಿ ನಂಬಿದ್ದರು. ಅವರ ಕೇವಲ ಸಾನ್ನಿಧ್ಯವೇ ಬಹು ದೊಡ್ಡ ಉಪದೇಶವಾಗಿತ್ತು. ಅವರ ಉಪದೇಶಗಳು ಮಾನವನ ಸಂದೇಹ ಸಮಸ್ಯೆಗಳಿಗೆ ನೇರ ಉತ್ತರವನ್ನು ನೀಡಿ ಸಾಂತ್ವನಗೊಳಿಸುವ ಓಜಸ್ಸನ್ನು ಹೊಂದಿವೆ. ಅವರು ಬಹುದೊಡ್ಡ ಜ್ಞಾನಿಗಳಾಗಿ, ಯೋಗಿಗಳಾಗಿ ಇಡೀ ಮಾನವತೆಯ ಒಳಿತಿಗಾಗಿ ತಮ್ಮ ಜೀವನವನ್ನು ಮೀಸಲಾಗಿಟ್ಟಿದ್ದರು. ಸರ್ವಧರ್ಮ ಸಮನ್ವಯವನ್ನು ಆಚರಿಸಿ ಬೋಧಿಸಿದ ಇವರು, ಪ್ರಪಂಚದ ಧಾರ್ಮಿಕ ಇತಿಹಾಸದಲ್ಲಿ ಪ್ರಮುಖ ಸ್ಥಾನವನ್ನು ಗಳಿಸಿಕೊಂಡಿದ್ದಾರೆ.

ಸಂದೇಹ–ಸಂಶಯ–ಅಜ್ಞೇಯವಾದದ ಕಾರ್ಗತ್ತಲಿನಲ್ಲಿ ಮುಳುಗಿದ್ದು, ಮುಂದೆ ಸ್ವಾಮಿ ವಿವೇಕಾನಂದರೆಂದು ಪ್ರಸಿದ್ಧರಾದ ನರೇಂದ್ರನಲ್ಲಿ ಆಧ್ಯಾತ್ಮಿಕ ಜಾಗೃತಿಯನ್ನುಂಟು ಮಾಡಿದವರು ಶ್ರೀ ರಾಮಕೃಷ್ಣರು. ವಿವೇಕಾನಂದರ ವ್ಯಕ್ತಿತ್ವದೊಳಕ್ಕೆ ಆಧ್ಯಾತ್ಮಿಕ ಹೊಳೆಯನ್ನು ನುಗ್ಗಿಸಿದವರು ಶ್ರೀ ರಾಮಕೃಷ್ಣರು. ವಿವೇಕಾನಂದರ ಧರ್ಮ–ದರ್ಶನದ ಚಿಲುಮೆ ಸ್ವರೂಪರಾಗಿದ್ದವರು ಶ್ರೀ ರಾಮಕೃಷ್ಣರು. ಅವರ ಬೋಧನೆಗಳು ಸರ್ವರಿಗೂ ಅನ್ವಯಿಸುವಂಥಾದ್ದಾಗಿವೆ. ವಿಶ್ವದ ಸರ್ವಧರ್ಮಗಳ ಸಾರವನ್ನು ಅವರ ಬೋಧನೆಯಲ್ಲಿ ಕಾಣಬಹುದಾಗಿದೆ. ಅವರು ವೇದೋಪನಿಷತ್ತು ಗೀತೆಗಳ ಬೋಧನೆಯ ಪ್ರತೀಕರಾಗಿದ್ದರು. ಅವರ ಬೋಧನೆಗಳು ವೇದೋಪನಿಷತ್ತು ಗೀತೆಗಳ ಬೋಧನೆಯ ಮೇಲಿನ ಜೀವಂತ ಭಾಷ್ಯವೇನೋ ಎಂಬಂತಿವೆ. ಅವರ ಜೀವನ, ಅವರ ಬೋಧನೆಗಳಿಗಿಂತ ಸಾವಿರಪಟ್ಟು ಹೆಚ್ಚಾಗಿತ್ತು. ಬದ್ಧ ಜೀವಿಗಳ ಬಗ್ಗೆ ಅವರಿಗೆ ಅತೀವ ಅನುಕಂಪವಿತ್ತು. ಅವರು ಜ್ಞಾನಿಯೂ ಹೌದು, ಭಕ್ತರೂ ಹೌದು. ಗೃಹಸ್ಥ ಹಾಗೂ ಸನ್ಯಾಸಾಶ್ರಮಗಳೆರಡರ ಮಹತ್ವವನ್ನು ಅವರು ಒತ್ತಿ ಒತ್ತಿ ಹೇಳುತ್ತಿದ್ದರು. ಆಧ್ಯಾತ್ಮಿಕ ಸಾಧನೆಯಲ್ಲಿ ವ್ಯಕ್ತಿಸ್ವಾತಂತ್ರ್ಯವನ್ನು ಪ್ರಬಲವಾಗಿ ಪ್ರತಿಪಾದಿಸುವವರಾಗಿದ್ದರು. ಪರರ ಇಂಗಿತವನ್ನು ಸ್ಪಷ್ಟವಾಗಿ ಗುರುತಿಸುವ ಶಕ್ತಿಯುಳ್ಳವರಾಗಿದ್ದರು. ಅವರು ಕಠೋರ ಆಧ್ಯಾತ್ಮಿಕ ಸಾಧನೆಗಳನ್ನು ತೀವ್ರತರವಾಗಿ ಮಾಡುತ್ತಿದ್ದರು. ಅವರು ಮಾಡದಿದ್ದ ಆಧ್ಯಾತ್ಮಿಕ ಸಾಧನೆಯಿಲ್ಲ. ನಿರಂತರ ಪ್ರಾರ್ಥನೆ, ಮನನಗಳಿಂದ ತಮ್ಮ ಶರೀರದ ಮೇಲೆ ಪೂರ್ಣ ಪ್ರಭುತ್ವವನ್ನು ಹೊಂದಿದ್ದರು. ತಮಗೆ ಇಚ್ಛೆಬಂದಾಗ ಸಮಾಧಿಸ್ಥಿತಿಗೆ ಹೋಗುವಷ್ಟು ತೀವ್ರತರವಾಗಿತ್ತು ಅವರ ಸಾಧನೆ! ಅವರು ಸದಾ ಭಾವಿಷ್ಟರಾಗಿರುತ್ತಿದ್ದರು. ದೇವರ ನಾಮೋಚ್ಚಾರಣೆ

ಮಾತ್ರದಿಂದಲೇ ಅವರು ಸಮಾಧಿ ಸ್ಥಿತಿಯನ್ನು ಹೊಂದುತ್ತಿದ್ದರು. ಅವರನ್ನು ದೈವಿಕತೆಯಿಂದ ಅಮಲೇರಿದ ಪಾರ್ವಾತ್ವರು ಎಂದೇ ಕರೆಯುವುದು ವಾಡಿಕೆ. ಧರ್ಮಾನುಷ್ಠಾನದಲ್ಲಿ ಅವರು ಬಹುದೊಡ್ಡ ಪ್ರಯೋಗಾತ್ಮಕ ಸಾಧಕರಾಗಿದ್ದರು,

ಶ್ರೀ ರಾಮಕೃಷ್ಣರನ್ನು ಪರಮಹಂಸರೆಂದು ಜಗತ್ತು ಕರೆಯುತ್ತಿದೆ. ಪರಮಹಂಸ ಎಂದರೆ ಮಹಾಹಂಸ, ಬ್ರಹ್ಮಜ್ಞಾನಿ ಎಂದರ್ಥ. ಇಲ್ಲಿ ಹಂಸ ಆತ್ಮನ ಸಂಕೇತವಾಗಿದೆ. ಬಂಧನದಿಂದ ಹೊರಬಂದ, ಅಂದರೆ ಪರಿಪೂರ್ಣತೆಯನ್ನು ಪಡೆದ ಆತ್ಮವೆಂದು ಇದರ ಅರ್ಥ. ಆಧುನಿಕ ಅರ್ಥದಲ್ಲಿ ಶ್ರೀ ರಾಮಕೃಷ್ಣರು 'ವಿದ್ಯಾವಂತ'ರಲ್ಲ. ತರ್ಕ, ನ್ಯಾಯ, ಯುಕ್ತಿ, ವ್ಯಾಕರಣಗಳನ್ನು ಅಭ್ಯಾಸಮಾಡಿದವರಲ್ಲ; ವೇದೋಪನಿಷತ್ತು ಗೀತೆ ಮುಂತಾದ ಶಾಸ್ತ್ರಗ್ರಂಥಗಳಲ್ಲಿ 'ಒಣಪಂಡಿತ'ರಾಗಿರಲಿಲ್ಲ. ಅವರು ಯಾವುದೇ ಗ್ರಂಥವನ್ನು ಓದಿ ಅನುಸರಿಸಿದವರಲ್ಲ. ಆಧ್ಯಾತ್ಮಿಕ ಜೀವನಾನುಭವವೇ ಅವರ ಉಪದೇಶದ ತಳಹದಿ. ಉಪದೇಶಕ್ಕಿಂತ ಅವರು ಸ್ವತಃ ಆಚರಿಸಿ ತೋರಿಸಿದ್ದೇ ಹೆಚ್ಚು. ಹೀಗೆ ಹೊಟ್ಟೆ ಹೊರಕೊಳ್ಳುವ ವಿದ್ಯೆ, ತನ್ನ ನೈಜ ಸ್ವರೂಪವನ್ನು, ದೇವರನ್ನು ತೋರಿಸುವ ವಿದ್ಯೆ—ಇವುಗಳ ನಡುವೆ ಬಹಳ ಅಂತರವಿದೆ. ಮೊದಲನೆಯದನ್ನು ಉಪನಿಷತ್ತುಗಳು 'ಅಪರ'ವಿದ್ಯೆಯೆಂದರೆ, ಎರಡನೆಯದನ್ನು 'ಪರಾ'ವಿದ್ಯೆ ಅಥವಾ ಆತ್ಮವಿದ್ಯೆಯೆಂದು ವಿವರಿಸುತ್ತವೆ. ಶ್ರೀ ರಾಮಕೃಷ್ಣರು ಮೊದಲಿನ ಔಪಚಾರಿಕ ಅರ್ಥದಲ್ಲಿ 'ವಿದ್ಯಾವಂತ'ರೆನಿಸದಿದ್ದರೂ, ಎರಡನೆಯ ಅರ್ಥದಲ್ಲಿ 'ನಿಜವಾದ ವಿದ್ಯಾವಂತ'ರಾಗಿದ್ದರು; ಅತ್ಯುಚ್ಚ ಜ್ಞಾನ ಸಂಪನ್ನರಾಗಿದ್ದರು; 'ಆತ್ಮವಿದ್ಯೆ'ಯಲ್ಲಿ ಅದರ ಅನುಷ್ಠಾನದಲ್ಲಿ ಪ್ರಚಂಡ ಸಾಧಕರಾಗಿದ್ದರು.

೨

ಒಂದಾನೊಂದು ಕಾಲದಲ್ಲಿ ಪ್ರೌಢವೂ ಸ್ವಯಂಪರಿಪೂರ್ಣವೂ ಆಗಿದ್ದು ಕಾಲಾಂತರದಲ್ಲಿ ಕಾರಣಾಂತರಗಳಿಂದ ಮಹತ್ವದಲ್ಲಿ ಕ್ಷೀಣಗೊಂಡ ಹಿಂದೂಧರ್ಮದ ಬೋಧನೆಗಳಿಗೆ ಪುನಃ ಜೀವ ತುಂಬುವ ಮಹತ್ಕಾರ್ಯದಲ್ಲಿ ಭಾಗವಹಿಸಿದ ಆಧುನಿಕ ಭಾರತೀಯ ಸಂಘಟನೆಗಳಲ್ಲಿ 'ರಾಮಕೃಷ್ಣ ಸಂಘಟನೆ' ಅತ್ಯಂತ ಪ್ರಭಾವಪೂರ್ಣವಾದುದಾಗಿದೆ. ವಿಶಾಲ ದೃಷ್ಟಿಕೋನದ, ಸರ್ವಧರ್ಮ ಸಮನ್ವಯ ದೃಷ್ಟಿಯನ್ನು ಜನಮನದಲ್ಲಿ ರೂಢಿಸಿ ಬೆಳಸಿದ್ದು ಅದರ ವೈಶಿಷ್ಟ್ಯತೆ. ರಾಮಕೃಷ್ಣ ಸಂಘಟನೆ ತನಗಿಂತ ಮೊದಲಿದ್ದ ಎಲ್ಲಾ ಸಂಘಟನೆಗಳ ಲೋಪದೋಷಗಳನ್ನು ಸಮರ್ಪಕವಾಗಿ ನಿವಾರಿಸುತ್ತದೆ. ಬ್ರಹ್ಮಸಮಾಜದ್ದು ಅನುಭವಶೂನ್ಯವಾದ ಕೇವಲ ವಿಚಾರತರ್ಕದ ಅತ್ಯುತ್ತಮ ವ್ಯವಸ್ಥೆ (eclecticism) ಮಾತ್ರವಾದರೆ, ರಾಮಕೃಷ್ಣ ಸಂಘಟನೆಯದು ಅನುಭವ ಸಹಿತವಾದ ಅನುಷ್ಠಾನ ಬೋಧನೆ. ಎಲ್ಲಾ ಧರ್ಮಗಳ ಸಾರವು ಒಂದೇ ಎಂಬ ಹೇಳಿಕೆಯನ್ನು ಕೇವಲ ವಿಚಾರಮಟ್ಟದಲ್ಲಿ ನಿಲ್ಲಿಸದೆ ಅನುಭವಕ್ಕೆ ಅಳವಡಿಸಿ ಪ್ರತ್ಯಕ್ಷವಾಗಿ ತೋರಿಸಿದ್ದು ರಾಮಕೃಷ್ಣ ಸಂಘಟನೆಯ ಹೆಚ್ಚುಗಾರಿಕೆ. ಆರ್ಯ ಸಮಾಜ ಹಿಂದೂ

ಧರ್ಮದ ಪುನರುತ್ಥಾನ ಕಾರ್ಯದಲ್ಲಿ ತೊಡಗಿ ಬಹುದೊಡ್ಡ ಸೇವೆಯನ್ನು ಮಾಡಿದರೂ. ಅದು ಇಸ್ಲಾಂ ಕ್ರೈಸ್ತ ಧರ್ಮಗಳ ವಿರೋಧವನ್ನು ಕಟ್ಟಿಕೊಂಡಿತು. ಇದು ಆರ್ಯ ಸಮಾಜದ ದೊಡ್ಡ ದೋಷ. ಈ ದೋಷವನ್ನು ರಾಮಕೃಷ್ಣ ಸಂಘಟನೆಯಲ್ಲಿ ಬಹಳ ಚೆನ್ನಾಗಿ ನಿವಾರಿಸಲಾಗಿದೆ. ಯಾವ ಧರ್ಮವೂ ಮೇಲಲ್ಲ, ಯಾವ ಧರ್ಮವೂ ಕೀಳಲ್ಲ. ಎಲ್ಲಾ ಧರ್ಮಗಳೂ ದೈವಸಾಕ್ಷಾತ್ಕಾರ ಎಂಬ ಒಂದೇ ಗುರಿಯೆಡೆಗೆ ಕೊಂಡೊಯ್ಯುವ ವಿವಿಧ ಮಾರ್ಗಗಳಷ್ಟೆ. ಎಲ್ಲಾ ಧರ್ಮದ ಎಲ್ಲಾ ಮಾರ್ಗಗಳೂ, ರಾಜಮಾರ್ಗಗಳು, ಎಲ್ಲವೂ ಪ್ರತಿಯೊಂದರಷ್ಟೇ ಸತ್ಯ ಎಂದು ರಾಮಕೃಷ್ಣ ಸಂಘಟನೆ ಸಾರುತ್ತದೆ. ಹಾಗೆಯೇ ಹಿಂದೂ ಧರ್ಮದ ದಿವ್ಯವೂ, ಚಿರನೂತನವೂ ಆದ ಬೋಧನೆಗಳಿಂದ ಬ್ರಿಟಿಷ್ ಮಹಿಳೆ ಅನಿಬೆಸೆಂಟ್ ಆಕರ್ಷಿತಳಾಗಿ, ಭಾರತಕ್ಕೆ ಬಂದು ನೆಲಸಿ ಅದರ ಸಂದೇಶವನ್ನು 'ಥಿಯಸಾಫಿಕಲ್ ಸಂಘಟನೆಯ ಮೂಲಕ ಸಾರಿ, ಭಾರತೀಯರ ಗೌರವಾದರಗಳಿಗೆ ಪಾತ್ರಳಾದರೂ ಕೊನೆಕೊನೆಯಲ್ಲಿ ಆ ಸಂಘಟನೆ, ಅತೀಂದ್ರಿಯ ಶಕ್ತಿಗಳನ್ನು ಹೊಂದಿದ ಕೆಲವೇ ವ್ಯಕ್ತಿಗಳಿಗೆ ಸೀಮಿತವಾಗಿ ಸಂಕೀರ್ಣವಾದ 'ಗುಪ್ತ ಧರ್ಮ'ವಾಗಿ ತನ್ನ ಪ್ರಭಾವವನ್ನು ಕಳೆದುಕೊಂಡಿತು. ಆದರೆ 'ರಾಮಕೃಷ್ಣ ಸಂಘಟನೆ' ಸೀಮಿತವಾದ ಯಾವ ಗುಪ್ತಧರ್ಮವನ್ನೂ ಬೋಧಿಸದೆ, ಸಾರ್ವತ್ರಿಕ ಸತ್ಯಗಳನ್ನು ಸರ್ವರ ಮನದಲ್ಲೂ ನಾಟುವಂತೆ ಮಾಡುವುದರ ಮೂಲಕ ಕ್ರಾಂತಿ ಎಬ್ಬಿಸಿತು.

೩

ಆಧುನಿಕ ಭಾರತೀಯ ಚಿಂತನೆಯ ವಿಶ್ವಾಸವನ್ನು ಗುರುತಿಸುವಾಗ ಶ್ರೀರಾಮಕೃಷ್ಣ ಹಾಗೂ ಗ್ರೀಕ್ ತತ್ತ್ವಜ್ಞಾನಿ ಸಾಕ್ರಟೀಸರ ನಡುವಿನ ಹೋಲಿಕೆ ಹೆಚ್ಚು ಸಮಂಜಸವಾಗಿದೆ. ಇಬ್ಬರಿಗೂ ಸರಿಸಮಾನವಾಗಿರುವ ಕೆಲವು ಅಂಶಗಳು ಯಾವುವೆಂದರೆ :

(i) ತಮ್ಮ ತಮ್ಮ ಸಮಾಜಗಳು ವಿಷಮ ಘಟ್ಟವನ್ನು ಹಾದುಹೋಗುತ್ತಿರುವ ಸಂದರ್ಭದಲ್ಲಿ ಇಬ್ಬರೂ ಪಾದಾರ್ಪಣ ಮಾಡಿದರು. ಅದು ಆಧ್ಯಾತ್ಮಿಕ ಜಾಗೃತಿ ಮತ್ತು ಪುನರುಜ್ಜೀವನದ ಸಂಧಿಕಾಲ. ಆಗಿನ ಸಮಾಜದಲ್ಲಿ ಎಲ್ಲೆಡೆಯಲ್ಲಿಯೂ ಅನೈತಿಕತೆ, ಸಂಶಯವಾದ, ಅಶಾಢಭೂತಿತನ, ವಿಷಯ ಲೋಲುಪತೆಗಳು ತಾಂಡವವಾಡುತ್ತಿದ್ದುವು. ಸತ್ಯ, ಧರ್ಮ, ನೀತಿಗಳು ಭಾರವಾದ ವಿಧ್ವಂಸಕ ವಿಮರ್ಶೆಗೊಳಪಟ್ಟು ಸತ್ವಹೀನವಾಗಿದ್ದವು. ಅಂತಹ ಸನ್ನಿವೇಶದಲ್ಲಿ ಇಬ್ಬರೂ ತಮ್ಮ ತಮ್ಮ ಸಮಾಜಗಳು ಸಂಶಯದಿಂದ ನಿಶ್ಚಯ ಜ್ಞಾನಕ್ಕೆ, ಅಸತ್ಯದಿಂದ ಸತ್ಯದೆಡೆಗೆ, ಕತ್ತಲೆಯಿಂದ ಬೆಳಕಿನೆಡೆಗೆ ಬರಲು ಶ್ರಮಿಸಿದರು.

(ii) ಇಬ್ಬರೂ ತಮ್ಮ ತಮ್ಮ ಪ್ರಸಿದ್ಧ ಶಿಷ್ಯರನ್ನು ಸೃಜಿಸಿದರು. ಶ್ರೀರಾಮಕೃಷ್ಣರು ಲೋಕ ವಿಖ್ಯಾತರಾದ ಸ್ವಾಮಿ ವಿವೇಕಾನಂದರನ್ನು ಸೃಜಿಸಿದರೆ, ಸಾಕ್ರ

ಟೇಸ್ ಬೌದ್ಧಿಕ ಚಕ್ರವರ್ತಿ ಹಾಗೂ ಮುಂದೆ ಬೆಳೆದ ಪಾಶ್ಚಾತ್ಯ ತಾತ್ತ್ವಿಕ ಚಿಂತನೆಯ ತಳಹದಿ ಎನಿಸಿದ ಪ್ಲೇಟೋ ಎಂಬ ದಾರ್ಶನಿಕನನ್ನು ಸೃಜಿಸಿದನು.

(iii) ಇಬ್ಬರಿಗೂ ಜೀವನ ಮತ್ತು ಚಿಂತನೆ ಒಂದೇ ಆಗಿದ್ದವು. 'ಹೇಳೋದು ಪುರಾಣ ತಿನ್ನೋದು ಬದನೇಕಾಯಿ' ಎಂಬ ಗಾದೆಯಂತೆ ವಿಚಾರ–ಆಚಾರಗಳ ನಡುವೆ ಕೂಡಿಸಲಾಗದ ಕಂದಕ ಇವರಲ್ಲಿರಲಿಲ್ಲ. ಇವರಿಬ್ಬರೂ ತಾವು ಬೋಧಿಸುದುದನ್ನು ತಮ್ಮ ಜೀವನಕ್ಕೆ ಅನ್ವಯಿಸಿಕೊಂಡು ಅದರ ಸತ್ಯವನ್ನು ತ್ರಿಕರಣಪೂರ್ವಕವಾಗಿ ಪ್ರಮಾಣಿಸಿ ಜಗತ್ತಿಗೆ ನೀಡುತ್ತಿದ್ದರು.

(iv) ಇಬ್ಬರೂ ಆಯಾಕಾಲದ ಬಹುಮುಖ್ಯ ವ್ಯಕ್ತಿಗಳನ್ನು ತಮ್ಮ ದಿವ್ಯ ಬೋಧನೆಗಳಿಂದ ತಮ್ಮೆಡೆಗೆ ಸೆಳೆಯುವ ಪ್ರಬಲ ಆಯಸ್ಕಾಂತ ಶಕ್ತಿಯನ್ನು ಹೊಂದಿದ್ದರು. ಅಂದಿನ ಭಾರತೀಯ ಸಮಾಜದ ಅತಿ ಮುಖ್ಯ ವ್ಯಕ್ತಿಗಳೆನಿಸಿದ ಕೇಶವ ಚಂದ್ರ ಸೇನ, ದೇವೇಂದ್ರನಾಥ ಟಾಗೋರ್, ದಯಾನಂದ ಸರಸ್ವತಿ ಈಶ್ವರ ಚಂದ್ರ ವಿದ್ಯಾ ಸಾಗರ ಮುಂತಾದವರು ಅನೇಕ ಸಂದರ್ಭಗಳಲ್ಲಿ ಅನೇಕ ಬಾರಿ ಶ್ರೀ ರಾಮಕೃಷ್ಣರನ್ನು ಸಂದರ್ಶಿಸಿ ತಮ್ಮ ತಮ್ಮ ಕ್ಲಿಷ್ಟ ಸಮಸ್ಯೆಗಳಿಗೆ ಸಮರ್ಪಕವಾದ ಪರಿಹಾರಗಳನ್ನು, ಅವರು ಸಾಮೀಪ್ಯ ಲಾಭದಿಂದ ವಿಶೇಷ ಸ್ಫೂರ್ತಿಯನ್ನು ಪಡೆದು ಹೊರಬರುತ್ತಿದ್ದರು. ಹಾಗೆಯೇ ಅಥೆನ್ಸಿನ ಅಂದಿನ ಪೀಳಿಗೆ, ಅವರು ಯುವಕರಿರಲಿ, ಮಧ್ಯ ವಯಸ್ಕರಿರಲಿ, ವೃದ್ಧರಿರಲಿ ಒಂದಲ್ಲ ಒಂದು ರೀತಿಯಿಂದ ತಮಗರಿವಿಲ್ಲದೆಯೇ ಸಾಕ್ರಟೀಸನ ವಾದ ವೈಖರಿಗೆ, ಅವನ ವಿಚಾರ–ಆಚಾರ ನಿಷ್ಠೆಗೆ ತಲೆಬಾಗಿ ಆಕರ್ಷಿತರಾಗುತ್ತಿದ್ದರು.

(v) ಇಬ್ಬರೂ ಶಾಶ್ವತ ಮೌಲ್ಯಗಳ ಆರಾಧಕರೂ, ಕಲ್ಯಾಣಗುಣಗಳ ಆಗರವೂ ಆಗಿದ್ದರು; ತನ್ಮೂಲಕ ದೇದೀಪ್ಯ ಚಿಂತಕರೂ ಆಗಿದ್ದರು.

ಇವರಿಬ್ಬರ ನಡುವಿನ ವ್ಯತ್ಯಾಸವೆಂದರೆ ಇದು: ಶ್ರೀ ರಾಮಕೃಷ್ಣರು ಅಂದಿನ ರಾಜಕೀಯಕ್ಕೆ ನಿರ್ಲಿಪ್ತರಾಗಿದ್ದರು. ಅದರಲ್ಲಿ ಅವರು ಎಳ್ಳಷ್ಟು ಆಸಕ್ತಿಯನ್ನೂ ಹೊಂದಿರಲಿಲ್ಲ. ಆದರೆ ಸಾಕ್ರಟೀಸ್ ಅಂದಿನ ಸಕ್ರಿಯ ರಾಜಕೀಯದಲ್ಲಿ ಆಸಕ್ತಿಯಿಂದ ಪಾಲ್ಗೊಳ್ಳುತ್ತಿದ್ದನು.

ಹಾಗೆಯೇ ಸಾಕ್ರಟೀಸ್ ತರ್ಕ ನಿಪುಣನಾಗಿದ್ದನು. ಪ್ರತಿಯೊಂದನ್ನೂ ತರ್ಕ ಎಂಬ ಒರೆಗಲ್ಲಿನಿಂದ ಉಜ್ಜಿ ಸತ್ಯವನ್ನು ಪರೀಕ್ಷಿಸುವ, ಪ್ರತಿಯೊಂದರ ಗುಣಲಕ್ಷಣಗಳನ್ನು ತಾರ್ಕಿಕವಾಗಿ ಹೇಳುವ ಮನೋಭಾವವನ್ನು ಹೊಂದಿದ್ದನು. ಪ್ರತಿಯೊಂದು ವಸ್ತುವಿಗೂ ಅದರ ಲಕ್ಷಣ ವ್ಯಾಖ್ಯೆ (definition) ಯನ್ನು ನೀಡುವುದರ ಮೂಲಕ ಅರ್ಥಮಾಡಿಕೊಳ್ಳಬೇಕೆಂಬ ಅಂಶವನ್ನು ಹುಟ್ಟು ಹಾಕಿದವನು ಸಾಕ್ರಟೀಸ್.

ಆದರೆ ಶ್ರೀ ರಾಮಕೃಷ್ಣರಲ್ಲಿ ಒಣತರ್ಕಕ್ಕಿಂತ ಅದರ ತಳಹದಿಯಾದ 'ಅನುಭವ'ದ ಕಡೆಗೇ ಗಮನ ಹೆಚ್ಚು. ಅವರು ಸಾರಗ್ರಾಹಿಯಾಗಿ, ಭಾವವಿಷ್ಟರಾಗಿ ಅನುಭವದ ಪ್ರಶಾಂತ ಪ್ರಸನ್ನ ಗಂಭೀರ ಗಣಿಯಾಗಿದ್ದರು.

೪

ಶ್ರೀ ರಾಮಕೃಷ್ಣರು ಬೋಧಿಸಿದರೇ ಹೊರತು ಏನನ್ನೂ ಬರೆಯಲಿಲ್ಲ. ಅವರ ಬೋಧನೆಗಳು, ಅವರು ಅವರ ಶಿಷ್ಯರೊಡನೆ ನಡೆಸಿದ ಸಂಭಾಷಣೆಗಳು, ಅವರು ಹೇಳಿದ ಕಥೆಗಳು, ಉಪಕಥೆಗಳು, ಮುಂತಾದವುಗಳು ಸುದೈವದಿಂದ ಲಿಖಿತರೂಪದಲ್ಲಿ ಜೋಪಾನವಾಗಿ ಸಂಗ್ರಹಿಸಲ್ಪಟ್ಟಿವೆ. 'ಮ' ಎಂಬ ಗುಪ್ತನಾಮದಿಂದ ಪರಿಚಿತರಾಗಿರುವ ಮಹೇಂದ್ರನಾಥ ಗುಪ್ತ ಎಂಬುವರು ಬಂಗಾಳಿ ಭಾಷೆಯಲ್ಲಿ ಬರೆದ 'ಶ್ರೀ ರಾಮಕೃಷ್ಣ ಕಥಾಮೃತ' ಎಂಬ ಗ್ರಂಥವೇ ರಾಮಕೃಷ್ಣದರ್ಶನಕ್ಕೆ ಆಧಾರ. ಇದು ಬಹುತೇಕ ಭಾರತೀಯ ಭಾಷೆಗಳಿಗೆ ತರ್ಜುಮೆಯಾಗಿದೆ. ಇದನ್ನು ಇಂಗ್ಲೀಷಿಗೆ ಸ್ವಾಮಿ ನಿಖಿಲಾನಂದರು 'The Gospel of Sri Ramakrishna' ಎಂಬ ಹೆಸರಿನಿಂದ ಭಾಷಾಂತರಿಸಿದ್ದಾರೆ. ಇದಲ್ಲದೆ ಶ್ರೀ ರಾಮಕೃಷ್ಣರ ನೇರ ಶಿಷ್ಯರಲ್ಲಿ ಒಬ್ಬರಾದ ಸ್ವಾಮಿ ಶಾರದಾನಂದರು ಬಂಗಾಳಿ ಭಾಷೆಯಲ್ಲಿ ಬರೆದ 'ಶ್ರೀ ರಾಮಕೃಷ್ಣ ಲೀಲಾ ಪ್ರಸಂಗ' ಹಾಗೂ ಪ್ರಸಿದ್ಧ ಜರ್ಮನ್ ತಾತ್ವಿಕ ಬರಹಗಾರನಾದ ಮ್ಯಾಕ್ಸ್ ಮುಲ್ಲರ್ ಮತ್ತು ಫ್ರೆಂಚ್ ತಾತ್ವಿಕ ರೊಮನ್ ರೊಲಾಂಡ್ ಬರೆದ ಶ್ರೀ ರಾಮಕೃಷ್ಣರ ಜೀವನ ಚರಿತ್ರೆಗಳೂ ರಾಮಕೃಷ್ಣದರ್ಶನಕ್ಕೆ ಆಧಾರ ಗ್ರಂಥಗಳು.

'ಶ್ರೀ ರಾಮಕೃಷ್ಣ ಕಥಾಮೃತ' ಎಂಬ ಗ್ರಂಥ ಆಧ್ಯಾತ್ಮಿಕ ಆಳವನ್ನೂ, ವಿಷಯ ವೈವಿಧ್ಯತೆಯನ್ನೂ, ತಾಳ್ಮೆ, ಕಷ್ಟಸಹಿಷ್ಣುತೆ, ಜಾಣ್ಮೆ, ವ್ಯವಹಾರ ಕೌಶಲ್ಯ, ವಿಡಂಬನೆ, ವ್ಯಂಗ್ಯ, ಲಹರಿ ಮುಂತಾದುವುಗಳನ್ನೂ ಹೊರತುಪಡಿಸುವಿಕೆಯಲ್ಲಿ ಅಸದೃಶವಾದುದು. ಕಥೆ, ಉಪಕಥೆ, ಕಾಲ್ಪನಿಕ ಹಾಗೂ ನೈಜ ಸಂದರ್ಭ ಮುಂತಾದ ಉದಾಹರಣೆಗಳ ಮೂಲಕ ಹೇಳಬೇಕಾದ ವಿಷಯವನ್ನು ಕಣ್ಣಿಗೆ ಕಟ್ಟುವಂತೆ, ಮನಮುಟ್ಟುವಂತೆ ಹೇಳುವ ಶ್ರೀ ರಾಮಕೃಷ್ಣರ ಚಮತ್ಕಾರವನ್ನು ಇಲ್ಲಿ ಕಾಣಬಹುದಾಗಿದೆ. ಅವರ ಸೂಕ್ಷ್ಮದೃಷ್ಟಿ, ಪ್ರಖರ ಬುದ್ಧಿ ಮತ್ತು ಅಸಾಧಾರಣ ಪ್ರಜ್ಞೆಯ ದ್ಯೋತಕವಾಗಿದೆ ಈ ಗ್ರಂಥ. ಇದು ಈ ಗ್ರಂಥದ ವೈಶಿಷ್ಟ್ಯವೂ ಹೌದು. ತರ್ಕಕ್ಕೆ ಅವರು ಬೆನ್ನು ತಿರುಗಿಸಿದ್ದರೂ ಅವರ ಮಾತುಗಳಲ್ಲಿ ಅದ್ಭುತ ತರ್ಕ ಇಲ್ಲದಿಲ್ಲ. ಜ್ಞಾನಮೀಮಾಂಸೆಯಲ್ಲಿ ಚರ್ಚಿತವಾಗಿರುವ ಜ್ಞಾನದ ಉಗಮಗಳೆನಿಸಿದ ಪ್ರತ್ಯಕ್ಷ, ಅನುಮಾನ, ಉಪಮಾನ, ಶಬ್ದ ಮುಂತಾದ ಪ್ರಮಾಣಗಳನ್ನು ಹೇರಳವಾಗಿ ಉಪಯೋಗಿಸಿರುವುದನ್ನು ಈ ಗ್ರಂಥದಲ್ಲಿ ಕಾಣಬಹುದು. ಸಂಭಾಷಣೆಗಳು ಮನೋಜ್ಞವೂ ಪ್ರಫುಲ್ಲವೂ ಆಕರ್ಷಕವೂ ಆಗಿವೆ. ಅವುಗಳಲ್ಲಿ ಉಪನಿಷತ್ತಿನ ಉಪದೇಶ ವಾಕ್ಯಗಳ ಛಾಯೆ ಇಲ್ಲದಿಲ್ಲ. ಅವು ಅವರ ಅಪಾರವಾದ ಜ್ಞಾನವನ್ನು ಹೊರಸೂಸುತ್ತವೆ. ಈ ಸಂಭಾಷಣೆಗಳಲ್ಲಿ ಅವರ ಉಪದೇಶ ನೀರ್ಝರಿಯಂತೆ ಹರಿದುಬಿಡುತ್ತದೆ. ಅವನ್ನು ಓದುವುದೆಂದರೆ ಅಮೃತಸುಧೆಯನ್ನು ಪಾನಮಾಡಿದಂತೆ, ಋಷಿವಾಣಿಯನ್ನು ಕೇಳಿದಂತೆ.

೫

ಶ್ರೀ ರಾಮಕೃಷ್ಣರ ತಾತ್ವಿಕ ಚಿಂತನೆಯನ್ನು ವ್ಯವಸ್ಥಾಬದ್ಧವಾಗಿ ರೂಪಿಸುವುದು ತ್ರಾಸದಾಯಕ ಕೆಲಸ. ಏಕೆಂದರೆ ಸೈದ್ಧಾಂತಿಕ ಕುತೂಹಲವಾಗಲೀ, ಸೈದ್ಧಾಂತಿಕ ಮಟ್ಟದಲ್ಲಿ ಒಂದು ಚಿಂತನೆಯನ್ನು ರೂಪಿಸುವುದಾಗಲೀ ಅವರ ಗುರಿಯಾಗಿರಲಿಲ್ಲ. ಅವರದು ಪ್ರಧಾನತಃ ಅನುಷ್ಠಾನ ನಿಲುವು, "ಒಂದು ತಂಬಿಗೆ ನೀರೇ ನನ್ನ ತೃಷ್ಣೆಯನ್ನು ಇಂಗಿಸಿಬಿಡಬಲ್ಲದುದ್ದರಿಂದ ಈ ಜಗತ್ತಿನಲ್ಲಿ ಒಟ್ಟು ಪರಿಮಾಣ ನೀರು ಇದೆ ಎಂಬುದನ್ನು ಅರಿಯುವ ಅವಶ್ಯಕತೆಯೇನಿರದು"2 ಎನ್ನುವ ನಿಲುವು ಅವರದು. ವ್ಯವಸ್ಥಾಬದ್ಧ ಸೈದ್ಧಾಂತಿಕ ಚಿಂತನೆಯನ್ನು ರೂಪಿಸುವುದು ಅವರ ಗುರಿಯಾಗಿರಲಿಲ್ಲ; ಅದನ್ನು ಅವರು ಅಷ್ಟಾಗಿ ತಲೆಗೆ ಹಚ್ಚಿಕೊಂಡವರಲ್ಲ. ಆತ್ಯಂತಿಕ ಸಮಸ್ಯೆಗಳಿಗೆ ಪರಿಹಾರವನ್ನು ಅನುಭವದ ಮೂಲಕ ಕಂಡುಹಿಡಿಯುವುದೇ ಅವರ ಪ್ರಥಮ ಗುರಿಯಾಗಿತ್ತು. ಅನಾವಶ್ಯಕ ಕುತೂಹಲಕ್ಕೆ ಸ್ಥಳವಿರಲಿಲ್ಲ: "ತೋಟಕ್ಕೆ ಬಂದಿರೋದು ಮಾವಿನ ಹಣ್ಣು ತಿನ್ನೋಕೆ. ತಿಂದು ಆನಂದಪಡು. ತೋಟದಲ್ಲಿ ಎಷ್ಟು ಮಾವಿನ ಮರಗಳಿವೆ, ಅದಕ್ಕೆ ಎಷ್ಟು ಲಕ್ಷ ಕೊಂಬೆಗಳಿವೆ, ಅವುಗಳಲ್ಲಿ ಎಷ್ಟು ಕೋಟಿ ಎಲೆಗಳಿವೆ ಇವೇ ಮೊದಲಾದುವುಗಳ ಲೆಕ್ಕಾಚಾರ ಹಾಕುವುದರ ಆವಶ್ಯಕತೆಯೇನಿದೆ? ತೋಟಕ್ಕೆ ಬಂದದ್ದು ಮಾವಿನ ಹಣ್ಣು ತಿನ್ನೋಕೆ. ತಿಂದು ಆನಂದ ಪಡೋಣ".3

ಶ್ರೀ ರಾಮಕೃಷ್ಣರ ದರ್ಶನದ ಸಾರವನ್ನು ಹೀಗೆ ನಿರೂಪಿಸಬಹುದು: ಅವರ ಪ್ರಕಾರ ಅತ್ಯಂತಿಕ ಸತ್ಯ 'ದೇವರು'. ಅವನ ಅಸ್ತಿತ್ವ ಮಾನವನ ಅಸ್ತಿತ್ವದಷ್ಟೇ ಖಂಡಿತವಾದುದು. ಅವನು ಸ್ವಯಂಸಿದ್ಧ ತತ್ತ್ವ. ಅವನ ಅಸ್ತಿತ್ತ್ವವನ್ನು ತರ್ಕದಿಂದ ಸ್ಥಾಪನೆ ಮಾಡುವ ಪ್ರಯತ್ನ ನಗೆಪಾಟಲಾದೀತು. ಅವನ ಅಸ್ತಿತ್ತ್ವ ಎಲ್ಲಾ ಅಸ್ತಿತ್ತ್ವದ ತಳಹದಿ. 'ದೇವರು' ಅವರ ಪ್ರಕಾರ ಕೇವಲ ಒಂದು ಬೌದ್ಧಿಕ ಪದವಲ್ಲ. ಅವನು ಜೀವಂತ ಸತ್ಯ. ಹೇಗೆ ಎಣ್ಣೆಯಿಲ್ಲದೆ ದೀಪ ಉರಿಯಲಾರದೋ ಹಾಗೆ ದೇವರಿಲ್ಲದೆ ಮಾನವ ಬದುಕಲಾರ ಎಂಬುದು ಅವರ ದೃಢ ನಂಬಿಕೆ. ನಂಬಿಕೆ ಇದ್ದವನಿಗೆ ಎಲ್ಲವೂ ಇದೆ; ಇಲ್ಲದವನಿಗೆ ಯಾವುದೂ ಇಲ್ಲ. ದೇವರು ವಾದವಿವಾದಗಳಿಂದ ಸಿದ್ಧಪಡಿಸುವಂತಹುದ್ದಲ್ಲ; ಎಲ್ಲ ವಾದ ವಿವಾದಗಳ ಆಧಾರ ಅವನು. ತರ್ಕದ ಮೂಲಕ ಅವನನ್ನು ಸಾಕ್ಷಾತ್ಕರಿಸಿಕೊಳ್ಳಲಾಗುವುದಿಲ್ಲ. ಅವನನ್ನು ಸಾಕ್ಷಾತ್ಕರಿಸಿಕೊಳ್ಳುವುದಕ್ಕೆ ಅವನ ಕೃಪೆ, ಪ್ರಸಾದ, ದಯೆ ಅತ್ಯಾವಶ್ಯಕ. ಅವನನ್ನು ವೇದೋಪನಿಷತ್ತು ಗೀತೆಗಳ ಮೂಲಕ ಹಿಡಿದುಬಿಡಬಹುದು ಎಂಬುದು ಜಂಬದ ಮಾತು: "ಒಂದಷ್ಟು ಗೀತ, ಒಂದಷ್ಟು ಭಾಗವತ ಒಂದಷ್ಟು ವೇದಾಂತ ಓದಿ ಜನ ಭಾವಿಸುತ್ತಾರೆ;' ನಾವು ಎಲ್ಲವನ್ನು ಅರೆದು ಕುಡಿದುಬಿಟ್ಟಿದ್ದೇವೆ!' ಎಂದು. ಸಕ್ಕರೆ ಗುಡ್ಡಕ್ಕೆ ಒಂದು ಇರುವೆ ಹೋಯಿತು. ಒಂದು ಕಣ ಸಕ್ಕರೆ ತಿನ್ನುವುದರಲ್ಲಿಯೇ ಅದರ ಹೊಟ್ಟೆ ತುಂಬಿ ಹೋಯಿತು. ಇನ್ನೊಂದು ಕಣ ಸಕ್ಕರೆಯನ್ನು ಬಾಯಲ್ಲಿ ಕಚ್ಚಿಕೊಂಡು ತನ್ನ ಗೂಡಿಗೆ ಹಿಂದಿರುಗುವಾಗ ಅದು ಯೋಚಿಸಿತು: 'ಮುಂದಿನ ಸಲಬಂದು ಆ ಗುಡ್ಡವನ್ನೇ ಗೂಡಿಗೆ

ಸಾಗಿಸಿಬಿಡುತ್ತೇನೆ'! ಎಂದು."4

ದೇವರನ್ನು ಕಾಣಲು ತೀವ್ರ ಹಂಬಲ ಇರಬೇಕು. ಅವನ ಸಾಕ್ಷಾತ್ಕಾರಕ್ಕೆ ನಿರ್ಮಲ ಹೃದಯದಿಂದ ಪರಿತಪಿಸಿದರೆ ಸಾಧಕ ಅವನನ್ನು ಕಂಡೇ ಕಾಣುತ್ತಾನೆ. ಎಲ್ಲಾ ವಿಚಾರಗಳನ್ನು ಬದಿಗಿಟ್ಟು ದೇವರಲ್ಲಿಯೇ ಚಿತ್ತವನ್ನು ಕೇಂದ್ರೀಕರಿಸಿದಾಗ ನಿಜವಾಗಿಯೂ ಒಲಿಯುತ್ತಾನೆ: "ಪ್ರಾಪಂಚಿಕನಿಗೆ ಪ್ರಾಪಂಚಿಕ ವಸ್ತುಗಳ ಮೇಲಿರುವ ಪ್ರೀತಿ, ಸತಿಗೆ ಪತಿಯಲ್ಲಿರುವ ಪ್ರೀತಿ, ತಾಯಿಗೆ ತನ್ನ ಮಕ್ಕಳ ಮೇಲಿರುವ ಪ್ರೀತಿ ಇವು ಮೂರು ಪ್ರೀತಿಗಳನ್ನು ಏಕೀಕರಿಸಿ ಯಾರೇ ಆಗಲಿ ಭಗವಂತನ ಕಡೆ ತಿರುಗಿಸುವುದಾದರೆ, ತತ್‌ಕ್ಷಣವೇ ಆತನಿಗೆ ಭಗವಂತನ ಸಾಕ್ಷಾತ್ಕಾರ ದೊರೆತುಬಿಡುತ್ತದೆ"5

"ವ್ಯಾಕುಲರಾಗಿ ಕರೆದರೆ ಭಗವಂತನ ಕೃಪೆ ದೊರೆಯುತ್ತೆ, ಆತನ ಸಾಕ್ಷಾತ್ಕಾರ ದೊರೆತು ಬಿಡುತ್ತೆ."6 ದೇವರ ಅಸ್ತಿತ್ವದ ಬಗ್ಗೆ ಚಿಕ್ಕಂದಿನಿಂದಲೂ ಸಂದೇಹವನ್ನು ಹೊಂದಿದ್ದ ನರೇಂದ್ರನಿಗೆ, 'ದೇವರಿದ್ದಾನೆಯೇ'? ಎಂಬ ಪ್ರಶ್ನೆಗೆ ತಾನು ಸಂಧಿಸಿದ ಬಹುತೇಕ ಗಣ್ಯ ಹಾಗೂ ಧೀಮಂತ ವ್ಯಕ್ತಿಗಳಿಂದ ದೊರಕಿದ ಉತ್ತರ ತೋರಿಕೆಯದು, ಜಾರಿಕೆಯದು. ಶ್ರೀ ರಾಮಕೃಷ್ಣರೊಬ್ಬರೇ 'ದೇವರನ್ನು ನಾನು ಮುಖಾ ಮುಖಿ ನೋಡಿದ್ದೇನೆ, ಅವನೊಡನೆ ಮಾತನಾಡಿದ್ದೇನೆ, ವ್ಯಾಕುಲನಾಗಿ ನೀನೂ ಅವನನ್ನು ನೋಡಬಹುದು, ಅವನೊಡನೆ ಮಾತನಾಡಬಹುದು' ಎಂದು ಧೈರ್ಯವಾಗಿ ಉತ್ತರಿಸಿ ತೋರಿಸಿದ್ದು.

ದೇವರಿಗೆ ಅಸಂಖ್ಯ ನಾಮಗಳಿವೆ. ಅನಂತ ರೂಪಗಳಿವೆ. ಆತನನ್ನು ಯಾವುದೇ ರೂಪದಲ್ಲಿ ಯಾವುದೇ ಹೆಸರಿನಿಂದ ಆರಂಭಿಸಿದರೂ ಆತನ ಸಾಕ್ಷಾತ್ಕಾರವನ್ನು ಹೊಂದ ಬಹುದು. ಆತನನ್ನು ಸಾಕ್ಷಾತ್ಕರಿಸಿಕೊಳ್ಳಲು ಅನೇಕ ಸಾಧನಮಾರ್ಗಗಳುಂಟು. ಭಕ್ತಿಯೂ ಒಂದು ಸಾಧನ. ಭಕ್ತಿ ಮಾನವನ ಮನಸ್ಸಿನ ನೈರ್ಮಲ್ಯವನ್ನು ಹೋಗ ಲಾಡಿಸಿ ಪರಿಶುದ್ಧಗೊಳಿಸುವುದರ ಮೂಲಕ ಅವನನ್ನು ದೈವಸಾಕ್ಷಾತ್ಕಾರಕ್ಕೆ ತಯಾರು ಮಾಡುತ್ತದೆ. ಭಕ್ತಿ ಎಲ್ಲಾ ವಿಧದ ವ್ಯಾಪಾರೀ ಮನೋಭಾವದಿಂದ ವಿಮುಕ್ತ ವಾದದ್ದು. ಅದಕ್ಕೆ ಇನ್ನೊಂದು ಹೆಸರೇ ಪ್ರೀತಿ ಅಥವಾ ಪ್ರೇಮ. ಬೇಷರತ್ ಶರಣಾ ಗತಿ ಅದರ ಚಿಹ್ನೆ. ನಿಜವಾದ ಭಕ್ತ ದೇವರನ್ನು ದೇವರ ಪ್ರೀತಿಗಾಗಿ ಪ್ರೀತಿಸುತ್ತಾ ನೆಯೇ ಹೊರತು ಪ್ರಾಪಂಚಿಕ ಸುಖಪ್ರಾಪ್ತಿಗಾಗಿ ಅಲ್ಲ. ದೈವಿಕ ಹಸಿವು ಮಾನವನಲ್ಲಿ ಕಾಣಿಸುವುದು ಶುಭ ಸೂಚನೆಯೆಂದು ಶ್ರೀ ರಾಮಕೃಷ್ಣರು ನಂಬಿದ್ದರು.

ಹೀಗೆ ದೈವ ಸಾಕ್ಷಾತ್ಕಾರವೇ ರಾಮಕೃಷ್ಣ ದರ್ಶನದ ಗುರಿ. ಅದೇ ಅವರ ಎಲ್ಲ ಬೋಧನೆಗಳ ಜೀವನಾಡಿ. ಅದಕ್ಕೆ ಜಾತಿ, ಮತ, ಕುಲ, ಲಿಂಗ, ವಯೋಮಾನ, ವರ್ಗ ಭೇದಗಳಿಲ್ಲ. ಲೈಂಗಿಕ ಭಾವನೆಯಿಂದ ಅಧೋಗತಿಗೆ ಬೀಳದಂತೆ ನೋಡಿಕೊಳ್ಳಲು ಅವರು ಎಲ್ಲಾ ಸ್ತ್ರೀಯರನ್ನೂ ಜಗನ್ಮಾತೆಯ ಅಂಶಸ್ವರೂಪಿಗಳೆಂದು ಭಾವಿಸಿ ಗೌರವಿಸು ತ್ತಿದ್ದರು. ಅಶುದ್ಧ ಸ್ಥಳಗಳನ್ನು ವೃತ್ತಿಯಿಂದ ಜಾಡಮಾಲಿಯುವನಂತೆ ಶುಚಿಮಾಡುವುದರ ಮೂಲಕ ಉಚ್ಚ-ನೀಚ ಭಾವನೆಯನ್ನು ತೊಲಗಿಸಿಕೊಂಡರು. ಭಕ್ತನಾಗುವುದಕ್ಕೆ

ಬೇಕಾದ ಒಂದೇ ಒಂದು ಅರ್ಹತೆಯೆಂದರೆ ಸ್ವಾರ್ಥತ್ಯಾಗ ಎಂದು ಶ್ರೀ ರಾಮಕೃಷ್ಣರು ಒತ್ತಿ ಒತ್ತಿ ಹೇಳುತ್ತಾರೆ.

ದೇವರನ್ನು ಅಮಿತವಾಗಿ ಪ್ರೀತಿಸುವುದು ಭಕ್ತಿಯೆನಿಸುವುದು. ಭಕ್ತಿಯಲ್ಲಿ ದಾಸ ಭಾವ, ಸಖ್ಯಭಾವ, ವಾತ್ಸಲ್ಯಭಾವ, ಶಾಂತಭಾವ, ಮಧುರಭಾವ ಎಂಬ ಅನೇಕ ಪ್ರಕಾರ ಗಳುಂಟು. ಪ್ರತಿಯೊಂದು ಭಾವಕ್ಕೂ ತನ್ನದೇ ಆದ ಮಹತ್ವವಿದೆ, ಅನಂದರಸವಿದೆ.

ದಾಸಭಾವದಲ್ಲಿ ಭಕ್ತನು ತನ್ನನ್ನು ತಾನು ದಾಸ (ಭೃತ್ಯ) ನೆಂದೂ ದೇವರನ್ನು ಒಡೆಯನೆಂದೂ ಭಾವಿಸಿಕೊಂಡು, ಅವನಿಗೆ ಸಕಲವನ್ನೂ ಅರ್ಪಿಸಿ ನಿಸ್ವಾರ್ಥವಾಗಿ, ಸ್ವಾಮಿ ಭಕ್ತಿಯಿಂದ ದೈವವಸಾಕ್ಷಾತ್ಕಾರವನ್ನು ಪಡೆಯುತ್ತಾನೆ. ರಾಮಾಯಣದ ಹನುಮ–ಶ್ರೀ ರಾಮರ ಸಂಬಂಧ ದಾಸಭಾವಕ್ಕೆ ಅತ್ಯುತ್ತಮ ಉದಾಹರಣೆ.

ಸಖ್ಯಭಾವದಲ್ಲಿ ಭಕ್ತನು ದೇವರನ್ನು ಆತ್ಮೀಯ ಸ್ನೇಹಿತನೆಂದು ಭಾವಿಸಿ ಸಲುಗೆ ಯಿಂದ, ಅವ್ಯಾಜ ಪ್ರೀತಿಯಿಂದ ಭಗವಂತನನ್ನು ಸೇರುತ್ತಾನೆ. ಕೃಷ್ಣ–ಸುದಾಮ, ಕೃಷ್ಣ–ಅರ್ಜುನರ ಸಂಬಂಧ ಸಖ್ಯಭಾವಕ್ಕೆ ಒಳ್ಳೆಯ ಉದಾಹರಣೆ.

ವಾತ್ಸಲ್ಯ ಭಾವದಲ್ಲಿ ಭಕ್ತನು ದೇವರನ್ನು ಮಗುವಿನ ರೂಪದಲ್ಲಿ ಭಾವಿಸಿಕೊಂಡು ಅದಕ್ಕೆ ಅವನು ಪ್ರೇಮ–ವಾತ್ಸಲ್ಯವನ್ನು ತೋರುವುದರ ಮೂಲಕ ದೇವರನ್ನು ಸೇರು ತ್ತಾನೆ. ಉದಾಹರಣೆಗೆ, ಕೌಸಲ್ಯ–ರಾಮ, ಯಶೋದ–ಕೃಷ್ಣ ಇತ್ಯಾದಿ.

ಶಾಂತಭಾವ, ವಾತ್ಸಲ್ಯಭಾವದ ವಿಲೋಮ. ಇಲ್ಲಿ ಭಕ್ತನೇ ಮಗುವಾಗಿ ದೇವರನ್ನೇ ತಂದೆ–ತಾಯಿ ಎಂದು ಭಾವಿಸಿ ಪಿತೃ–ಮಾತೃ ಭಕ್ತಿಯ ಮೂಲಕ ಭಗವಂತ ನನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ. ಉದಾಹರಣೆಗೆ ಧ್ರುವ, ಪ್ರಹ್ಲಾದ ಇತ್ಯಾದಿ.

ಮಧುರಭಾವ, ಭಕ್ತಿಭಾವಗಳೆಲ್ಲೆಲ್ಲಾ ಅತ್ಯಂತ ಉತ್ಕಟಾವಸ್ಥೆ. ಇಲ್ಲಿ ಭಕ್ತನು ತನ್ನನ್ನು ಪ್ರಿಯತಮನೆಂದು ಭಾವಿಸಿ, ದೇವರನ್ನು ಪ್ರೇಯಸಿಯೆಂದು ತಿಳಿದು, ಅಥವಾ, ತನ್ನನ್ನು ತಾನು ಪ್ರೇಯಸಿ ಎಂದು ತಿಳಿದು, ದೇವರನ್ನು ಪ್ರಿಯತಮನೆಂದು ಭಾವಿಸಿ ಮಧುರ ಸಂಬಂಧವನ್ನು ಹೊಂದುವುದರ ಮೂಲಕ ಭಗವಂತನನ್ನು ಸೇರುತ್ತಾನೆ. ಉದಾಹರಣೆಗೆ ರಾಧ–ಕೃಷ್ಣ, ಅಕ್ಕಮಹಾದೇವಿ–ಚೆನ್ನಮಲ್ಲಿಕಾರ್ಜುನ ಇತ್ಯಾದಿ.

ಶ್ರೀ ರಾಮಕೃಷ್ಣರು ಈ ಎಲ್ಲ ಭಕ್ತಿ ಭಾವಗಳ ಮೂಲಕ ಹಾದುಹೋಗಿ, ಭಗವಂತನನ್ನು ರಾಮಕೃಷ್ಣ, ಏಸು, ಅಲ್ಲಾ ಮುಂತಾದ ರೂಪಗಳಲ್ಲಿ ಸಾಕ್ಷಾತ್ಕರಿಸಿ ಕೊಂಡಿದ್ದರು. ಅವರನ್ನು ಅನುಭಾವಿ ಎಂದು ಈ ಅರ್ಥದಲ್ಲಿಯೇ ಹೇಳುವುದು.

೬

ಭೈರವೀ ಬ್ರಾಹ್ಮಣಿ ಎಂಬ ಸನ್ಯಾಸಿನಿಯ ಮಾರ್ಗದರ್ಶನದಲ್ಲಿ ಶ್ರೀ ರಾಮ ಕೃಷ್ಣರು ತಂತ್ರಸಾಧನೆಯಲ್ಲಿಯೂ ಮುಂದುವರಿದಿದ್ದರು. ತಂತ್ರ ಮಾರ್ಗದ ತಿರುಳು ಇದು : ಮಾನವ ಸ್ವಭಾವತಃ ಭೋಗವನ್ನು ತ್ಯಜಿಸಲು ಇಷ್ಟಪಡುವುದಿಲ್ಲ. ತಂತ್ರ ಮಾರ್ಗವು ಭೋಗ ಮತ್ತು ತ್ಯಾಗಗಳ ಸಮನ್ವಯವನ್ನು ಸಾರುತ್ತದೆ. ' ಭೋಗೋ

ಯೋಗಯತೇ' ಎಂಬುದು ಅದರ ಬೀಜಮಂತ್ರ. ಅಂದರೆ ತಂತ್ರ ಭೋಗವನ್ನು ಯೋಗಕ್ಕೆ ಮಾರ್ಗವನ್ನಾಗಿ ಮಾಡಿಕೊಳ್ಳುತ್ತದೆ. ಅದು ಕಷ್ಟಕರವಾದ ಮಾರ್ಗ. ಅದರ ಗುರಿ ಇತರ ದರ್ಶನಗಳಂತೆ ಮೋಕ್ಷವೇ ಆಗಿದೆ. ಆದರೆ ಮೋಕ್ಷವನ್ನು ಒಂದೇ ಬಾರಿಗೆ ಸಾಧಿಸಲಾಗದು ; ಅದನ್ನು ಕ್ರಮಶಃ ಸಾಧಿಸಬೇಕು. ಇಂದ್ರಿಯ ನಿಗ್ರಹವನ್ನು ಹಠಾತ್ತನೆ ಮಾಡುವುದನ್ನು ಅದು ವಿರೋಧಿಸುತ್ತದೆ. ಇಂದ್ರಿಯ ಸುಖವನ್ನು ಅನುಭವಿಸುವುದರಲ್ಲಿ ಯಾವ ಅಪರಾಧಿ ಭಾವನೆಯೂ ಇಲ್ಲ. ಆದರೆ ಅದನ್ನು ಅನುಭವಿಸುವ ಪ್ರತಿಯೊಂದು ಕ್ಷಣದಲ್ಲೂ ಎಲ್ಲವೂ ದಯಾಮಯಳಾದ ಮಾತೆಯ ಸ್ವರೂಪ ; ಆಕೆಯೇ ಎಲ್ಲವನ್ನೂ ಮಾಡಿಸುವವಳು ಎಂಬ ನಿಶ್ಚಯಜ್ಞಾನ ಸಾಧಕನಲ್ಲಿ ಸ್ಥಿರವಾಗಿ ನೆಲಸಿರಬೇಕು. ಹಾಗಾದಾಗ ಇಂದ್ರಿಯ ಸುಖ ಅನೈತಿಕವೆನಿಸುವುದಿಲ್ಲ ; ನರಕ ಕೂಪಕ್ಕೆ ತಳ್ಳುವುದಿಲ್ಲ.

ಹೀಗೆ ನಮ್ಮನ್ನು ಬಂಧನಕ್ಕೆ ಸಿಲುಕಿಸುವ ಭೋಗ ವಸ್ತುಗಳನ್ನು ದೈವತ್ವಕ್ಕೇರಿಸಿ, ಇಂದ್ರಿಯ ಸುಖವನ್ನು ಆಧ್ಯಾತ್ಮಿಕತೆಯ ಮಾರ್ಗವನ್ನಾಗಿ ಮಾಡಿ ದೈವಬಲದಿಂದ ಆಧ್ಯಾತ್ಮಿಕತೆಯ ಉತ್ತುಂಗ ಶಿಖರವನ್ನು ತಲುಪಬೇಕೆಂದು ತಂತ್ರಸಾಧನ ಸಾರುತ್ತದೆ. ತಂತ್ರ ಸಾಧನೆಯನ್ನು ಸಾಂಕೇತಿಕವಾಗಿ ಮಾಡುವುದರ ಮೂಲಕ ಶ್ರೀ ರಾಮಕೃಷ್ಣರು ದೈವಸಾಕ್ಷಾತ್ಕಾರವನ್ನು ಪಡೆದರು.

೭

ಮೇಲೆ ಹೇಳಿದ ಸಾಧನ ಮಾರ್ಗಗಳೆಲ್ಲ ಭಾವಮುಖ ಅಥವಾ ಸಂಪ್ರಜ್ಞಾತ ಸಮಾಧಿಯನ್ನು ಉಂಟುಮಾಡುವಂಥವುಗಳಾಗಿವೆ. ಭಾವಮುಖ ಸಮಾಧಿಯಲ್ಲಿ ಪೂಜ್ಯ–ಪೂಜಕಭಾವವಿರುತ್ತದೆ. ಪೂಜಕ ಭಕ್ತನಾದರೆ, ಭಗವಂತ ಪೂಜ್ಯನಾಗುತ್ತಾನೆ. ಧ್ಯಾನ ಮಾಡುವವ, ಧ್ಯಾನಮಾಡಲ್ಪಡುವ ವಸ್ತು ಎಂಬ ದ್ವೈತ ಜ್ಞಾನ ಅಲ್ಲಿ ಸದಾ ನೆಲಸಿರುತ್ತದೆ. ಅದೆಂದಿಗೂ ಅಳಿಸಿಹೋಗುವುದಿಲ್ಲ ; ಭಗವಂತನ ಆನಂದವನ್ನು ಆಸ್ವಾದಿಸಲು ಗೆರೆಯೋಪಾದಿಯಲ್ಲಿ ಒಂದು ಕಿಂಚಿತ್ 'ಅಹಂ' ಉಳಿದುಕೊಂಡಿರುತ್ತದೆ. ಈ ಸಮಾಧಿಯನ್ನೇ ಸಂಪ್ರಜ್ಞಾತ ಅಥವಾ ಭಾವಮುಖ ಸಮಾಧಿ ಎಂದು ಕರೆಯಲಾಗಿದೆ.

ಶ್ರೀ ರಾಮಕೃಷ್ಣರು ಭಾವಮುಖ ಸಮಾಧಿಯಿಂದಷ್ಟೇ ತೃಪ್ತರಾಗದೆ, ಅದ್ವೈತ ಜ್ಞಾನ ಸಮಾಧಿಯಾದ ಅಸಂಪ್ರಜ್ಞಾತ ಸಮಾಧಿಯನ್ನು ಹೊಂದಲು ಆಸಕ್ತರಾಗಿ ತೋತಾಪುರಿ ಎಂಬ ಸನ್ಯಾಸಿಯ ಮಾರ್ಗದರ್ಶನದಲ್ಲಿ ಮುಂದುವರಿದು ಅದನ್ನು ಪಡೆಯುವಲ್ಲಿ ಜಯಶೀಲರಾದರು.

ಅಸಂಪ್ರಜ್ಞಾತ ಸಮಾಧಿ ಅದ್ವಯ ಸ್ಥಿತಿ ; ಎಲ್ಲ ರೀತಿಯ ದ್ವೈತ ಭಾವನೆಗಳು —ಪೂಜ್ಯ–ಪೂಜಕ ಭಾವ, ಒಡೆಯ–ಸೇವಕ ಭಾವ—ಹೇಳಹೆಸರಿಲ್ಲವಾಗುತ್ತವೆ. ಧ್ಯಾನಮಾಡುವವ, ಧ್ಯಾನ ಮಾಡಲ್ಪಡುವ ವಸ್ತು ಎಂಬ ದ್ವೈತ ಜ್ಞಾನ ಮಾಯವಾಗಿ,

ನಿರ್ವಿಕಲ್ಪಕ ಸಮಾಧಿಯನ್ನು ಹೊಂದುವುದರ ಮೂಲಕ ಸಾಧಕ ಅತ್ಯಂತಿಕ ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳುತ್ತಾನೆ. ಅಸಂಪ್ರಜ್ಞಾತ ಅಥವಾ ಭಾವವಿಮುಖ ಸಮಾಧಿಯಲ್ಲಿ ಸಮಯದ ಅರಿವಾಗಲೀ, ದೇಶದ ಅರಿವಾಗಲೀ ಇರುವುದಿಲ್ಲ.[8] ಸಾಧಕ ಬಾಹ್ಯಜ್ಞಾನ ಶೂನ್ಯವಾಗಿಬಿಡುತ್ತಾನೆ.

ಹೀಗೆ ಅಸಂಪ್ರಜ್ಞಾತ ಸಮಾಧಿ ಅನುಭಾವಿಯ ಚರಮಸ್ಥಿತಿ. ಇಲ್ಲಿ ಭಕ್ತ-ಭಗವಂತರ, ಜೀವಾತ್ಮ-ಪರಮಾತ್ಮರ ನಡುವಿನ ಭೇದಭಾವ ನಶಿಸಿಹೋಗಿ, ಭಕ್ತ (ಜೀವಾತ್ಮ) ಭಗವಂತ (ಪರಮಾತ್ಮ)ನಲ್ಲಿ ಸಂಪೂರ್ಣವಾಗಿ ಐಕ್ಯನಾಗಿ ದಿವ್ಯಾನಂದ ಬಟ್ಟಬಯಲಾಗುತ್ತದೆ. ಶ್ರೀ ರಾಮಕೃಷ್ಣರ ಮಾತುಗಳಲ್ಲೇ ಹೇಳುವುದಾದರೆ: "ಭಗವಂತನ ಸಾಕ್ಷಾತ್ಕಾರ ಪಡೆದ ನಂತರ, ಸಮಾಧಿಯಲ್ಲಿ ಅತನೊಡನೆ ಐಕ್ಯವಾದ ನಂತರ ಜ್ಞಾನ, ವಿಚಾರ ಎಲ್ಲ ನಿಂತುಹೋಗಿ ಬಿಡುತ್ತದೆ. ಜ್ಞಾನ ವಿಚಾರ ಎಲ್ಲಿಯ ವರೆಗೆ ಇರುತ್ತೆ? ಬಹುತ್ವದ ಜ್ಞಾನವಿರುವವರೆಗೆ—ಜೀವ, ಜಗತ್ತು, ನಾನು, ನೀನು ಇವೇ ಮೊದಲಾದವುಗಳ ಬೋಧೆ ಇರುವವರೆಗೆ. ಯಾವಾಗ ಸರಿಯಾಗಿ ಏಕತೆಯ ಜ್ಞಾನ ದೊರೆಯುವುದೋ ಆಗ ಸಾಧಕ ಶಾಂತವಾಗಿ ಬಿಡುತ್ತಾನೆ."[9]

೮

ಅನುಭಾವಿಯ ನಿರ್ವಿಕಲ್ಪಕ ಸಮಾಧಿಯನ್ನು ಕುರಿತು ಕೆಲವು ಮನೋವೈಜ್ಞಾನಿಕರು ಲಘುವಾಗಿ ಮಾತನಾಡುತ್ತಾರೆ. ಅನುಭಾವಿಯ ಅನುಭವಗಳು, ನಿರಾಧಾರವಾದ ಭ್ರಾಮಕ ಕಲ್ಪನೆಗಳು ಎಂದು ಅವರ ಅಭಿಪ್ರಾಯ. ಅವರ ದೃಷ್ಟಿಯಲ್ಲಿ ಅನುಭಾವಿ ಅಸಹಜ ಸ್ಥಿತಿಯಲ್ಲಿರುವ ಹುಚ್ಚ; ಕಾರಣ ಅವನ ಅನುಭವ ಉಳಿದೆಲ್ಲ ಜನಸಾಮಾನ್ಯರ ಸಹಜ ಅನುಭವವಾಗಿರದೇಯಿರುವುದರಿಂದ! ಅವರಲ್ಲಿ ಕೆಲವರು ಇನ್ನೂ ಮುಂದುವರಿದು ಮಾತನಾಡುತ್ತಾರೆ: ಅನುಭಾವಿ ಪಡೆಯುವ ಅನುಭವವನ್ನು ಕೃತಕ ರೀತಿಯಿಂದ—ಕೆಲವು ರಾಸಾಯನಿಕ ವಸ್ತುಗಳು ಮಾತ್ರೆಗಳು, ಎಲ್.ಎಸ್.ಡಿ, ಗಾಂಜಾ, ಅಫೀಮು, 'ನಗುವ ಅನಿಲ' (nitrous oxide, N_2O) ಮುಂತಾದವುಗಳ ಸೇವನೆಯಿಂದ—ಪಡೆಯಬಹುದು; ಆ ಸಾಧನೆ ಈ ಸಾಧನೆ ಎಂದು ವೃಥಾ ಕಷ್ಟಪಡುವ ಗೋಜಿಲ್ಲವೆಂದು ಗೇಲಿಮಾಡುತ್ತಾರೆ. ಶ್ರೀ ರಾಮಕೃಷ್ಣರ ಕಾಲಾವಧಿಯಲ್ಲಿಯೇ ಬ್ರಹ್ಮಸಮಾಜದ ಅನುಯಾಯಿಗಳು ನರಗಳ ದೌರ್ಬಲ್ಯ, ನರಮಂಡಲದ ಅವ್ಯವಸ್ಥೆಯಿಂದ 'ಸಮಾಧಿ' ಎಂದು ಕರೆಯಿಸಿಕೊಳ್ಳುವ 'ಸ್ಥಿತಿ' ಉಂಟಾಗುತ್ತದೆಂದು ಶ್ರೀ ರಾಮಕೃಷ್ಣರನ್ನು ಹಾಸ್ಯಮಾಡುತ್ತಿದ್ದರು.

ಅನುಭಾವವನ್ನು ಕುರಿತು ಕೆಲವು ಮನೋವೈಜ್ಞಾನಿಕರ ಈ ವಿಮರ್ಶೆ ಮೊದಲಿನ ನೋಟಕ್ಕೇ ಅಸಾಧು ಹಾಗೂ ಅಸತ್ಯವೆಂದು ಗೋಚರಿಸದೆ ಇರದು. ಅನುಭಾವಿಯ ಅನುಭವಗಳು, ಜನಸಾಮಾನ್ಯರ ಅನುಭವಗಳಿಂದ ಭಿನ್ನವಾದ ಮಾತ್ರಕ್ಕೆ, ಅವನ್ನು ನಿರಾಧಾರ ಭ್ರಾಮಕ ಕಲ್ಪನೆಗಳೆನ್ನಲಾಗದು. ಅನುಭಾವ ಕೇವಲ ಧಾರ್ಮಿಕ ಪ್ರವೃತ್ತಿ

ಯುಳ್ಳವರಲ್ಲೇ ಇರಬೇಕೆಂಬ ನಿಯಮವಿಲ್ಲ. ಜೀವನದ ವಿವಿಧ ರಂಗಗಳಾದ ಸಂಗೀತ, ಕಲೆ, ಸಂಸ್ಕೃತಿ, ನಾಟಕ ಮುಂತಾದವುಗಳು ನಿಂತಿರುವುದು ಅನುಭವದ ಮೇಲೆ. ಭ್ರಾಮಕ ಕಲ್ಪನೆಗಳು ದುರ್ಬಲ ಮನಸ್ಸಿನಲ್ಲಿ ಜನ್ಮ ತಾಳುತ್ತವೆಯೇ ಹೊರತು ಅನು ಭಾವಿಗಳ ಶಕ್ತಿಯುತ ಮನಸ್ಸಿನಲ್ಲಲ್ಲ. ಅಂಥವರಿಗೆ ಮನೋವಿಕಲ್ಪ ಉಂಟಾಗುತ್ತ ದೆಂದು ಹೇಳುವುದು ಉಚಿತವಲ್ಲ. ಅನುಭಾವಿಯ ದೃಷ್ಟಿಯಲ್ಲಿ ಸತ್ಯ (ಅದನ್ನು ಯಾವ ಯಾವ ಹೆಸರಿನಿಂದ ಬೇಕಾದರೂ ಕರೆಯಬಹುದು) ಕೇವಲ ಸತ್ಯವಲ್ಲ ; ಅದು ಪ್ರತ್ಯಕ್ಷ ಸತ್ಯ ; ಅದು ಸುಖ ದುಃಖಾತೀತವಾದ ನಿತ್ಯಾನಂದ. ಅಂತಹ ಅನುಭವವನ್ನು ಹೊಂದಿದ ಅನುಭಾವಿಗಳ ಕೇವಲ ಸನ್ನಿಧಿಯೇ ಸುಖ ಶಾಂತಿ ಸಮಾಧಾನಗಳನ್ನು ತಂದು ಕೊಡುತ್ತದೆ.

ರಾಸಾಯನಿಕ ವಸ್ತುಗಳ ಸೇವನೆಯಿಂದ ಕೃತಕ ರೀತಿಯಲ್ಲಿ ಪಡೆಯುವ ಅನು ಭವಕ್ಕೂ, ಅನುಭಾವಿಯ ಆನಂದಾನುಭವಕ್ಕೂ ಬಹಳ ವ್ಯತ್ಯಾಸವಿದೆ :

(i) ಸಹಜರೀತಿಯ ಸಮಾಧಿಯನ್ನು ಹೊಕ್ಕು ಹೊರಬಂದ ಅನುಭಾವಿಗೆ ಅರಿಷಡ್ವರ್ಗಗಳ ಮೇಲೆ, ಇಂದ್ರಿಯಗಳ ಮೇಲೆ, ಇಡೀ ಶರೀರದ ಮೇಲೆ ಸಂಪೂರ್ಣ ಪ್ರಭುತ್ವವಿರುತ್ತದೆ. ಅವನು ನಿರ್ಮಲ ಜೀವನವನ್ನು ನಡೆಸುತ್ತಾ ಎಲ್ಲರಿಗೂ ಆದರಣೀಯ ವ್ಯಕ್ತಿಯಾಗುತ್ತಾನೆ. ಕೇವಲ ಸ್ಪರ್ಶ ಮೂಲಕ ಆಧ್ಯಾತ್ಮಿಕ ಶಕ್ತಿಯನ್ನು ಇತರರಿಗೆ ನೀಡುವ ಶಕ್ತಿಯನ್ನು ಹೊಂದಿರುತ್ತಾನೆ.

ಆದರೆ ಕೃತಕ ರೀತಿಯಿಂದ ಅನುಭವವನ್ನು ಪಡೆದು ಹೊರಬಂದ ವ್ಯಕ್ತಿಯಲ್ಲಿ ಈ ಪ್ರಭುತ್ವ ಕಾಣಸಿಗುವುದಿಲ್ಲ. ಅವನು ರಾಗದ್ವೇಷಗಳಿಗೆ ಆಶ್ರಯನಾಗಿ, ವಿಷಯಾಸಕ್ತ ನಾಗಿ, ಇಂದ್ರಿಯಗಳಿಗೆ ದಾಸನಾಗಿರುತ್ತಾನೆ. ಅಲ್ಲದೆ, ಅವನು ಆ ವಸ್ತುಗಳ ಸತತ ಸೇವನೆಯಿಂದ ಅನೇಕ ರೋಗರುಜಿನಗಳಿಗೆ ಬಲಿಯಾಗಿರುತ್ತಾನೆ. ಅಂಥವನು ಇತರ ರನ್ನು ಮೇಲಕ್ಕೆತ್ತಲು, ಮಾರ್ಗದರ್ಶನ ಮಾಡಲು ಹೇಗೆ ತಾನೇ ಸಮರ್ಥನಾದಾನು ? ಆದರೆ ನಿಜವಾದ ಅನುಭಾವಿ, ಹೆಚ್ಚು ಹೆಚ್ಚು ಬಾರಿ ಸಮಾಧಿಯನ್ನು ಹೊಕ್ಕು ಹೊರ ಬಂದಷ್ಟೂ ಹೆಚ್ಚು ನಿರ್ಮಲನೂ ಹೆಚ್ಚು ಪವಿತ್ರನೂ ಆಗಿರುತ್ತಾನೆ.

(ii) ಸಹಜ ಸಮಾಧಿ ಸ್ಥಿತಿಯಿಂದ ಹೊರಬಂದ ಅನುಭಾವಿಯಲ್ಲಿ ಸಂಪೂರ್ಣ ಪರಿವರ್ತನೆಯನ್ನು ಕಾಣಬಹುದು. ಕಾಯಾ ವಾಚಾ ಮನಸಾ ಅವನು ಪರಿಶುದ್ಧ ನಾಗಿರುತ್ತಾನೆ ; ಸಾರ್ವತ್ರಿಕತೆ ಅವನ ಅಭಿವ್ಯಕ್ತಿಯಾಗಿರುತ್ತದೆ. ಅವನು ಜನಮನ ವನ್ನು ಆಕರ್ಷಿಸುವ ಪ್ರಬಲ ಜೀವಂತ-ಆಯಸ್ಕಾಂತನಾಗಿರುತ್ತಾನೆ. ಜೀವನ ವನ್ನು ನೋಡುವ ಅವನ ದೃಷ್ಟಿ ವಿಶಾಲವೂ, ದಯಾರ್ದ್ರ ಹೃದಯವೂ ಆಗಿರುತ್ತದೆ.

ಆದರೆ ಕೃತಕ ರೀತಿಯಿಂದ 'ಅನುಭವ'ವನ್ನು ಪಡೆದವನಲ್ಲಿ ಕ್ರಮ ಕ್ರಮೇಣ ಬುದ್ಧಿ ಕಳೆಗುಂದಿ ಶಿಥಿಲಗೊಂಡು, ಶರೀರ ದುರ್ಬಲವಾಗುತ್ತಾ ಬರುತ್ತದೆ.

(iii) ಸಹಜ ಸಮಾಧಿಯಿಂದ ಹೊರಬಂದ ಅನುಭಾವಿ ಪರಮ ಪ್ರಮಾಣಿ ಕನೂ, ಸತ್ಯಕಾಮನೂ, ಧೀರನೂ, ಸದಾಚಾರಿಯೂ ಆಗಿರುತ್ತಾನೆ.

ಆದರೆ ಕೃತಕ ರೀತಿಯಿಂದ ಅನುಭವವನ್ನು ಪಡೆದವನು ಕೃತ್ರಿಮನೂ, ಅಪ್ರಾಮಾಣಿಕನೂ, ಅಧೀರನೂ, ನೀಚನೂ, ಪಾಪಿಯೂ, ಮಿಥ್ಯಾಚಾರಿಯೂ ಆಗಿರುತ್ತಾನೆ.

(iv) ದೈವೀಸ್ವರೂಪ ವಸ್ತುವನ್ನು ಕುರಿತು ನಡೆಸುವ ಆತ್ಯಂತಿಕ ಚಿಂತನೆ ವಿಚಾರಮಾಡುತ್ತಾ ಮಾಡುತ್ತಾ ಸಹಜ ಅನುಭಾವದಲ್ಲಿ ಪರ್ಯಾವಸಾನ ಹೊಂದಿದರೆ, ಕೃತಕ ರೀತಿಯ 'ಅನುಭವ'ವನ್ನು ಹೊಂದುವವನಲ್ಲಿ ಆತ್ಯಂತಿಕ ಚಿಂತನೆ ನಿದ್ದೆ ಮಾಡುತ್ತದೆ!

(v) ಸಹಜ ಸಮಾಧಿಯಲ್ಲಿ ಮಿದುಳಿನ ಎಲ್ಲಾ ಕಾರ್ಯಗಳು ನಿಲುಗಡೆಯಾಗುತ್ತವೆ. ಸ್ವಾರ್ಥ, ಹೀನ ಪ್ರವೃತ್ತಿ, ಕೀಳಾಸೆ ಮುಂತಾದವುಗಳು ಮಂಗಮಾಯವಾಗುತ್ತವೆ.

ಆದರೆ ಕೃತಕ ರೀತಿಯಿಂದ ಅನುಭವವನ್ನು ಹೊಂದಿದವನಲ್ಲಿ ಎಲ್ಲ ರೀತಿಯ ಮನೋವೃತ್ತಿಗಳು, ಮನೋವೈಕಲ್ಯಗಳು ಸದಾ ತಾಂಡವವಾಡುತ್ತಿರುತ್ತದೆ.

(vi) ಸಹಜ ಸಮಾಧಿಯ ಫಲ ಜ್ಞಾನ, ಆನಂದ ಹಾಗೂ ದೈವ ಸಾಕ್ಷಾತ್ಕಾರ. ಸಹಜ ಸಮಾಧಿಯಿಂದ ಹೊರಬಂದ ಅನುಭಾವಿ, ಇಡೀ ಮಾನವ ಕುಲಕ್ಕೆ ಒಳಿತು ಮಾಡುವುದೇ ತನ್ನ ಧರ್ಮವೆಂದು ತಿಳಿದು ಜಗತ್ತಿನ ಕಲ್ಯಾಣದಲ್ಲಿ ಕಾರ್ಯತತ್ಪರನಾಗುತ್ತಾನೆ.

ಆದರೆ ರಾಸಾಯನಿಕ ವಸ್ತುಗಳ ಸೇವನೆಯಿಂದ ಕೃತಕ ರೀತಿಯ 'ಅನುಭವ'ವನ್ನು ಪಡೆದವನಲ್ಲಿ ಕೀಳಾಸೆಗಳು, ಸ್ವಾರ್ಥ, ಧಗೆ, ಮೋಸ, ಮನೋರೋಗಗಳು ಮಾಯವಾಗದೇ ನಿರಂತರವಾಗಿ ಮುಂದುವರಿಯುತ್ತವೆ. ಹೀಗೆ ಕೃತಕ ರೀತಿಯಿಂದ ಪಡೆದ 'ಅನುಭವ'ದ ಫಲ ಅಜ್ಞಾನ, ಅಂಧಕಾರ ಹಾಗೂ ಆಸುರೀಶಕ್ತಿಯ ವರ್ಧನೆ.

ಈ ಎಲ್ಲ ಕಾರಣಗಳಿಂದ ಸಹಜ ಸಮಾಧಿಯ ಅನುಭಾವ ಕೃತಕ ರೀತಿಯಿಂದ ಪಡೆದ ಅನುಭವದಿಂದ ಗುಣಮಟ್ಟದಲ್ಲಿ ಹಾಗೂ ಎಲ್ಲಾ ವಿಧದಲ್ಲೂ ಸಂಪೂರ್ಣವಾಗಿ ಭಿನ್ನವೆಂದು ಸಿದ್ಧವಾಗುತ್ತದೆ. ಹಾಗೆಯೇ ಅನುಭಾವಿಯ ಅನುಭವದ ಆಳವನ್ನು ಅಳೆಯಲು ಮಾನವನ ಮಿತವಾದ ಬುದ್ಧಿಗಾಗಲೀ, ಭಾಷೆಗಾಗಲೀ ಸಾಧ್ಯವಿಲ್ಲವೆಂದು ಶ್ರೀ ರಾಮಕೃಷ್ಣರು ಅಭಿಪ್ರಾಯಪಡುತ್ತಾರೆ. ಅವರ ಮಾತುಗಳಲ್ಲೇ ಹೇಳುವುದಾದರೆ: "ಒಮ್ಮೆ ಉಪ್ಪಿನ ಬೊಂಬೆಯೊಂದು ಸಮುದ್ರದ ಆಳವನ್ನು ಅಳೆಯಲು ಹೋಯಿತು. ಅದು ಸಮುದ್ರಕ್ಕೆ ಕಾಲು ಹಾಕುವುದೇ ತಡ, ಒಡನೆಯೇ ಕರಗಿ ಹೋಗಿ ಬಿಟ್ಟಿತು."10

೯

'ಧರ್ಮ'ವನ್ನು ಕುರಿತ ಶ್ರೀ ರಾಮಕೃಷ್ಣರ ನಿಲುವು ಕ್ರಾಂತಿಕಾರಿಯಾದುದು, ಹಿಂದೆ ಇಲ್ಲ ಮುಂದೆ ಬರುವುದಿಲ್ಲವೆಂಬಂತೆ ಆಶ್ಚರ್ಯಕರವಾದುದು. ಅವರು ಪ್ರಪಂಚದ ಬಹುತೇಕ ಧರ್ಮಗಳ ಸಾಧನಗಳನ್ನು ಯಶಸ್ವಿಯಾಗಿ ನಡೆಸಿ ದೈವ ಸಾಕ್ಷಾತ್ಕಾರವನ್ನು

ಪಡೆದಿದ್ದರು. ಹಿಂದೂ, ಇಸ್ಲಾಂ, ಕ್ರೈಸ್ತ ಮುಂತಾದ ಧರ್ಮಗಳ ಸಾಧನಗಳ ಮೂಲತತ್ತ್ವಗಳು ಅವರಿಗೆ ಕರತಲಾಮಲಕವಾಗಿದ್ದವು. ಅವರನು ಉದಾರವಾದ ಸಮನ್ವಯ ಧರ್ಮ. ಎಲ್ಲ ಧರ್ಮಗಳೂ ನಮ್ಮನ್ನು ದೇವರೆಡೆಗೆ ಕೊಂಡೊಯ್ಯುತ್ತವೆ ಎಂಬುದನ್ನು ಅವರು ಪ್ರತ್ಯಕ್ಷವಾಗಿ ಆಚರಿಸಿ ಸಾಕ್ಷಾತ್ಕರಿಸಿಕೊಂಡು ಪ್ರಮಾಣಿಸಿ ಬೋಧಿಸುತ್ತಿದ್ದರು. ಹೀಗೆ ಸಾರದಲ್ಲಿ ಎಲ್ಲ ಧರ್ಮಗಳು ಒಂದನ್ನೇ ಬೋಧಿಸುತ್ತವೆ: ಅದೇ ದೈವ ಸಾಕ್ಷಾತ್ಕಾರ. ಅವು ಒಂದೇ ವೃಕ್ಷದ ವಿವಿಧ ಕೊಂಬೆಗಳು. ವಿವಿಧ ಧರ್ಮಗಳು ಕೇವಲ ನಾಮಗಳು. ಎಲ್ಲವೂ ಪ್ರತಿಯೊಂದರಷ್ಟೆ ಸತ್ಯ, ಮುಖ್ಯ ಹಾಗೂ ಪರಿಣಾಮಕಾರಿ. ಎಲ್ಲವೂ ರಾಜಮಾರ್ಗಗಳು. ಅವುಗಳನ್ನು ಅಚಲ ಶ್ರದ್ಧೆಯಿಂದ ಅನುಸರಿಸಬೇಕು, ಎಂದು ಶ್ರೀ ರಾಮಕೃಷ್ಣರು ಸ್ವಾನುಭವದಿಂದ ಬೋಧಿಸುತ್ತಾರೆ. ಅವುಗಳನ್ನು ವಿಶಾಲ ದೃಷ್ಟಿಯಿಂದ, ಗೌರವದಿಂದ, ಸಹಾನುಭೂತಿಯಿಂದ ಕಾಣಬೇಕೆಂದು ಸಾರಿಸಾರಿ ಹೇಳುತ್ತಾರೆ: "ಎಲ್ಲಾ ಮಾರ್ಗಗಳಿಂದಲೂ ಆತನ (ದೇವರು) ಸಾಕ್ಷಾತ್ಕಾರವನ್ನು ಪಡೆಯಬಹುದು. ಒಬ್ಬನೇ ಭಗವಂತನನ್ನು ವಿವಿಧ ಹೆಸರುಗಳಿಂದ ಕರೆಯುತ್ತಾರೆ, ಅಷ್ಟೆ."11

ಧರ್ಮಾಂಧತೆಗೆ ಮಾನವನ ಮನಸ್ಸಿನಲ್ಲಿ ಮುಳ್ಳಿನ ಕೊನೆಯಷ್ಟು ಅವಕಾಶವಿರಬಾರದೆಂದು ಅವರು ಒತ್ತಿಒತ್ತಿ ಹೇಳುತ್ತಾರೆ: ನಮ್ಮ ಧರ್ಮವೇ ಸರಿ, ಉಳಿದವರದೆಲ್ಲ ತಪ್ಪು ಎಂಬ ಭಾವನೆ ಒಳ್ಳೆಯದಲ್ಲ. ಭಗವಂತ ಒಬ್ಬನೇ ವಿನಾ ಇಬ್ಬರಲ್ಲ. ಆತನನ್ನು ಭಿನ್ನಭಿನ್ನ ಹೆಸರಿನಿಂದ ಬೇರೆಬೇರೆ ಜನರು ಕರೆಯುತ್ತಾರೆ. ಕೆಲವರು ಆತನನ್ನು 'ಗಾಡ್' ಅಂತ ಕರೆಯುತ್ತಾರೆ, ಇನ್ನು ಕೆಲವರು 'ಅಲ್ಲಾ' ಎಂದು ಕರೆಯುತ್ತಾರೆ. ಇನ್ನೂ ಕೆಲಕೆಲವರು ಆತನನ್ನೇ 'ಕೃಷ್ಣ', 'ಶಿವ', 'ಬ್ರಹ್ಮ' ಹೀಗೆಲ್ಲಾ ಕರೆಯುತ್ತಾರೆ. ಉದಾಹರಣೆಗೆ ಕೊಳದ ನೀರು. ಒಂದು ಘಟ್ಟದವರು ಅದನ್ನು 'ಜಲ', ಇನ್ನೊಂದು ಘಟ್ಟದವರು 'ವಾಟರ್', ಮತ್ತೊಂದು ಘಟ್ಟದವರು ಅದನ್ನು 'ಪಾನಿ' ಎಂದು ಕರೆಯುತ್ತಾರೆ. . . . ಆದರೆ ವಸ್ತುಮಾತ್ರ ಒಂದೇ ಒಂದು. ಮತಗಳು ಕೇವಲ ಪಥಗಳು ಮಾತ್ರ. ಪ್ರತಿಯೊಂದು ಧರ್ಮವೂ ಭಗವಂತನ ಸಾಕ್ಷಾತ್ಕಾರಕ್ಕೆ ಒಂದೊಂದು ಮಾರ್ಗ."12

ಶ್ರೀ ರಾಮಕೃಷ್ಣರ ಈ ಬೋಧನೆ ವೇದೋಪನಿಷತ್ತುಗಳ ಬೋಧನೆಯನ್ನು ನೆನಪಿಸುತ್ತದೆ. ಋಗ್ವೇದ ಸಾರುತ್ತದೆ: 'ಏಕಂ ಸತ್, ವಿಪ್ರಾಃ ಬಹುಧಾ ವದಂತಿ '13 (ಇರುವುದೊಂದೆ ಸತ್ಯ; ತಿಳಿದವರು ಅದನ್ನು ಅನೇಕ ರೀತಿಯಲ್ಲಿ ಹೇಳುತ್ತಾರೆ). ಛಾಂದೋಗ್ಯ ಉಪನಿಷತ್ ಇದೇ ಭಾವನೆಯನ್ನು ಪ್ರತಿಧ್ವನಿಸುತ್ತದೆ: 'ವಾಚಾರಂಭಣಂ ವಿಕಾರೋ ನಾಮಧೇಯಂ ಮೃತ್ತಿಕೇತ್ ಏವ ಸತ್ಯಂ.14 [ಮಣ್ಣು ಮಾತ್ರ ಸತ್ಯ. (ಮಡಕೆ, ಕುಡಕೆ, ಜಾಡಿ, ಹೂವಿನ ಕುಂಡ, ಗುಡಾಣ ಮುಂತಾದವುಗಳು) ಅದರ 'ವಿಕಾರ'ಗಳು, ಅದರ ವಿವಿಧ 'ಹೆಸರು'ಗಳು ಮಾತ್ರ—ವ್ಯವಹಾರ ಸಾಧ್ಯವಾಗಲು.]

ಹೀಗೆ ಒಂದೇ ಕೊಳದಿಂದ ವಿವಿಧ ಧರ್ಮಾವಲಂಬಿಗಳು (ಹಿಂದೂಗಳು, ಕ್ರೈಸ್ತರು, ಮುಸ್ಲಿಮರು, ಜೈನರು, ಬೌದ್ಧರು, ಪಾರ್ಸಿಗಳು, ಯಹೂದ್ಯರು . . . ಇತ್ಯಾದಿ) ಒಂದೇ ವಸ್ತು (ನೀರು)ವನ್ನು ವಿವಿಧ ರೂಪದ ಪಾತ್ರೆಗಳಲ್ಲಿ (ಮಡಕೆ, ಜಾಡಿ. ಚರ್ಮದ ಚೀಲ . . . ಇತ್ಯಾದಿ) ವಿವಿಧ ಹೆಸರುಗಳಲ್ಲಿ (ಜಲ, ಪಾನಿ, ವಾಟರ್ . . . ಇತ್ಯಾದಿ) ಕೊಂಡೊಯ್ಯುತ್ತಾರೆ. ಹೀಗೆ ಸತ್ಯದ ನಾಮರೂಪಗಳಲ್ಲಿ ವ್ಯತ್ಯಾಸವಿದೆ. ಆದರೆ ಅದು ಸಾರದಲ್ಲಿ ಒಂದೇ. ವಿವಿಧ ಧರ್ಮಗಳು ಕೇವಲ ನಾಮ–ರೂಪಗಳು. ಅವು ಒಂದೇ ಸತ್ಯ (ದೇವರು) ದೆಡೆಗೆ ಕೊಂಡೊಯ್ಯುವ ವಿವಿಧ ಹೆಸರಿನ ವಿವಿಧ ಆಚಾರಗಳ ವಿವಿಧ ಮಾರ್ಗಗಳು. ಒಂದು ಧರ್ಮ ಮತ್ತೊಂದು ಧರ್ಮಕ್ಕಿಂತ ಯಾವ ದೃಷ್ಟಿಯಿಂದಲೂ ಕೀಳಲ್ಲ, ಮೇಲೂ ಅಲ್ಲ. ಎಲ್ಲವೂ ಸರಿಸಮಾನವಾದವುಗಳು. ಒಂದು ಧರ್ಮದ ಮೇಲಿನ ಪ್ರೀತಿ, ಶ್ರದ್ಧೆ ಮತಾಂಧತೆಯಾಗಿ ಪರಿಣಮಿಸಬಾರದು, ಎಂದು ಶ್ರೀ ರಾಮಕೃಷ್ಣರು 'ಸಾರ್ವತ್ರಿಕ ಧಾರ್ಮಿಕ ಅನುಭಾವ'ವನ್ನು ಪ್ರತಿಪಾದಿಸುತ್ತಾರೆ.

ಹೀಗೆ ಶ್ರೀ ರಾಮಕೃಷ್ಣರು ಸರ್ವಧರ್ಮಗಳ ಸಮನ್ವಯವನ್ನು ಸಾಧಿಸಿದ ಆಧುನಿಕ ಭಾರತದ ಪ್ರವಾದಿಗಳಾಗಿದ್ದಾರೆ. ಎಲ್ಲರನ್ನೂ ಒಂದು ಗೂಡಿಸುವ ಅತ್ಯದ್ಭುತ ಶಕ್ತಿ ಅವರ 'ಮಾನವತಾ ಧರ್ಮ'ದಲ್ಲಿದೆ.

ಎಲ್ಲಾ ಧರ್ಮಗಳ ಸಾರ ಒಂದೇ ಆದಮೇಲೆ ನಾವು ಅನೇಕ ಧರ್ಮಗಳನ್ನು ಏಕೆ ಹೊಂದಿರಬೇಕು ? ಏಕೆ ನಂಬಬೇಕು ? ಅವನ್ನು ಅನುಸರಿಸುವ ಅಗತ್ಯವಾದರೂ ಏನು ? ಪ್ರಪಂಚದಲ್ಲಿ ಅಸ್ತಿತ್ವದಲ್ಲಿರುವ ಎಲ್ಲಾ ಧರ್ಮಗಳನ್ನು ಒಂದೇ ಧರ್ಮವನ್ನಾಗಿ ಏಕೆ ಪರಿವರ್ತಿಸಬಾರದು ? ಎಂಬ ಅನೇಕ ಧರ್ಮಗಳ ಅಸ್ತಿತ್ವದ ಅವಶ್ಯಕತೆಯನ್ನೇ ಪ್ರಶ್ನಿಸುವ ಪ್ರಶ್ನೆಗಳು ಈ ಹಂತದಲ್ಲಿ ಏಳುವುದು ಸಹಜ. ಈ ಪ್ರಶ್ನೆಗಳಿಗೆ ಶ್ರೀ ರಾಮಕೃಷ್ಣರು ಕೊಡುವ ಉತ್ತರ ತುಂಬ ಮಾರ್ಮಿಕವಾಗಿದೆ. ತಾಯಿ ತನ್ನ ಕುಟುಂಬದ ಸದಸ್ಯರ ವಿವಿಧ ರುಚಿ, ಇಷ್ಟ, ಮನೋಧರ್ಮ ಹಾಗೂ ದೇಹಪ್ರಕೃತಿಯನ್ನು ಗಮನದಲ್ಲಿಟ್ಟು ಕೊಂಡು ಒಂದೇ ತರಕಾರಿ (ಮೀನು) ಯಿಂದ ವಿವಿಧ ರೂಪದಲ್ಲಿ (ಕೆಲವನ್ನು ಸೀಯಿಸಿ, ಕೆಲವನ್ನು ಬೇಯಿಸಿ, ಕೆಲವನ್ನು ಉಪ್ಪಿನಲ್ಲಿ ಹಾಕಿ ಒಣಗಿಸಿ, ಕೆಲವನ್ನು ಎಣ್ಣೆಯಲ್ಲಿ ಕರಿದು) ಅಡಿಗೆ ಮಾಡಿ ಉಣಬಡಿಸುತ್ತಾಳೆ. ಅವರ ಮಾತುಗಳನ್ನೇ ಉದ್ಧರಿಸುವುದಾದರೆ : "ತಾಯಿ ಮಕ್ಕಳಿಗಾಗಿ ಮೀನು ಕೊಂಡುಕೊಂಡು ಬಂದಿದಾಳೆ. ಆ ಮೀನು ಹಾಕಿ, ಸಾರು, ಚಟ್ನಿ ಬಜ್ಜಿ ಪಲಾವೂ ತಯಾರುಮಾಡುತ್ತಾಳೆ. ಎಲ್ಲರ ಹೊಟ್ಟೆಗೂ ಪಲಾವು ಸರಿಹೋಗದು. ಅದಕ್ಕಾಗೇ ಕೆಲವು ಮಕ್ಕಳಿಗೆ ಮೀನಿನ ಸಾರು ತಯಾರು ಮಾಡುತ್ತಾಳೆ—ಅವಕ್ಕೆ ಜೀರ್ಣಶಕ್ತಿ ಬಹಳ ಕಡಿಮೆ. ಇನ್ನು ಕೆಲವು ಚಟ್ನಿಯನ್ನೊ ಅಥವಾ ಬಜ್ಜಿಯನ್ನೋ ತಿನ್ನುತ್ತವೆ. ಒಬ್ಬೊಬ್ಬರ ಪ್ರಕೃತಿ ಒಂದೊಂದು ವಿಧ."15

ಹೀಗೆ ಎಲ್ಲ ಧರ್ಮಗಳ ಸಾರ ಒಂದೇ ಆದರೂ ಆ 'ಸಾರ'ವನ್ನು ಮಾನವರು ಅವರವರ ಬುದ್ಧಿಶಕ್ತಿ, ಸಾಮರ್ಥ್ಯ, ರುಚಿ, ಇಷ್ಟ, ಮನೋಗತ, ಶ್ರದ್ಧೆಗನುಗುಣವಾಗಿ

ರೂಪಿಸಿಕೊಂಡು ಸಾಕ್ಷಾತ್ಕರಿಸಿಕೊಳ್ಳಬಹುದು ಎಂದು ಶ್ರೀ ರಾಮಕೃಷ್ಣರು ಸಾರುತ್ತಾರೆ. ಹಾಗಿಲ್ಲದೆ ಪ್ರಪಂಚದಲ್ಲಿರುವ ಎಲ್ಲ ಧರ್ಮಗಳನ್ನು ಏಕಧರ್ಮವಾಗಿ ಪರಿವರ್ತಿಸಿದ್ದೇ ಆದರೆ ಆಗ ಅದು ನೀರಸವಾಗಿ ಬಿಡುತ್ತದೆ.

೧೦

ಈಗ ಭಕ್ತಿ ಜ್ಞಾನವನ್ನು ಕುರಿತು ಇನ್ನೂ ವಿವರವಾಗಿ ಚರ್ಚಿಸಬೇಕು. ಭಕ್ತಿ ಮತ್ತು ಜ್ಞಾನ ಮಾರ್ಗಗಳು, ದೇವರನ್ನು ಸಾಕ್ಷಾತ್ಕರಿಸಿಕೊಳ್ಳಲು ಇರುವ ಎರಡು ವಿಭಿನ್ನ ಮಾರ್ಗಗಳು ಎಂದು ಸಾಮಾನ್ಯವಾಗಿ ಹೇಳುವುದು ಕಂಡುಬರುತ್ತದೆ. ಏಕೆಂದರೆ ಜ್ಞಾನಿಯಲ್ಲಿ ತರ್ಕಬುದ್ಧಿಯ ಪ್ರಭಾವ ಬಹಳವಾಗಿರುತ್ತದೆ. ಶಾಸ್ತ್ರಗ್ರಂಥಗಳನ್ನು ಓದಿ ಸಂಪಾದಿಸಿದ ಜ್ಞಾನ ಅದು ; ಅದು ಶಾಸ್ತ್ರ ಪಾಂಡಿತ್ಯ ; ಪುಸ್ತಕ ವಿದ್ಯೆ ; ದಾರ್ಶನಿಕ ತತ್ವದಲ್ಲಿ ಪರಿಣತಿ. ಹರಿತ ಬುದ್ಧಿಯ ಮೂಲಕ ಜ್ಞಾನಿ ಪ್ರಪಂಚದ ಪ್ರತಿಯೊಂದು ವಿಷಯವನ್ನು ಪದರ ಪದರವಾಗಿ ಸೀಳಿ ವಿಶ್ಲೇಷಿಸಿ ಅರ್ಥ ಮಾಡಿಕೊಳ್ಳುತ್ತಾನೆ. 'ಇದಲ್ಲ, ಇದಲ್ಲ' (ನೇತಿ, ನೇತಿ) ಮಾರ್ಗ ಅವನಿಗೆ ಬಹಳ ಪ್ರಿಯವಾದುದು ಹೀಗೆ ನಿತ್ಯಾನಿತ್ಯ ವಸ್ತು ವಿವೇಕ ಜ್ಞಾನವನ್ನು ತನ್ನ ಹರಿತ ಬುದ್ಧಿಯಿಂದ ಹೊಂದುವುದರ ಮೂಲಕ ದೈವಸಾಕ್ಷಾತ್ಕಾರವನ್ನು ಪಡೆಯುತ್ತಾನೆ.

ಆದರೆ ಭಕ್ತಿ ಮಾರ್ಗದಲ್ಲಿ ಪರಮಪ್ರೇಮದ, ಭಾವದ ಪ್ರಭಾವ ಹೆಚ್ಚಾಗಿರುತ್ತದೆ. ಶ್ರೀ ರಾಮಕೃಷ್ಣರ ಪ್ರಕಾರ, ಭಕ್ತಿ ಎಂದರೆ ಸರ್ವಶಕ್ತನೂ, ಸರ್ವವ್ಯಾಪಿಯೂ, ಸರ್ವಜ್ಞನೂ ಆದ ಭಗವಂತನ ಮೇಲಿನ ಅಮಿತ ಪ್ರೇಮ ಅಥವಾ ಪ್ರೀತಿ. ದೇವರ ಮೇಲಿನ ಅತ್ಯುಚ್ಚಮಟ್ಟದ ಪವಿತ್ರ ಪ್ರೀತಿಯೇ ಭಕ್ತಿ ಎಂದು ಶಾಂಡಿಲ್ಯ ಭಕ್ತಿ ಸೂತ್ರವು ಹೇಳುತ್ತದೆ.16

ಭಕ್ತಿಮಾರ್ಗ, ಭಾವನಾಮಾರ್ಗ. ಭಾವನೆಗಳಲ್ಲಿ ಪರಮ ಪ್ರೀತಿಯೇ ಅತ್ಯಂತ ಶ್ರೇಷ್ಠವಾದುದೆಂದು ಭಕ್ತನ ಧೃಢ ನಿಲುವು ಹೀಗೆ ಮಾನವನ ಉಳಿದೆಲ್ಲ ಭಾವನೆಗಳನ್ನು ಪರಮ ಭಾವನೆಯಾದ ಪ್ರೀತಿಯಲ್ಲಿ ಐಕ್ಯಗೊಳಿಸಿ ದೇವರ ಕಡೆಗೆ ಆ ಪ್ರೀತಿಯನ್ನು ತಿರುಗಿಸುವುದೇ ಭಕ್ತಿಯೆನಿಸುವುದು. ಭಕ್ತಿಯೇ ಪ್ರೇಮ (ಪ್ರೀತಿ) ; ಪ್ರೇಮವೇ ಭಕ್ತಿ. ಪ್ರೀತಿಯ ಮಳೆಗೆರೆಯುವುದು, ಪ್ರೇಮಧಾರೆಯಿಂದ ಆರ್ದ್ರವಾಗುವುದು, ಅಂತರಂಗ ದ್ರವಿಸುವುದು ಭಕ್ತಿಯೆನಿಸುವುದು. ಶ್ರೀ ರಾಮಕೃಷ್ಣರ ಪ್ರಕಾರ ಭಕ್ತಿರಸಕ್ಕೆ ಸಮಾನವಾದ ಬೇರೊಂದು ರಸವಿಲ್ಲ. ನಿಜವಾದ ಭಕ್ತ, ದೇವರನ್ನು ಪ್ರೀತಿಗಾಗಿ ಪ್ರೀತಿಸುತ್ತಾನೆ ; ಮಹಿಮೆಗಾಗಿ ಕೊಂಡಾಡುತ್ತಾನೆ. ಇಲ್ಲಿ ಪ್ರತಿಫಲಾಪೇಕ್ಷೆ ಇಲ್ಲ. ಭಗವಂತನನ್ನು ಪ್ರೀತಿಸಿದರೆ ಪ್ರತಿಫಲವಾಗಿ ಅವನು ಪ್ರಾಪಂಚಿಕ ಸುಖವನ್ನು ನೀಡುತ್ತಾನೆ ಎಂಬ ಆಸೆ ಆಕಾಂಕ್ಷೆ ನಿಜವಾದ ಭಕ್ತನಿಗೆ ಇಲ್ಲ. ಹಾಗಿದ್ದಲ್ಲಿ, ಭಕ್ತಿ ಕೊಟ್ಟು ತೆಗೆದುಕೊಳ್ಳುವ ವ್ಯಾಪಾರವಾಗಿ ಬಿಡುತ್ತದೆ. ನಿಜವಾದ ಭಕ್ತರಾದ ಶ್ರೀ ರಾಮಕೃಷ್ಣರು ದೇವರಲ್ಲಿ ಹೀಗೆ ಪ್ರಾರ್ಥನೆ ಮಾಡುತ್ತಿದ್ದರು : "ತಾಯೇ ನನಗೆ ಲೋಕ ಮಾನ್ಯತೆ

ಬೇಡ ತಾಯಿ, ಅಷ್ಟಸಿದ್ಧಿ ಬೇಡ ತಾಯಿ ; ಹೇ ತಾಯಿ ! ಶತಸಿದ್ಧಿ ಬೇಡ ತಾಯಿ, ದೇಹ ಸುಖ ಬೇಡ ತಾಯಿ, ನನಗೆ ನಿನ್ನ ಪಾದ ಪದ್ಮಗಳಲ್ಲಿ ಶ್ರದ್ಧಾಭಕ್ತಿಯುಂಟಾಗುವಂತೆ ಮಾಡು ; ಕೇವಲ ಇದೊಂದನ್ನು ಮಾತ್ರ ಕರುಣಿಸು ಎಂದು."17

ಹೀಗೆ ದೇವರನ್ನು ಕುರಿತ ಮಾನವನ ಹೃದಯದಲ್ಲಿರುವ ಪ್ರೇಮಾಮೃತವೇ ಭಕ್ತಿ. ಭಕ್ತ ಭಗವಂತನನ್ನು ಸದಾ ಪ್ರೀತಿಸುತ್ತಾನೆ, ನೆನೆಯುತ್ತಾನೆ, ಕಷ್ಟಬಂದಾಗ ಮಾತ್ರವಲ್ಲ. ಕಾಮನಾ ಶೂನ್ಯ ಭಕ್ತಿಯೇ ಅಹೇತುಕ ಭಕ್ತಿ. ಅದಕ್ಕಿಂತ ಮಿಗಿಲಾದ್ದು ಯಾವುದೂ ಇಲ್ಲ. ಏನೂ ಬೇಕಾಗಿಲ್ಲ, ಆದರೂ ಪ್ರೀತಿಸುವುದೇ ಶುದ್ಧಭಕ್ತಿ. ಪ್ರಹ್ಲಾದನಿಗೆ ರಾಜ್ಯ ಬೇಕಾಗಿರಲಿಲ್ಲ, ಐಶ್ವರ್ಯ ಬೇಕಾಗಿರಲಿಲ್ಲ ; ಕೇವಲ ದೇವರು ಮಾತ್ರ ಬೇಕಾಗಿತ್ತು. ಮಾನವನು ತನ್ನ ಮನಸ್ಸೆಲ್ಲವನ್ನೂ ಈ ಭಕ್ತಿಯಿಂದ ತುಂಬಿ ಕೊಂಡರೆ ಕೀಳಾದ ಅರಿಷಡ್ವರ್ಗಗಳಿಗೆ ಸ್ಥಳವೇ ಇಲ್ಲದಂತಾಗಿ ಪರಿಶುದ್ಧನಾದ ಭಕ್ತನಾಗುವನು. ಆತ್ಮೀಯತೆ, ಐಕ್ಯಭಾವ, ತಾದಾತ್ಮ್ಯ ಭಾವ—ಇವೇ ಅವನ ಲಕ್ಷಣಗಳು.

ನಿಜವಾದ ಭಕ್ತನಲ್ಲಿ ಅಹಂಭಾವ ಸಂಪೂರ್ಣವಾಗಿ ಲಯವಾಗಿರುತ್ತದೆ. 'ನಾನು ದೇವರ ಕೈಯಲ್ಲಿನ ಬೊಂಬೆ, ಅವನನ್ನು ಆಶ್ರಯಿಸಿ ಬಂದಿದ್ದೇನೆ. ಹಾಲಲ್ಲಾದರೂ ಅದ್ದಲಿ, ನೀರಲ್ಲಾದರೂ ಅದ್ದಲಿ. ಅವನ ಇಚ್ಛೆಯಂತಾಗಲಿ. ಅನ್ಯಥಾ ಶರಣಂ ನಾಸ್ತಿ' ಎಂದು ಭಕ್ತ ವಿನಮ್ರನಾಗಿ ತನ್ನನ್ನು ತಾನು ಸಂಪೂರ್ಣವಾಗಿ ಭಗವಂತನಿಗೆ ಸಮರ್ಪಿಸಿ ಕೊಳ್ಳುತ್ತಾನೆ. ಆ ಭಗವಂತನ ಇಚ್ಛೆಯಿಲ್ಲದೆ ಒಂದು ತೃಣವೂ ಅಲುಗಾಡದು ಎಂಬ ಭಾವ ಭಕ್ತನಲ್ಲಿ ಸದಾ ನೆಲಸಿರುತ್ತದೆ. ಶ್ರೀ ರಾಮಕೃಷ್ಣರ ಮಾತುಗಳಲ್ಲಿ : "ನಾನು ಯಂತ್ರ, ಆಕೆ ಯಂತ್ರಿ ;—ನಾನು ಗೃಹ, ಆಕೆ ಗೃಹಿಣಿ ;—ನಾನು ರಥ ಆಕೆ ರಥಿ, ಆಕೆ ನಡೆಸಿದಂತೆ ನಡೆಯುತ್ತೇನೆ, ನುಡಿಸಿದಂತೆ ನುಡಿಯುತ್ತೇನೆ."18

ಭಕ್ತಿ ಹೃದಯದ ಮಾರ್ಗ. ಜಾತಿ, ಮತ, ಕುಲ, ಗೋತ್ರ, ಲಿಂಗ, ವರ್ಗ ಭೇದವಿಲ್ಲದೆ ಎಲ್ಲರೂ ಅನುಸರಿಸಬಹುದಾದ ರಾಜಮಾರ್ಗ. ಭಕ್ತ ಜಗತ್ತಿನ ಸಕಲ ವಸ್ತುಗಳಲ್ಲಿಯೂ ಭಗವಂತನನ್ನೇ ಕಾಣುತ್ತಾನೆ ; ತನ್ಮೂಲಕ ಪರಮಾನಂದವನ್ನು ಹೊಂದುತ್ತಾನೆ. ಹೀಗೆ ನಿಜವಾದ ಭಕ್ತ, ನಿಸ್ವಾರ್ಥಿ, ನಿಷ್ಕಾಮ ಪ್ರೇಮಿ. ಅವನು ದೇವರನ್ನು ಪ್ರೀತಿಗಾಗಿ ಪ್ರೀತಿಸುತ್ತಾನೆ. ಶ್ರವಣ, ಕೀರ್ತನ, ಸ್ಮರಣ, ಪಾದಸೇವೆ, ಅರ್ಚನ, ವಂದನೆ, ಸೇವೆ, ಸ್ನೇಹ ಆತ್ಮಾರ್ಪಣ ಇವೆಲ್ಲಾ ಭಕ್ತಿಯ ವಿವಿಧ ರೂಪಗಳು.

ಶ್ರವಣ ಎಂದರೆ ಭಗವನ್ನಾಮವನ್ನು ಕೇಳುವುದು. ಅವನ ಮಹಾತ್ಮೆಯನ್ನು ಕೊಂಡಾಡುವುದು ಕೀರ್ತನ. ಅವನನ್ನು ಸದಾ ಸ್ಮರಿಸುವುದು ಸ್ಮರಣ. ಅವನ ಕೈಂಕರ್ಯ ಮಾಡುವುದು ಪಾದಸೇವೆ. ಅವನನ್ನು ತ್ರಿಲೋಕ ಸುಂದರನೆಂದು ತಿಳಿದು ವಿವಿಧ ಅಲಂಕಾರಗಳಿಂದ ಭಜಿಸುವುದು ಅರ್ಚನ, ವಂದನೆ ಎನಿಸುವುವು. ಅವನನ್ನು ಪರಮ ಸ್ನೇಹಿತನೆಂದು ತಿಳಿದು ಸಂಪೂರ್ಣ ಸಮರ್ಪಣ ಭಾವವನ್ನು ಹೊಂದುವುದು, ಅವನಲ್ಲಿ ಕೃತಜ್ಞತಾ ಭಾವನೆ, ಅವನ ಅಂಶರೂಪರಾದ ದರಿದ್ರನಾರಾಯಣರನ್ನು

ಸೇವಿಸುವುದು ಲೌಕಿಕ ವಿಷಯಗಳಲ್ಲಿ ನಿಷ್ಕಾಮರಾಗಿ ಭಗವಂತನಲ್ಲಿ ಸಂಪೂರ್ಣ ಅನುರಾಗವನ್ನು ಹೊಂದಿ ಭಕ್ತಿಪೂರ್ಣ ಜೀವನವನ್ನು ನಡೆಸುವುದು ಸ್ನೇಹ, ಸೇವೆ ಹಾಗೂ ಆತ್ಮಾರ್ಪಣಗಳೆನಿಸುವುವು.

ಭಕ್ತಿಯಲ್ಲಿ ಎರಡು ವಿಧ. (i) ವೈಧಿ ಭಕ್ತಿ ಮತ್ತು (ii) ರಾಗಾತ್ಮಿಕ ಭಕ್ತಿ. ಶಾಸ್ತ್ರಗಳಲ್ಲಿ, ಧರ್ಮಗ್ರಂಥಗಳಲ್ಲಿ ನಿರೂಪವಾಗಿರುವ ನಿರ್ದಿಷ್ಟ ರೀತಿಯಲ್ಲಿ ದೇವರನ್ನು ಆರಂಭಿಸುವುದನ್ನು ವೈಧಿ ಭಕ್ತಿ ಎಂದು ಕರೆಯಬಹುದು. ಇದು ಸಾಂಪ್ರದಾಯಿಕ ಭಕ್ತಿ.

ರಾಗಾತ್ಮಿಕ ಭಕ್ತಿಯಲ್ಲಿ ದೇವರನ್ನು ಪೂಜಿಸುವ ಸಂಪ್ರದಾಯ ರೀತಿಗೆ ಅಷ್ಟೊಂದು ಪ್ರಾಶಸ್ತ್ಯವಿಲ್ಲ. ಅದನ್ನು ಒಂದು ರೀತಿಯ ಕ್ರಾಂತಿಯುತ ಭಕ್ತಿ ಎನ್ನಬಹುದು. ಭಕ್ತಿಯ ಬಾಹ್ಯ ಆಚರಣೆಗೆ ಇಲ್ಲಿ ಒಲವಿಲ್ಲ. ಶುದ್ಧಪ್ರೇಮವೇ ಅದರ ಕೇಂದ್ರಬಿಂದು. ಸಂಪ್ರದಾಯಕ ಅರ್ಚನದು ವೈಧಿಭಕ್ತಿಯಾದರೆ ನಿಷ್ಕಾಮಪ್ರೇಮಸ್ವರೂಪಿಯದು ರಾಗಾತ್ಮಿಕ ಭಕ್ತಿ.

ಭಕ್ತಿ ಮೌಢ್ಯವಲ್ಲ, ಮೂಢ ನಂಬಿಕೆಯಲ್ಲ ಎಂದು ಶ್ರೀ ರಾಮಕೃಷ್ಣರು ಹೇಳುತ್ತಾರೆ. ಭಕ್ತ ವ್ಯವಹಾರ ಕೌಶಲವಾಗಿರಲು ಸಾಧ್ಯ. ಭಕ್ತಿಗೂ ಪವಾಡಕ್ಕೂ ಅರ್ಥಾತ್ ಸಂಬಂಧವಿಲ್ಲ. ಭಕ್ತನಾದವನಿಂದ ಯಾವುದೇ ಪವಾಡವನ್ನು ನಿರೀಕ್ಷಿಸುವುದು ಭಕ್ತಿಯನ್ನು ವ್ಯಾಪಾರೀ ವಸ್ತುವಾಗಿ ಮಾಡಿಬಿಡುತ್ತದೆ. ಹಾಗೆಯೇ ಪವಾಡ ಪುರುಷರೆಲ್ಲರೂ ಭಕ್ತರೆಂದು ಹೇಳಲಾಗದು. ಭಕ್ತಿ ತೋರಿಕೆಯ ಆಡಂಬರದ ವಸ್ತುವಲ್ಲ. ಭಕ್ತ ಸಿದ್ಧಿ ಪವಾಡಗಳ ಕಡೆ ಗಮನಹರಿಸಬಾರದೆಂದು ಶ್ರೀ ರಾಮಕೃಷ್ಣರು ಅಭಿಪ್ರಾಯ ಪಡುತ್ತಾರೆ: "ಸಿದ್ಧಿಗಾಗಿ, ಅಂದರೆ ಗಂಗಾನದಿ ಮೇಲೆ ನಡೆದು ಹೋಗುವ ಶಕ್ತಿ, ದೂರದೇಶದಲ್ಲಿ ಯಾರಾರು ಏನೇನು ಮಾತನಾಡಿಕೊಳ್ಳುತ್ತಾರೆ ಎಂಬುದನ್ನು ಹೇಳೋ ಶಕ್ತಿ ಇವೇ ಮೊದಲಾದ ಸಿದ್ಧಿಗಳನ್ನು ಸಂಪಾದಿಸಿಕೊಳ್ಳಲು ಪ್ರಯತ್ನಮಾಡೋರೂ ಆದೇ ಕೀಳುದರ್ಜೆಗೆ ಸೇರಿದವರೆ. ಇಂಥ ಜನರಿಗೆ ಶುದ್ಧಭಕ್ತಿ ದೊರೆಯೋದು ಬಹಳ ದುಸ್ಸಾಧ್ಯ"19

ಭಕ್ತಿ ಮಾನವನ ಪ್ರಾರಬ್ಧ ಕರ್ಮವನ್ನು ನಾಶಗೊಳಿಸುತ್ತದೆಂದು ನಂಬುವುದು ಮೂಢ ನಂಬಿಕೆ ಎಂದು ಶ್ರೀ ರಾಮಕೃಷ್ಣರು ಎಚ್ಚರಿಸುತ್ತಾರೆ. ಪ್ರಾರಬ್ಧ ಕರ್ಮವನ್ನು ಸವೆಸಿಯೇ ಗೆಲ್ಲಬೇಕು; ಅದಕ್ಕೆ ಯಾವ ರಿಯಾಯತಿಯೂ ಇಲ್ಲ; ಹಾಗೆ ತಿಳಿಯುವುದು ಭಕ್ತಿಯನ್ನು ವ್ಯಾಪಾರೀ ವಸ್ತುವನ್ನಾಗಿ ನೋಡಿದಂತಾಗುತ್ತದೆ. ಕುರುಡ ಪರಮ ಭಕ್ತನಾಗಿದ್ದುಕೊಂಡು ಗಂಗಾನದಿಯಲ್ಲಿ ಮಿಂದ ಮಾತ್ರಕ್ಕೆ ಅವನ ಕುರುಡುತನ ಹೋಗುವುದಿಲ್ಲವೆಂದು ಉದಾಹರಿಸುತ್ತಾರೆ.

೧೧

ಶ್ರೀ ರಾಮಕೃಷ್ಣರ ಪ್ರಕಾರ, ಜ್ಞಾನ ಪುಸ್ತಕದ ಬದನೇಕಾಯಿಯಲ್ಲ. ಶಾಸ್ತ್ರ ಜ್ಞಾನ, ಶಾಸ್ತ್ರ ಪಾಂಡಿತ್ಯ ಕೇವಲ ವಿಚಾರ ಮಟ್ಟದಲ್ಲಿ ಸೈದ್ಧಾಂತಿಕ ಮಟ್ಟದಲ್ಲಿ ನಿಲ್ಲದೆ, ಅದು ಅನುಷ್ಠಾನಕ್ಕೊಳಗಾಗಿ ಜೀವನ-ಧರ್ಮ ಜೀವನ-ನೀತಿಯಾಗಬೇಕು. ಅದು

ಕೇವಲ ಬುದ್ಧಿಯ ಮನವರಿಕೆಯಾಗದೆ ಹೃದಯಾನುಭವವಾಗಬೇಕು. ಆಗ ಮಾತ್ರ ಅದು ನಿಜವಾದ ಜ್ಞಾನವೆನಿಸಿಕೊಳ್ಳುವುದು. ಹಾಗಿಲ್ಲದ ಪಕ್ಷದಲ್ಲಿ ಅದು ಶುಷ್ಕವೂ, ನೀರಸವೂ ಆಗಿಬಿಡುವುದು. ಶ್ರೀ ರಾಮಕೃಷ್ಣರ ಶಿಷ್ಯ ಮಣಿಲಾಲನ ಮಾತುಗಳನ್ನು ಇಲ್ಲಿ ಉಲ್ಲೇಖಿಸುವುದಾದರೆ : "ಕೆಲವು ಮಂದಿ ಒಂದು ದೋಣಿ ಮಾಡಿಕೊಂಡು ಗಂಗಾ ನದಿಯನ್ನು ದಾಟುತ್ತಿದ್ದರು. ಅವರಲ್ಲಿ ಒಬ್ಬ ಪಂಡಿತ ಇದ್ದ. ಆತ ತನ್ನ ಪಾಂಡಿತ್ಯ ವನ್ನು ಬಹಳವಾಗಿ ಕೊಚ್ಚಿಕೊಳ್ಳಲಾರಂಭಿಸಿದ. ಅತ ತಾನು ವೇದ, ವೇದಾಂತ, ಷಡ್ದರ್ಶನ ಇತ್ಯಾದಿ ಅನೇಕ ಶಾಸ್ತ್ರಗಳನ್ನು ಓದಿರುವುದಾಗಿ ಹೇಳಿದ. ಆತ ಒಬ್ಬನನ್ನು ಕೇಳಿದ : 'ನಿನಗೆ ವೇದಾಂತ ಪರಿಚಯ ಆಗಿದೆಯೇ' ಆತ ಉತ್ತರವಿತ್ತ : 'ಇಲ್ಲ ಸ್ವಾಮಿ', 'ಶಾಸ್ತ್ರ-ಗೀಸ್ತ್ರಗಳನ್ನು ಸ್ವಲ್ಪವೂ ಓದಿಲ್ಲವೇ ?' 'ಇಲ್ಲ, ಸ್ವಾಮಿ', ಪಂಡಿತ ಅತ್ಯಂತ ಗರ್ವದಿಂದ ಹೀಗೆ ಮಾತಾಡುತ್ತಿದ್ದರೂ ಆ ಪ್ರಯಾಣಿಕ ಸುಮ್ಮನೆ ಕುಳಿತ್ತಿದ್ದ. ಇದ್ದಕಿದ್ದ ಹಾಗೆ ದೊಡ್ಡ ಬಿರುಗಾಳಿ ಎದ್ದು ದೋಣಿ ಇನ್ನೇನು ಮುಗುಚಿ ಕೊಂಡುಬಿಡುವುದರಲ್ಲಿತ್ತು. ಆಗ ಆ ಪ್ರಯಾಣಿಕ ಪಂಡಿತನನ್ನು ಕೇಳಿದ : 'ಪಂಡಿತರೆ, ನಿಮಗೆ ಈಜು ಬರುವುದೇ. ಪಂಡಿತ ಉತ್ತರವಿತ್ತ : 'ಇಲ್ಲ'. ಪ್ರಯಾಣಿಕ ಹೇಳಿದ : 'ಸ್ವಾಮಿ, ನನಗೆ ಸಾಂಖ್ಯ ಪಾತಂಜಲ ಇವು ಯಾವುವೂ ಗೊತ್ತಿಲ್ಲ. ಆದರೆ ನನಗೆ ಈಜುವುದು ಗೊತ್ತಿದೆ."20 ಹೀಗೆ ಜ್ಞಾನದ ಸಂಬಂಧವಾಗಿ ಮಾತನಾಡುವುದರಿಂದಲೇ ಜ್ಞಾನಿಯಾಗಲು ಸಾಧ್ಯವಿಲ್ಲ.

"ಶಾಸ್ತ್ರಗಳೊಳಗೆ ಭಗವಂತ ಸಿಕ್ಕುವನೇ ? ಶಾಸ್ತ್ರಾಧ್ಯಯನದಿಂದ ಅಬ್ಬಬ್ಬ ಎಂದರೆ ಆತನ ಅಸ್ತಿ ಮಾತ್ರ ಸಿಕ್ಕಬಹುದು . . . . ಲೆಕ್ಕವಿಲ್ಲದಷ್ಟು ಪುಸ್ತಕ ಓದು, ಬಾಯಿಂದ ಅಸಂಖ್ಯ ಶ್ಲೋಕಗಳನ್ನು ಹೇಳು. ವ್ಯಾಕುಲನಾಗಿ ಮುಳುಗು ಹಾಕದೆ ಇದ್ದರೆ ಆತನ ಸಾಕ್ಷಾತ್ಕಾರ ಮಾಡಿಕೊಳ್ಳಲಾಗುವುದಿಲ್ಲ. ಬರೇ ಪಾಂಡಿತ್ಯದಿಂದ ಮನುಷ್ಯನನ್ನು ಮುಗ್ಧಗೊಳಿಸಲು ಸಾಧ್ಯ. ಆದರೆ ಆತ (ದೇವರು)ನನ್ನು ಸಾಧ್ಯವಿಲ್ಲ."21

ವಿವೇಕ-ವೈರಾಗ್ಯವಿಲ್ಲದ ಪಾಂಡಿತ್ಯ, ಭಗವಂತನನ್ನು ಕುರಿತು ಚಿಂತಿಸದ ಪಾಂಡಿತ್ಯ, ಕಾಮ ಕಾಂಚನದಲ್ಲಿ ಆಸಕ್ತವಾಗಿರುವ ಪಾಂಡಿತ್ಯ ನಿರರ್ಥಕ. ಆದರಿಂದ ಏನೂ ಆಗದು : "ರಣಹದ್ದು ಬಹಳ ಎತ್ತರಕ್ಕೇನೋ ಹಾರಿಹೋಗುತ್ತದೆ. ಆದರೆ ಅದರ ದೃಷ್ಟಿಯೆಲ್ಲ ಕೇವಲ ಹೆಣದ ಗುಂಡಿಗಳ ಕಡೆ. ಪಂಡಿತ ಅನ್ನಿಸಿಕೊಳ್ಳೋನು ಅನೇಕ ಪುಸ್ತಕ ಶಾಸ್ತ್ರ ಓದಿರುತ್ತಾನೆ, ಶ್ಲೋಕ ಎತ್ತಿಹೇಳಬಲ್ಲ, ಅನೇಕ ಪುಸ್ತಕಗಳನ್ನು ಬರೆದಿರಬಹುದು. ಆದರೆ ಆತ ಸ್ತ್ರೀ ಆಸಕ್ತನಾಗಿ ಹೆಸರು, ಕೀರ್ತಿ ಧನಕಾದಿಗಳೇ ಸಾರವತ್ತು ಅಂತ ಭಾವಿಸುತ್ತಿದ್ದರೆ ಆತ ಹೇಗೆ ಪಂಡಿತನಾಗಬಲ್ಲ ? ಭಗವಂತನಲ್ಲಿ ಮನಸ್ಸು ನೆಲಸದಿದ್ದರೆ ಆತ ಪಂಡಿತನಾಗಬಲ್ಲನೇ ?"22

ಹೀಗೆ 'ಶಾಸ್ತ್ರಜ್ಞಾನ' ಶಾಸ್ತ್ರದಲ್ಲಿ ಉಳಿಯದೆ ಜೀವನಧರ್ಮವಾಗಿ ಜೀವನ-ನೀತಿಯಾಗುವುದನ್ನೆ ಭಕ್ತಿ ಎಂಬ ಇನ್ನೊಂದು ಹೆಸರಿನಿಂದ ಕರೆಯಬಹುದೆಂದು ಶ್ರೀ ರಾಮ ಕೃಷ್ಣರು ಬೋಧಿಸುತ್ತಾರೆ. ಅವರ ಪ್ರಕಾರ, ಅಂತಿಮಾರ್ಥದಲ್ಲಿ ಜ್ಞಾನಕ್ಕೂ ಭಕ್ತಿಗೂ

ಯಾವ ಭೇದವೂ ಇಲ್ಲ. ಭಕ್ತಿ ಎಂದರೆ ಸ್ವಾನುಭವ ಸಹಜ ಸತ್ಯಜ್ಞಾನ. ಈ ಜಗತ್ತಿನಲ್ಲಿ ನನ್ನದೆಂಬುದು ಏನೂ ಇಲ್ಲ. ಎಲ್ಲವೂ ಭಗವಂತನದು ಎಂದು ಆತ್ಮಾರ್ಪಣೆ ಮಾಡಿ ಅವನೊಬ್ಬನೆ ನನ್ನ ಆಪ್ತ ಬಂಧು ಎಂಬ ಶ್ರದ್ಧೆಯನ್ನು ನಿರಂತರ ಹೊಂದಿರುವುದು ಜ್ಞಾನವೆನಿಸುವುದು.

ಹೀಗೆ ಜ್ಞಾನಿಯ ಲಕ್ಷಣಗಳು ಎರಡು : ಮೊದಲನೆಯದು ಅಹಂಕಾರ ಶೂನ್ಯತೆ, ಎರಡನೆಯದು ಶಾಂತತೆ.23 "ನಾನು, ನನ್ನದು ಎಂಬುದೆ ಅಜ್ಞಾನ, 'ಹೇ ಭಗವಂತ, ನೀನು, ನಿನ್ನದು' ಎಂಬುದೆ ಜ್ಞಾನ."24

ತಾಯಿ ರೋಗದಿಂದ ಪೀಡಿತವಾಗಿರುವ ತನ್ನ ಮಗುವನ್ನು ವೈದ್ಯನಲ್ಲಿಗೆ ಕರೆದು ಕೊಂಡು ಹೋದಾಗ 'ನಾನು ನಿನ್ನ ಮಗುವನ್ನು ಉಳಿಸುತ್ತೇನೆ, ಸ್ವಲ್ಪವೂ ವ್ಯಥೆಪಡ ಬೇಡ ಎಂದು ಅಹಂಕಾರ–ಅಜ್ಞಾನದಿಂದ ವೈದ್ಯ ಹೇಳಿದಾಗ ದೇವರು ನಗುತ್ತಾನೆ. ಹಾಗೆಯೇ ಪೃಥ್ವಿ ಎಲ್ಲವೂ ದೇವರ ವಾಸಸ್ಥಾನವಾಗಿದ್ದರೂ, ಸರ್ವವೂ ಅವನಿಗೆ ಸಂಬಂಧಿಸಿದ್ದಾದರೂ ಅಣ್ಣತಮ್ಮಂದಿರಿಬ್ಬರು ಟೇಪನ್ನು ಹಿಡಿದುಕೊಂಡು 'ಇದು ನನ್ನ ಭೂಮಿ' 'ಅದು ನಿನ್ನದು' ಎಂದು ಕಾದಾಡುವಾಗಲೂ ದೇವರು ಅವರ ಅಜ್ಞಾನವನ್ನು ಕಂಡು ನಗುತ್ತಾನೆಂದು ಶ್ರೀ ರಾಮಕೃಷ್ಣರು ಸ್ವಾರಸ್ಯವಾಗಿ ವಿವರಿಸುತ್ತಾರೆ. ಅವರ ಪ್ರಕಾರ, ಜ್ಞಾನ ಪಡೆದ ಮೇಲೆ ಜ್ಞಾನಿಯ ಶರೀರ ತಕ್ಷಣವೆ ಬಿದ್ದುಹೋಗುವುದಿಲ್ಲ. ಅದು ಎಂದಿನಂತೆ ಉಳಿದುಕೊಳ್ಳುತ್ತವೆ. ಆದರೆ ಜ್ಞಾನಾಗ್ನಿಯಲ್ಲಿ ಕಾಮಾದಿ ರಿಪುಗಳು ದಗ್ಧವಾಗಿ ಹೋಗಿರುತ್ತವೆ.24(a) ಇಂಥವರೆ ಅಜ್ಞಾನದಲ್ಲಿರುವವರನ್ನು ಕೈಹಿಡಿದು ಎತ್ತಿ, ಜ್ಞಾನದೆಡೆಗೆ ನಡೆಸುವವರು. ಹೀಗೆ ಜ್ಞಾನ ಮತ್ತು ಭಕ್ತಿ ಎರಡೂ ಜ್ಞಾನವೇ, ಭಕ್ತಿ ಭಗವಂತನೆಂಬ ಪ್ರಿಯತಮನನ್ನು ಕುರಿತ ಜ್ಞಾನವಾದರೆ, ಮಾನವರೆಲ್ಲರಲ್ಲಿಯೂ ಅಂತರ್ಯಾಮಿಯಾಗಿದ್ದುಕೊಂಡು ಅವರನ್ನು ತನ್ನೆಡಗೆ, ತನ್ನ ಸ್ವರೂಪವನ್ನು ತಿಳಿಯುವಂತೆ ಪ್ರೇರೇಪಿಸುತ್ತಿರುವ ಭಗವಂತನ ಪ್ರೀತಿಯೇ ಜ್ಞಾನ; ಅದು ಕೇವಲ ಬೌದ್ಧಿಕ ಮನವರಿಕೆಯಲ್ಲ, ಅನುಭವಗಮ್ಯ ಜ್ಞಾನ.

ಆದುದರಿಂದ ಶ್ರೀ ರಾಮಕೃಷ್ಣರು ಪ್ರಥಮತ; ಭಕ್ತರೋ ಅಥವಾ ಜ್ಞಾನಿಗಳೋ ಎಂಬ ಪ್ರಶ್ನೆ ಇಲ್ಲಿ ಸಮಂಜಸ ಪ್ರಶ್ನೆಯಲ್ಲ. ಅವರ ಪ್ರಕಾರ ಭಕ್ತಿಯೇ ಜ್ಞಾನ ; ಜ್ಞಾನವೇ ಭಕ್ತಿ. ಅವರ ಮಾತುಗಳಲ್ಲೇ ಹೇಳುವುದಾದರೆ : "ದೇವರ ಜ್ಞಾನ ಮತ್ತು ದೇವರ ಅನುರಾಗ ಕೊನೆಗೆ ಎರಡೂ ಒಂದೇ. ಪವಿತ್ರ ಜ್ಞಾನ ಮತ್ತು ಪವಿತ್ರ ಅನುರಾಗಗಳಲ್ಲಿ ಯಾವ ಭೇದವೂ ಇಲ್ಲ"25 "ಜ್ಞಾನ, ಭಕ್ತಿ, ಎರಡೂ ಒಂದೇ ವಸ್ತು. ವ್ಯತ್ಯಾಸ ಇಷ್ಟೆ : ಒಬ್ಬ ಹೇಳುತ್ತಾನೆ, 'ನೀರು' ಅಂತ. ಇನ್ನೊಬ್ಬ ಹೇಳುತ್ತಾನೆ, 'ಹಿಮಗಡ್ಡೆ' ಅಂತ."26

ಆದರೂ ಒಂದು ಅಂಶವನ್ನು ಇಲ್ಲಿ ಗಮನಿಸಬೇಕು. ಶ್ರೀ ರಾಮಕೃಷ್ಣರ ವಚನ, ಉಪದೇಶಗಳನ್ನು ಆಮೂಲಾಗ್ರವಾಗಿ ಪರಿಶೀಲಿಸಿದರೆ, ಅವರು ಜ್ಞಾನ ಮಾರ್ಗಕ್ಕಿಂತ ಭಕ್ತಿಮಾರ್ಗಕ್ಕೆ ಹೆಚ್ಚು ಪ್ರಾಶಸ್ತ್ಯಕೊಟ್ಟಂತೆ ಕಾಣುತ್ತದೆ. ಜ್ಞಾನ ಯೋಗ ಕಠಿಣ

ವಾದುದು. ದೇಹಾತ್ಮ-ಬುದ್ಧಿ ಹೋಗುವ ಹೊರತು ಜ್ಞಾನ ಉಂಟಾಗೋದಿಲ್ಲ : “ ನಾನು ದೇಹವಲ್ಲ, ನಾನು ಮನಸ್ಸಲ್ಲ. ನಾನು ಚತುರ್ವಿಂಶತಿ ತತ್ತ್ವ ಅಲ್ಲ ; ನಾನು ಸುಖದುಃಖಗಳಿಗೆ ಅತೀತ, ನನಗೆ ದಯ ರೋಗ, ಶೋಕ, ಮುಪ್ಪು, ಮೃತ್ಯು' ಎಂಬ ಬೋಧೆ ಕಲಿಯುಗದಲ್ಲಿ ಉಂಟಾಗುವುದು ಬಹಳ ಕಠಿಣ. ವಿಚಾರ ಎಷ್ಟೇ ಮಾಡು ದೇಹಾತ್ಮ ಬುದ್ಧಿ ಯಾವುದೋ ಮೂಲೆಯಿಂದ ನುಸಿದುಕೊಂಡು ಒಳಕ್ಕೆ ನುಗ್ಗಿ ಬಿಡುತ್ತದೆ . . . . ದೇಹಾಭಿಮಾನ ಹೋಗುವುದಿಲ್ಲ, ಆದ್ದರಿಂದ ಭಕ್ತಿಯೋಗವೇ ಈ ಯುಗಕ್ಕೆ ಒಳ್ಳೆಯದು. ಇದು ಬಹಳ ಸಹಜವಾದದ್ದು.”27

”ಜ್ಞಾನ ಅಂತಃಪುರದವರೆಗೆ ಮಾತ್ರ ಹೋಗಬಲ್ಲದು, ಆದರೆ ಭಕ್ತಿ ಅಂತಃ ಪುರಕ್ಕೇನೇ ಹೋಗಬಲ್ಲದು ”28

ಒಟ್ಟಿನಲ್ಲಿ ಶ್ರೀ ರಾಮಕೃಷ್ಣರು ಭಕ್ತರಲ್ಲಿ ಭಕ್ತಶ್ರೇಷ್ಠರಾಗಿ, ಜ್ಞಾನಿಗಳಲ್ಲಿ ಮಹಾ ಜ್ಞಾನಿಗಳಾಗಿ ಮಾನವರಲ್ಲಿ ಮಹಾಮಾನವರಾಗಿ ಬಾಳಿ ಬೆಳಗಿದವರು. ಹೊರನೋಟಕ್ಕೆ ಅವರು ಭಾವುಕ ಭಕ್ತರಂತೆ ಕಂಡರೂ ಅಂತರಂಗದಲ್ಲಿ ಅವರು ನಿಜವಾಗಿಯೂ ಜ್ಞಾನಿ ಗಳಾಗಿದ್ದರು ಎಂದು ಸ್ವಾಮಿ ವಿವೇಕಾನಂದರು ಬಹಳ ಚೆನ್ನಾಗಿ ವಿಶ್ಲೇಷಿಸಿದ್ದಾರೆ. ಹೀಗೆ ಶ್ರೀ ರಾಮಕೃಷ್ಣರನ್ನು ಜ್ಞಾನೀ-ಭಕ್ತರೆಂದೇ ಕರೆಯಬೇಕು.

೧೨

ಶ್ರೀ ರಾಮಕೃಷ್ಣರ ತಾತ್ವಿಕ ಚಿಂತನೆಯನ್ನು ಸ್ಪಷ್ಟವಾಗಿ ನಿರೂಪಿಸುವುದು ಸುಲಭವಲ್ಲ. ಅವರು ಅಂತಿಮಾರ್ಥದಲ್ಲಿ ‘ ಅದ್ವೈತಿ ’ಗಳಾದರೂ ಅದರ ಮೆಟ್ಟಲು ಗಳೆನಿಸಿದ ದ್ವೈತ, ವಿಶಿಷ್ಟಾದ್ವೈತಗಳನ್ನು ಕಡೆಗಣಿಸಿದವರಲ್ಲ. ಅವರ ತಾತ್ವಿಕ ಚಿಂತನೆ ಯಲ್ಲಿ ಅದ್ವೈತ, ವಿಶಿಷ್ಟಾದ್ವೈತ, ವೈಷ್ಣವ ಧರ್ಮಗಳ ಆಧ್ಯಾತ್ಮಿಕ ವಿಚಾರಗಳ ಸಂಗಮ ವನ್ನು ಕಾಣಬಹುದು.

ಆಗಲೇ ತಿಳಿಸಿದಂತೆ, ಶ್ರೀ ರಾಮಕೃಷ್ಣರ ಪ್ರಕಾರ ಅತ್ಯಂತಿಕ ಸತ್ಯ ದೇವರು ಅಥವಾ ಬ್ರಹ್ಮತತ್ತ್ವ. ದೇವರನ್ನು ಶಿವ, ರಾಮ, ಕಾಳೀ ಮುಂತಾದ ಹೆಸರುಗಳಿಂದ ಅವರು ಕರೆಯುತ್ತಾರೆ. ಇವುಗಳಲ್ಲಿ ಕಾಳೀ ಎಂಬ ಹೆಸರು ಅವರಿಗೆ ಪರಮ ಪ್ರಿಯ. ದೇವರೇ (ಕಾಳೀ) ಸೃಷ್ಟಿಕರ್ತೆ, ಪಾಲನೆಮಾಡುವವಳು ಹಾಗೂ ಸಂಹಾರಮಾಡುವವಳು. ಸೃಷ್ಟಿ ಆಕೆಯ ಲೀಲೆ.

ಅತ್ಯಂತಿಕ ಸತ್ಯ ಸ್ವರೂಪದಲ್ಲಿ ಸಗುಣವೋ ಅಥವಾ ನಿರ್ಗುಣವೋ ಎಂಬ ಪ್ರಶ್ನೆ ತಲೆಯೆತ್ತುತ್ತದೆ. ಶ್ರೀ ರಾಮಕೃಷ್ಣರ ಪ್ರಕಾರ ಅತ್ಯಂತಿಕ ಸತ್ಯ ಸಗುಣವೂ ಹೌದು, ನಿರ್ಗುಣವೂ ಹೌದು. ಅಂದರೆ ಅದು ಕೇವಲ ಸಗುಣವಲ್ಲ ; ಕೇವಲ ನಿರ್ಗುಣವೂ ಅಲ್ಲ. ಅದು ಸಗುಣವಾಗಿಯೂ ನಿರ್ಗುಣ, ನಿರ್ಗುಣವಾಗಿಯೂ ಸಗುಣ. ಅಷ್ಟೇಕೆ ಸಗುಣ ನಿರ್ಗುಣಗಳೆರಡನ್ನೂ ಮೀರಿದುವಾಗಿದೆ. ಅದು ತನ್ನನ್ನು ತಾನು ಅನೇಕ ರೂಪಗಳಲ್ಲಿ ತೋರ್ಪಡಿಸಿಕೊಳ್ಳುವ ಶಕ್ತಿಯನ್ನು ಹೊಂದಿದೆ ; ಹಾಗೆಯೇ ನಿರೂಪವಾಗಿ ನಿಲ್ಲು

ವಂಥಾದ್ದೂ ಆಗಿವೆ. ಈ ಅಂಶವನ್ನು ಸ್ಪಷ್ಟವಾಗಿ ವಿಶದಪಡಿಸಲು ಶ್ರೀ ರಾಮಕೃಷ್ಣರು ಗೋಸುಂಬೆಯ ಉದಾಹರಣೆಯನ್ನು ಕೊಡುತ್ತಾರೆ: "ಒಂದು ಸಲ ಒಬ್ಬ ಒಂದು ತೋಪಿಗೆ ಹೋಗಿ ಮರದ ಮೇಲೆ ಒಂದು ಗೋಸುಂಬೆ ಕಂಡ. ಆತ ತನ್ನ ಸ್ನೇಹಿತರಿಗೆ: 'ನಾನು ಆ ತೋಪಿನಲ್ಲಿ ಒಂದು ಗೋಸುಂಬೆ ನೋಡಿ ಬಂದೆ' ಎಂದ. ಆತನ ವಿಶ್ವಾಸ ಅದು ಸಂಪೂರ್ಣ ಕೆಂಪು ಎಂದೇ. ಅದೇ ತೋಪಿನಿಂದ ಬಂದ ಇನ್ನೊಬ್ಬ: 'ನಾನು ಒಂದು ಹಸಿರು ಗೋಸುಂಬೆ ನೋಡಿ ಬಂದೆ' ಎಂದ. ಆತನ ವಿಶ್ವಾಸ ಅದು ಅಚ್ಚ ಹಸಿರು ಎಂದೆ. ಆದರೆ ಯಾರು ಆ ತೋಪಿನಲ್ಲಿ ವಾಸವಾಗಿದ್ದನೋ ಆತ ಬಂದು: 'ನೀವೇನು ಹೇಳ್ತಿದಿರೋ ಅದೆಲ್ಲಾ ಸರಿ, ಆದರೆ ಆ ಪ್ರಾಣಿ ಕೆಲವು ವೇಳೆ ಕೆಂಪಾಗಿ ಕೆಲವು ವೇಳೆ ಹಳದಿಯಾಗಿ, ಕೆಲವು ವೇಳೆ ಹಸಿರಾಗಿ ಕಾಣಿಸಿಕೊಳ್ಳುತ್ತದೆ. ಇನ್ನು ಕೆಲವು ಸಮಯ ಅದಕ್ಕೆ ಯಾವ ಬಣ್ಣವೂ ಇರೋದಿಲ್ಲ' ಎಂದ".29

ಅವರ ಸಂಭಾಷಣೆಗಳಲ್ಲಿ ಪದೇ ಪದೇ ಬ್ರಹ್ಮದ ಸಾಕಾರ-ನಿರಾಕಾರ, ಸಗುಣ-ನಿರ್ಗುಣ ಸ್ವರೂಪದ ವಿವರಣೆ ಬರುತ್ತದೆ. ಆತ್ಯಂತಿಕ ಸತ್ಯ (ಬ್ರಹ್ಮ) ಸ್ವರೂಪದಲ್ಲಿ ನಿರ್ಗುಣಮಾತ್ರವೆಂದು ಸಾರುವ ಅದ್ವೈತ ದರ್ಶನ, ಇಲ್ಲ ಅದು ಸಗುಣಮಾತ್ರವೆಂದು ಸಾರುವ ದ್ವೈತ ವಿಶಿಷ್ಟಾದ್ವೈತ ಮುಂತಾದ ದ್ವೈವಾಸ್ತಿಕ್ಯ (theistic) ದರ್ಶನಗಳ ಅತಿರೇಕವನ್ನು ಬಹಳ ಸೊಗಸಾಗಿ ತಮ್ಮ ದರ್ಶನದಲ್ಲಿ ಶ್ರೀ ರಾಮಕೃಷ್ಣರು ಸಮನ್ವಯ ಮಾಡಿದ್ದಾರೆ: "ನಿರ್ಗುಣ ನನ್ನ ತಂದೆ, ಸಗುಣ ನನ್ನ ತಾಯಿ. ಯಾರನ್ನು ಹೊಗಳುವುದು ? ಯಾರನ್ನು ತೆಗಳುವುದು ? ತಕ್ಕಡಿಯ ಬಟ್ಟಲೆರಡೂ ಒಂದೇ ಸಮ ತೂಕ."30

"ವೇದಾಂತ ವಿಚಾರದ ದೃಷ್ಟಿಯಿಂದ ಬ್ರಹ್ಮ ನಿರ್ಗುಣ . . . . . . ಆತನ ನೈಜ ಸ್ವರೂಪ ಏನು ಎಂಬುದನ್ನು ಬಾಯಿಂದ ವರ್ಣನೆ ಮಾಡಲಾಗೋದಿಲ್ಲ. ಆದರೆ ನಿನ್ನ ವ್ಯಕ್ತಿತ್ವ ಸತ್ಯವಾಗಿರುವವರೆಗೆ, ಜಗತ್ತು, ಸತ್ಯ, ಭಗವಂತನ ನಾನಾ ರೂಪಗಳೂ ಸತ್ಯ, ಭಗವಂತ ಒಬ್ಬ ವ್ಯಕ್ತಿ ಎಂಬ ಭಾವನೆಯೂ ಸತ್ಯ."31

"ನಿರ್ಗುಣಸ್ವರೂಪನಾದ ಬ್ರಹ್ಮನಲ್ಲಿ ಹಾಗೂ ಸಗುಣ ಸ್ವರೂಪಿಯಾದ ಮಾತೆಯಲ್ಲಿ ಯಾವ ಭೇದವೂ ಇಲ್ಲ. ದೇವರು ಕಾರ್ಯಾಸಕ್ತನಾಗಿಲ್ಲದಿರುವಾಗ ಅವನನ್ನು ಶುದ್ಧ ಬ್ರಹ್ಮವೆಂದೂ, ಅವನು ಸೃಷ್ಟಿ ಸ್ಥಿತಿ-ಲಯಗಳ ಕಾರ್ಯದಲ್ಲಿ ತೊಡಗಿರುವಾಗ ಅವನನ್ನು ಶಕ್ತಿಮಾತೆಯೆಂದೂ ಕರೆಯಲಾಗುತ್ತದೆ"32

"ಕಜ್ಜಾಯವನ್ನು ಉದ್ದುದ್ದವಾಗಿ ತಿನ್ನಿ, ಅಡ್ಡಡ್ಡಲಾಗಿ ತಿನ್ನಿ, ಹೇಗೆ ತಿಂದರೂ ಸಿಹಿಯೆ"33

ಎಲ್ಲಾ ಆಸ್ತಿಕರಿಗೂ ಸವಾಲನ್ನು ಒಡ್ಡುವ ಪ್ರಶ್ನೆ ಇಲ್ಲಿ ಗೋಚರಿಸದಿರದು. ದಯಾಮಯನಾದ ಪರಮಾತ್ಮ ಅನಿಷ್ಟ ಕೆಡುಕು ಕುರೂಪಗಳನ್ನು ಏಕೆ ಇರಲು ಅವಕಾಶವಿತ್ತಿದ್ದಾನೆ ? ಕೆಲವರನ್ನು ಸುಖಭೋಗಗಳಲ್ಲಿ ಮತ್ತೆ ಕೆಲವರನ್ನು ಕಷ್ಟಕಾರ್ಪಣ್ಯದ ಕಡುಬಡತನದಲ್ಲಿ ಏಕೆ ಇಟ್ಟಿದ್ದಾನೆ ? ಶ್ರೀ ರಾಮಕೃಷ್ಣರ ದೃಷ್ಟಿಯಲ್ಲಿ ಈ ಪ್ರಶ್ನೆಗಳು ವ್ಯಕ್ತಿಗೆ ಸಂಬಂಧಿಸಿದವೇ ಹೊರತು ದೇವರನ್ನು ಕಿಂಚಿತ್ತೂ ಮುಟ್ಟುವುದಿಲ್ಲ. ದಯಾ

ಮಯನಾದ ದೇವರು ಸೂರ್ಯನಂತೆ ಸರಿಸಮಾನವಾಗಿ ಎಲ್ಲರಿಗೂ ಒಂದೇ ಪ್ರಕಾಶ ವನ್ನು ನೀಡುತ್ತಾನೆ. ಅವನ ದೀಪದ ಬೆಳಕನ್ನು ಒಬ್ಬ ಭಗವಂತನನ್ನು ಕುರಿತ ಧರ್ಮ ಗ್ರಂಥವನ್ನು ಅಧ್ಯಯನ ಮಾಡಲು ಉಪಯೋಗಿಸಿಕೊಳ್ಳಬಹುದು, ಇಲ್ಲವೇ ಬ್ಯಾಂಕಿನ ಚೆಕ್ ಒಂದನ್ನು ಫೋರ್ಜರಿ ಮಾಡಲು ಉಪಯೋಗಿಸಿಕೊಳ್ಳಬಹುದು : ಯಾವುದನ್ನು ಮಾಡಬೇಕೆಂಬುದು ವ್ಯಕ್ತಿಗೇ ಬಿಟ್ಟಿದ್ದು. ಅವನು ಎರಡನೆಯದನ್ನು ಆರಿಸಿಕೊಂಡರೆ ಅದಕ್ಕೆ ಅವನೇ ಹೊಣೆ, ಭಗವಂತನಲ್ಲ, ಎಂದು ಶ್ರೀ ರಾಮಕೃಷ್ಣರು ಅಭಿಪ್ರಾಯ ಪಡುತ್ತಾರೆ.

೧೩

ಶ್ರೀ ರಾಮಕೃಷ್ಣರ ಪ್ರಕಾರ ಜಗತ್ತು ಅಂತಿಮಾರ್ಥದಲ್ಲಿ ಮಿಥ್ಯೆ. ಬ್ರಹ್ಮ ವೊಂದೆ ವಸ್ತು, ಉಳಿದುದೆಲ್ಲ ಅವಸ್ತು. ಆದರೆ ವ್ಯವಹಾರ ದೃಷ್ಟಿಯಿಂದ ಅದು ಸತ್ಯ. ಸಂಸಾರಜಗತ್ತಿನಲ್ಲಿದ್ದು ಎಲ್ಲ ಕೆಲಸ-ಕಾರ್ಯಗಳನ್ನು ಮಾಡುತ್ತಿದ್ದರೂ ಜೀವಾತ್ಮ (ಮಾನವ)ನ ಮನಸ್ಸೆಲ್ಲಾ ಭಗವಂತನ ಮೇಲಿರಬೇಕೆಂದು ಉಪದೇಶಿಸುತ್ತಾರೆ : "ಆಮೆ ನೀರಿನಲ್ಲಿ ಈಜಾಡುತ್ತಿರುತ್ತದೆ. ಆದರೆ ಅದರ ಮನಸ್ಸೆಲ್ಲಿದೆ ಗೊತ್ತೆ ನಿನಗೆ ? ತನ್ನ ಮೊಟ್ಟೆಗಳಿರುವ ದಡದಲ್ಲಿ. ಸಂಸಾರದಲ್ಲಿ ಎಲ್ಲ ಕೆಲಸಕಾರ್ಯಗಳನ್ನು ಮಾಡು, ಆದರೆ ಮನಸ್ಸನ್ನು ಮಾತ್ರ ಭಗನಂತನಲ್ಲಿ ನೆಡು."34

ಸಂಸಾರವನ್ನು ಶ್ರೀ ರಾಮಕೃಷ್ಣರು ಹಲಸಿನ ಹಣ್ಣಿಗೆ ಹೋಲಿಸುತ್ತಾರೆ. ಹಲಸಿನ ತೊಳೆ ತಿನ್ನಲು ಸಿಹಿಯಾಗಿದ್ದರೂ ಅದನ್ನು ತೊಗಟೆಯಿಂದ ಬಿಡಿಸುವುದು ತ್ರಾಸ ದಾಯಕ. ಅದು ಅಂಟಿನಲ್ಲಿ ಸೆರೆಯಾಗಿರುತ್ತದೆ. ಸಂಸಾರವೇ ಸಂಕೀರ್ಣತೆಯೆಂಬ ಜಂಜಾಟದ ಅಂಟು. ಆ ಅಂಟಿನಲ್ಲಿದ್ದೂ ಅದಕ್ಕೆ ಅಂಟದಂತೆ ಇರುವುದು ಹೇಗೆ ? ಭಗವದ್ಭಕ್ತಿಯನ್ನು ಮೈಗೂಡಿಸಿಕೊಂಡು ಬಾಳುವುದರಿಂದ ಎಂದು ಶ್ರೀ ರಾಮಕೃಷ್ಣರು ಮನೋಜ್ಞವಾಗಿ ಉಪದೇಶಿಸುತ್ತಾರೆ : "ಮೊದಲು ಕೈಗೆ ಎಣ್ಣೆ ಸವರಿಕೊಂಡು ಬಳಿಕ ಹಳಸಿನ ಹಣ್ಣು ಬಿಡಿಸಬೇಕು. ಇಲ್ಲದಿದ್ದರೆ ಕೈಗೆ ಅಂಟು ಹತ್ತಿಕೊಂಡು ಬಿಡುತ್ತದೆ. ಭಗವದ್ಭಕ್ತಿಯೆಂಬ ಎಣ್ಣೆಯನ್ನು ಮೊದಲು ಹವಣಿಸಿಕೊಂಡು ಬಳಿಕ ಸಾಂಸಾರಿಕ ಕೆಲಸ ಕಾರ್ಯಗಳಲ್ಲಿ ಕೈ ಇಡಬೇಕು."35

"ನಾವೆಯು ನೀರಿನಲ್ಲಿರಬಹುದು. ಆದರೆ ನೀರು ನಾವೆಯಲ್ಲಿ ಬರಕೂಡದು. ಸಾಧಕನು ಈ ಜಗತ್ತಿನಲ್ಲಿರಬಹುದು, ಆದರೆ ಈ ಜಗತ್ತು ಆತನಲ್ಲಿರಕೂಡದು."36

ದೇವರು ಸರ್ವವ್ಯಾಪ್ಯನಾಗಿದ್ದರೂ ಮಾಯೆ ಎಂಬ ತೆರೆ ಅವನನ್ನು ಮುಚ್ಚಿರುವು ದರಿಂದ ಜೀವಾತ್ಮ ಪರಮಾತ್ಮನನ್ನು ಅರಿಯದೆ ತನ್ನ ಗಾಢಾಂಧಕಾರದಲ್ಲಿ ಮುಳುಗಿರು ತ್ತಾನೆ. "ಮಾಯೆಯ ಪರದೆಯೇ ದೇವರನ್ನು ನಮ್ಮ ದೃಷ್ಟಿಯಿಂದ ಮರೆಮಾಡಿರು ತ್ತದೆ. ಈ ಪರದೆಯನ್ನು ಸರಿಸದಿರುವವರೆಗೆ ಪರಮಾತ್ಮನ ದರ್ಶನವಾಗುವುದಿಲ್ಲ."37

"ಮಾಯೆಯಲ್ಲಿ ಎರಡು ವಿಧ. ವಿದ್ಯಾಮಾಯೆ, ಅವಿದ್ಯಾ ಮಾಯೆ,

ಭಗವಂತನನ್ನು ಮರೆಯುವಂತೆ ಮಾಡಿ ಸಂಸಾರದಲ್ಲೇ ಮುಳುಗಿಸಿಬಿಡುತ್ತದೆ. ಆದರೆ ವಿದ್ಯಾಮಾಯೆ—ದಾನ, ಭಕ್ತಿ ಸಾಧುಸಂಗ—ಭಗವಂತನ ಕಡೆಗೆ ಕೊಂಡೊಯ್ಯುತ್ತದೆ."38

ಹೀಗೆ ಅವಿದ್ಯಾಮಾಯೆ ಜೀವಾತ್ಮನನ್ನು ಸಂಪತ್ತು ವೈಭವ, ಕೀರ್ತಿ ಇತ್ಯಾದಿಗಳಿಂದ ಪೀಡಿಸುವಂತೆ ಮಾಡಿದರೆ, ವಿದ್ಯಾಮಾಯೆ ಜೀವಾತ್ಮ ಬಂಧನದಿಂದ ಹೊರ ಬರಲು ಸಹಾಯ ಮಾಡುತ್ತದೆ.'

೧೪

ಶ್ರೀ ರಾಮಕೃಷ್ಣರ ಪ್ರಕಾರ ಜೀವಾತ್ಮ ಸಾರದಲ್ಲಿ ಬ್ರಹ್ಮವೇ ಆಗಿದೆ. ಬ್ರಹ್ಮವೇ ಹಾವಾಗಿ ಕಚ್ಚುತ್ತಾನೆ, ಔಷಧವಾಗಿ ವಾಸಿಮಾಡುತ್ತಾನೆ. ಅವನಿಗೆ ಸೃಷ್ಟಿ ಒಂದು ಲೀಲೆ. ಆ ಲೀಲೆಯಲ್ಲಿ ತಾನೇ ಬಂಧಿಯಾಗಿರುವಂತೆ ತೋರುತ್ತಾನೆ.

"ಪಾಶಮುಕ್ತನೆ ಶಿವ, ಪಾಶ ಬದ್ಧನೆ ಜೀವ"39

ಜೀವಾತ್ಮ ವ್ಯವಹಾರದ ದೃಷ್ಟಿಯಿಂದ ಅನೇಕ. ಅವರನ್ನು ಶ್ರೀ ರಾಮಕೃಷ್ಣರು ನಾಲ್ಕು ಭಾಗಗಳಾಗಿ ವಿಂಗಡಿಸುತ್ತಾರೆ. (i) ನಿತ್ಯ ಜೀವ, (ii) ಮುಕ್ತ ಜೀವ, (iii) ಮುಮುಕ್ಷು ಜೀವ ಮತ್ತು (iv) ಬದ್ಧ ಜೀವ.

ನಿತ್ಯ ಜೀವರು ಎಂದಿಗೂ ಸಂಸಾರದ ಬಲೆಯಲ್ಲಿ ಬೀಳುವುದಿಲ್ಲ. ಇವರು ತಾವು ಮುಕ್ತರಾಗಿರುವುದಲ್ಲದೆ ಪರರೂ ಮುಕ್ತರಾಗಲು ನೆರವಾಗುತ್ತಾರೆ. ಉದಾಹರಣೆಗೆ, ನಾರದ, ಶುಕದೇವ ಇತ್ಯಾದಿ.

ಮುಕ್ತಜೀವರು ಕೆಲವು ಸಮಯ ಸಂಸಾರದಲ್ಲಿದ್ದು ಜ್ಞಾನ ಭಕ್ತಿ ವಿವೇಕ ವೈರಾಗ್ಯಗಳ ಮೂಲಕ ಅದರ ಬಲೆಯಿಂದ ಹೊರಬಂದು ಅನಂತರ ಇತರರೂ ಹೊರ ಬರಲು ನಿಷ್ಠಾವಂತ ಪ್ರಯತ್ನ ಮಾಡುತ್ತಾರೆ.

ಮುಮುಕ್ಷು ಜೀವಿಗಳು ಸಂಸಾರದಲ್ಲಿದ್ದು ಅದರಿಂದ ಹೊರಬರಲು ಅತ್ಯಂತ ವ್ಯಾಕುಲ ಹೃದಯದಿಂದ ಬಹಳವಾಗಿ ಪ್ರಯತ್ನ ಮಾಡುತ್ತಾರೆ. ಮತ್ತು ಈ ಪ್ರಯತ್ನದಲ್ಲಿ ಕೆಲವು ಜೀವಿಗಳು ಜಯಶೀಲರಾಗುತ್ತಾರೆ.

ಬದ್ಧ ಜೀವಿಗಳು ಸಂಸಾರ ಜೀವಿಗಳು. ಸಂಸಾರದ ಬಲೆಗೆ ಸಿಕ್ಕಿಕೊಂಡಿದ್ದರೂ ತಾವು ಹಾಗೆ ಸಿಕ್ಕಿಹಾಕಿಕೊಂಡು ಬಿಟ್ಟಿದ್ದೇವೆಂಬ ಅರಿವೇ ಅವಕ್ಕಿಲ್ಲ : ಅವರನ್ನು ರೇಷ್ಮೆ ಹುಳುವಿಗೆ ಹೋಲಿಸಬಹುದು. ಅದು ಇಚ್ಛೆ ಪಟ್ಟರೆ ತನ್ನ ಗೂಡನ್ನು ಕತ್ತರಿಸಿ ಹೊರಕ್ಕೆ ಬರಬಲ್ಲುದು. ಆದರೆ ಬಹಳ ಪ್ರಯಾಸಪಟ್ಟು ತಾನೇ ಗೂಡನ್ನು ಕಟ್ಟಿರುವುದರಿಂದ ಅದು ಹಾಗೆ ಮಾಡಲಿಚ್ಛಿಸದು, ಅದು ಅಲ್ಲೇ ಸಾಯುತ್ತದೆ."39(a) ದೇವರನ್ನು ಸಾಯುವಾಗ ನೆನೆದರಾಯಿತು, ಈಗಲೇ ಏಕೆ ? ಎಂಬುದು ಅವರ ಅಭಿಮತ. ಭಗವಂತನ ಚಿಂತನೆಯಲ್ಲಿ ಸದಾ ಮುಳುಗಿರುವವರನ್ನು ಈ ಬದ್ಧ ಸಂಸಾರಿಗಳು 'ಹುಚ್ಚರು' ಎಂದು ಹೀಯಾಳಿಸುತ್ತಾರೆ.39(b)

೧೫

ಹೀಗೆ ಶ್ರೀ ರಾಮಕೃಷ್ಣರ ತಾತ್ತ್ವಿಕ ಚಿಂತನೆಯಲ್ಲಿ ದೇವರ ಸಗುಣ–ನಿರ್ಗುಣ, ಸಾಕಾರ-ನಿರಾಕಾರ ಸ್ವರೂಪ, ದ್ವೈತ–ಅದ್ವೈತ–ವಿಶಿಷ್ಟಾದ್ವೈತ, ಜ್ಞಾನ–ಕರ್ಮ, ಭಕ್ತಿ—ಇವುಗಳ ಉಚ್ಚ ನೀಚ ಭಾವನೆಗಳನ್ನು ಸಮನ್ವಯ ಮಾಡುವ ಅತ್ಯಂತ ಕಷ್ಟ ಕರವಾದ ಸಾಧನೆಯನ್ನು ಬಹಳ ಯಶಸ್ವಿಯಾಗಿ ಮಾಡಲಾಗಿದೆ. ಅವರ ಈ ಕೆಳಗಿನ ಉಪದೇಶಗಳು, ದ್ವೈತ ವಿಶಿಷ್ಟಾದ್ವೈತ ದರ್ಶನಗಳ ಸಾರವನ್ನು ಗ್ರಹಿಸಿ ಹೇಗೆ ಅದ್ವೈತ ದೊಂದಿಗೆ ಸಮನ್ವಯ ಮಾಡಿವೆ ಎಂಬುದನ್ನು ಸೂಚಿಸುತ್ತವೆ :

"ಜೀವ, ಜಗತ್ತು ಚತುರ್ವಿಂಶತಿ ತತ್ತ್ವ ಇವೆಲ್ಲಾ ಭಗವಂತನಿರುವುದರಿಂದ ಇದ್ದು ಕೊಂಡಿವೆ. ಆತನನ್ನು ಬಿಟ್ಟುಬಿಟ್ಟರೆ ಯಾವೂ ಇರವು. ಒಂದು ಎನ್ನುವ ಸಂಖ್ಯೆಯ ಪಕ್ಕದಲ್ಲಿ ಸೊನ್ನೆಗಳನ್ನು ಬರೆಯುತ್ತಾ ಹೋದರೆ, ಸಂಖ್ಯೆ ದೊಡ್ಡದಾಗುತ್ತಾ ಬರು ತ್ತದೆ. ಆದರೆ ಆ ಒಂದನ್ನು ಅಳಿಸಿಬಿಡು, ಆಗ ಸೊನ್ನೆಗಳಿಗೆ ಯಾವ ಬೆಲೆಯೂ ಇರದು."40

"ಎಲ್ಲಿಯವರೆಗೆ ಅಹಂ ಎಂಬುದು ಇರುವುದೋ ಅಲ್ಲಿಯವರೆಗೆ ಭಕ್ತನ ಹಾಗೆ ಬದುಕಿರುವುದೇ ಲೇಸು ; 'ನಾನು ಭಗವಂತ' ಅಂತ ಭಾವಿಸೋದು ಶ್ರೇಯಸ್ಕರವಾದು ದಲ್ಲ. ಅಹಂ ಇರೋದರೆಗೆ ಭಕ್ತವತ್ ಇರಬೇಕೇ ವಿನಾ ಕೃಷ್ಣವತ್, ಅಲ್ಲ."41

"ಶಾಸ್ತ್ರ, ಗ್ರಂಥ ಕೇವಲ ಇವುಗಳಿಂದ ಏನು ತಾನೆ ಸಾಧ್ಯ ? ಆತನ ಕೃಪೆ ಇದ್ದರೆ ಏನೂ ದೊರೆಯದ ಹಾಗಿಲ್ಲ."42

ಈ ಮೇಲೆ ಉಲ್ಲೇಖಿಸಿದ ಶ್ರೀ ರಾಮಕೃಷ್ಣರ ಉಪದೇಶಗಳಲ್ಲಿ ದ್ವೈತ ವೇದಾಂತದ ಸಾರ ಹಿಂಡಿ ಹಿಡಿದಿಡಲ್ಪಟ್ಟಿದೆ. ಹಾಗೆಯೇ ವಿಶಿಷ್ಟಾದ್ವೈತ ವೇದಾಂತದ ಸಾರ ಅವರ ಈ ಕೆಳಗಿನ ಉಪದೇಶಗಳಲ್ಲಿ ನಿರೂಪಿತವಾಗಿರುವುದನ್ನು ನೋಡಬಹುದು : ಬ್ರಹ್ಮ ಜೀವ–ಜಗತ್ ವಿಶಿಷ್ಟ. "ಬೇಲದ ಹಣ್ಣಿನ ಮುಖ್ಯ ಭಾಗ ಯಾವುದು ಎಂದರೆ ಜನರಿಗೆ ಅರ್ಥವಾಗುತ್ತದೆ, ಅದರ ತಿರುಳು ಮಾತ್ರವೇ ಅಂತ. 'ಆಗ ಅದರ ಬೀಜ ಮತ್ತು ಓಟೆಯನ್ನು ಗಣನೆಗೆ ತೆಗೆದುಕೊಳ್ಳದೆ ಹೋಗಬೇಕಾಗುತ್ತದೆ. ಆದರೆ ಬೇಲದ ಹಣ್ಣಿನ ತೂಕ ಕಂಡು ಹಿಡಿಯಬೇಕಾದರೆ ಬರೀ ತಿರುಳನ್ನು ತೂಗಿದರೆ, ಸಾಲದು. ತಿರುಳು, ಓಟೆ, ಬೀಜ ಎಲ್ಲವನ್ನು ಸೇರಿಸಿ ತೂಗಬೇಕಾಗುತ್ತದೆ. ತಿರುಳು ಯಾವುದ ರದೋ ಅದರವೇ ಬೀಜ ಮತ್ತು ಓಟೆ."43

"ಆದರೆ ಭಗವಂತನೇ ಆಕರ್ಷಿಸಿ ಎಳೆದುಕೊಂಡುಬಿಟ್ಟರೆ ಅದು ಬೇರೆ ವಿಷಯ. ಇದು ಯಜಮಾನ ತನ್ನ ಸೇವೆಯಲ್ಲೇ ನಿರತನಾಗಿರೋ ಸೇವಕನನ್ನು ಕರೆದು : 'ಬಾ, ಬಾ ಹತ್ತಿರ ಕುಳಿತುಕೊ. ನಾನು ಏನೋ ಅದೇ ನೀನು' ಅಂತ ಹೇಳಿದ ಹಾಗೆ"44

ವಿಶಿಷ್ಟಾದ್ವೈತ ವೇದಾಂತದ ಕೇಂದ್ರ ಬಿಂದುವಾದ ಪ್ರಪತ್ತಿಮಾರ್ಗವನ್ನು ಈ ಕೆಳಗಿನ ತಮ್ಮ ಉಪದೇಶದಲ್ಲಿ ಬಹಳ ಸ್ವಾರಸ್ಯವಾಗಿ ನೀಡಿದ್ದಾರೆ. "ಹೇ ಮಾತೆ,

ನಾನು ಯಂತ್ರ, ನೀನು ಯಂತ್ರಿ ; ನಾನು ದೇಗುಲ, ನೀನು ವಾಸವಾಗಿರುವ ದೇವಿ, ನಾನು ಒರೆ, ನೀನು ಅದರೊಳಗಿರುವ ಖಡ್ಗ ; ನಾನು ರಥ, ನೀನು ಸಾರಥಿ ; ನೀನು ಹೇಳಿದಂತೆ ನಾನು ಮಾಡುವೆನು ; ನೀನು ನುಡಿದಂತೆ ನಾನು ನುಡಿಯುವೆನು, ನನ್ನ ಒಳಗಿದ್ದುಕೊಂಡು ನೀನು ನಡೆಸಿದಂತೆ ನಾನು ನಡೆಯುವೆನು. ನಾನಿಲ್ಲ, ನಾನಿಲ್ಲ, ಆದರೆ ನೀನೆ, ನೀನೆ, ಎಲ್ಲೆಲ್ಲಿಯೂ ನೀನೇ."[45]

ಕೊನೆಯಲ್ಲಿ ಇಷ್ಟನ್ನು ಹೇಳಬಹುದು : ರಾಮಕೃಷ್ಣದರ್ಶನ ಶುಷ್ಕ ವೇದಾಂತವಲ್ಲ ; ಸ್ವಾನುಭವ. ಅದು ಸತ್ಯದ 'ಪೂರ್ಣದೃಷ್ಟಿ'ಯನ್ನು ನಿಮಗೆ ನೀಡುತ್ತದೆ. ಅದು ಸಮನ್ವಯ ವೇದಾಂತ. ಅದರಲ್ಲಿ ದ್ವೈತವಿದೆ, ವಿಶಿಷ್ಟಾದ್ವೈತವಿದೆ, ಅದ್ವೈತವಿದೆ, ಅವು ಸಾರದಲ್ಲಿ ಒಂದಕ್ಕೊಂದು ವಿರುದ್ಧವಾಗಿಲ್ಲ ; ಪರಸ್ಪರ ಪೂರಕವಾಗಿವೆ. ಅವು ಒಂದೇ ಸತ್ಯವನ್ನು ನೋಡುವ ವಿವಿಧ ದೃಷ್ಟಿಕೋನಗಳು, ರಾಮಕೃಷ್ಣದರ್ಶನದಲ್ಲಿ ಸರ್ವಧರ್ಮಗಳ ಸಾರವಿದೆ. ಶುದ್ಧ ಆಧ್ಯಾತ್ಮಿಕತೆ ಆ ದರ್ಶನದ ಉಸಿರಾಗಿದೆ.

ಅಡಿ ಟಿಪ್ಪಣಿಗಳು

1 ನೋಡಿ : Romain Rolland, *Life of Ramakrishna*, (Advaita Ashrama, Mayavati. 1954)

2 'ಮ', ಶ್ರೀ ರಾಮಕೃಷ್ಣ ವಚನ ವೇದ, ಕನ್ನಡ ಅನುವಾದ (ಪೂರ್ವಾರ್ಧ) [ಶ್ರೀ ರಾಮಕೃಷ್ಣಾಶ್ರಮ, ಮೈಸೂರು, 1956] ಪು. 155. ಇನ್ನು ಮುಂದೆ ಈ ಗ್ರಂಥವನ್ನು ಶ್ರೀ. ರಾ.ಕೃ.ವ.ವೇ ಎಂದು ಸೂಚ್ಯವಾಗಿ ಹೆಸರಿಸಿದೆ

3 ಅದೇ, ಪು. 566

4 ಶ್ರೀ.ರಾ.ಕೃವ.ವೇ (ಉತ್ತರಾರ್ಧ) [ಶ್ರೀ ರಾಮಕೃಷ್ಣ ಆಶ್ರಮ, ಮೈಸೂರು, 1954) ಪು. 44

5 ಅದೇ, ಪು. 265

6 ಶ್ರೀ.ರಾ-ಕೃ.ವೇ, ಪೂರ್ವಾರ್ಧ, . ಪು 157

7 ಶ್ರೀ.ರಾ.ಕೃ.ವ.ವೇ, ಉತ್ತರಾರ್ಧ, ಪು. 551

8 ಅದೇ, ಪು. 551

9 ಶ್ರೀ.ರಾ.ಕೃ.ವ.ವೇ, ಪೂರ್ವಾರ್ಧ, ಪು. 197

10 ಅದೇ, ಪು. 182

11 ಅದೇ, ಪುಟ 157

12 ಅದೇ, ಪುಟ 358

13 ಋಗ್ವೇದ i.164.46

14 ಛಾಂದೋಗ್ಯ vi.1.4
15 ಶ್ರೀ. ರಾ. ಕೃ. ವ. ವೇ: ಪೂರ್ವಾರ್ಧ, ಪು. 787–788
16 ಶಾಂಡಿಲ್ಯ ಭಕ್ತಿಸೂತ್ರ
17 ಶ್ರೀ. ರಾಕೃ. ವ. ವೇ. ಉತ್ತರಾರ್ಧ ಪು 122
18 ಅದೇ, ಪು 125
19 ಅದೇ, ಪು 744
20 ಶ್ರೀ. ರಾ. ಕೃ. ವ. ವೇ, ಪೂರ್ವಾರ್ಧ, ಪು 608–609
21 ಶ್ರೀ. ರಾ. ಕೃ. ವ. ವೇ, ಉತ್ತರಾರ್ಧ, ಪು 146
22 ಅದೇ, ಪು 244
23 ಅದೇ, ಪು 565
24 ಅದೇ, ಪುಟ 7
24(a) ಅದೇ, ಪುಟ 220
25 *Teachings of Sri Ramakrishna*, (Advaita Ashrama, Calcutta, 1958) ಸಂಖ್ಯೆ 358
26 ಶ್ರೀ. ಕೃ. ವ. ವೇ, ಉತ್ತರಾರ್ಧ, ಪು 551
27 ಶ್ರೀ. ರಾ. ಕೃ. ವ. ವೇ, ಪೂರ್ವಾರ್ಧ, ಪು 186
28 ಶ್ರೀ. ರಾ. ಕೃ. ವ. ವೇ. ಉತ್ತರಾರ್ಧ, ಪು 344
29 ಅದೇ, ಪು 4
30 ಶ್ರೀ. ರಾ. ಕೃ. ವ. ವೇ. ಪೂರ್ವಾರ್ಧ, ಪು 795
ಶ್ರೀ. ರಾ. ಕೃ. ವ. ವೇ. ಉತ್ತರಾರ್ಧ, ಪು 2
31 ಶ್ರೀ. ರಾ. ಕ. ವ. ವೇ. ಪೂರ್ವಾರ್ಧ, ಪು 142
32 *Taachings of Sri Ramakrishna*, ಸಂಖ್ಯೆ 5
33 ಶ್ರೀ. ರಾ. ಕೃ. ವ. ವೇ. ಉತ್ತರಾರ್ಧ, ಪು 4
34 ಶ್ರೀ. ರಾ. ಕೃ. ವ. ವೇ ಪೂರ್ವಾರ್ಧ ಪುಟ 11
35 ಅದೇ, ಪೂರ್ವಾರ್ಧಾ, ಪುಟ 11
36 *Teachings of Sri Ramakrishna*, ಸಂಖ್ಯೆ 415
37 ಅದೇ, ಸಂಖ್ಯೆ 30
38 ಶ್ರೀ. ರಾ. ಕ. ವ. ವೇ. ಪೂರ್ವಾರ್ಧ, ಪು 968
39 ಅದೇ, ಉತ್ತರಾರ್ಧ, ಪು 312
39(a) ಅದೇ, ಪೂರ್ವಾರ್ಧ, ಪು 151
39(b) ಅದೇ, ಉತ್ತರಾರ್ಧ, ಪು 159–160
40 ಅದೇ, ಪೂರ್ವಾರ್ಧ ಪು 198

41 ಅದೇ, ಉತ್ತರಾರ್ಧ, ಪು 150

42 ಅದೇ, ಪು 146

43 ಅದೇ, ಪು 206

44 ಅದೇ, ಪು 550

45 *Teachings of Sri Ramakrishna*, ಸಂಖ್ಯೆ 70

ಎಸ್. ಎಸ್. ರಾಘವಾಚಾರ್

ಚಿಂತನ-೧೧

ಭಗವಾನ್ ಬುದ್ಧ

ಭಗವಾನ್ ಬುದ್ಧದೇವನು ಮಾನವ ಸಂಸ್ಕೃತಿಯ ಉಜ್ಜೀವನಕ್ಕಾಗಿ ಭರತ ಖಂಡಕ್ಕೆ ದೈವದತ್ತವಾಗಿ ಬಂದ ದಿವ್ಯ ಜ್ಯೋತಿ. ಸೌಕರ್ಯ ಪರಿಪೂರ್ಣವಾದ ರಾಜಮನೆತನದಲ್ಲಿ ಹುಟ್ಟಿ ಬೆಳೆದರೂ ತತ್ವಾನ್ವೇಷಣೆಯ ಉಜ್ವಲ ಅಕಾಂಕ್ಷೆಯಿಂದ ಸರ್ವಸಂಗ ಪರಿತ್ಯಾಗ ಮಾಡಿ ಕಠಿಣ ತಪಸ್ವಿ ಸಂಶೋಧನೆಯನ್ನು ನಡೆಸಿ ಸತ್ಯಸಾಕ್ಷಾತ್ಕಾರವನ್ನು ಮಾಡಿಕೊಂಡ ಮಹಾಪುರುಷ. ಆ ಸಾಕ್ಷಾತ್ಕಾರದ ಉನ್ನತ ಫಲವನ್ನೂ ಆ ಜ್ಞಾನ ಮತ್ತು ಅದರಿಂದ ಬರುವ ಶಾಂತಿಯನ್ನೂ, ತಾನೇ ಪ್ರತ್ಯೇಕವಾಗಿ ಅನುಭವಿಸುವ ಸ್ವಾರ್ಥವನ್ನು ತ್ಯಾಗಮಾಡಿ ಲೋಕದ ಉದ್ಧಾರಕ್ಕೆ ತನ್ನ ದೀರ್ಘ ಜೀವನವನ್ನು ದಕ್ಷತೆಯಿಂದ ಮೀಸಲು ಮಾಡಿದ ಧರ್ಮಚಕ್ರ ಪರಿವರ್ತಕ.

ಬುದ್ಧನು ಸ್ಥಾಪಿಸಿ, ಘೋಷಿಸಿದ ಮಹಾಪಂಥದಲ್ಲಿ ಪ್ರಾಣಿವರ್ಗವೆಲ್ಲಾ ಒಂದು. ಅದರಲ್ಲಿ ಸ್ವಕೀಯ–ಪರಕೀಯ, ಸ್ವವರ್ಣ–ಅನ್ಯವರ್ಣ, ಸ್ವದೇಶ–ಪರದೇಶ, ಮೇಲು–ಕೀಳು, ಎಂಬ ವಿಭಾಗಗಳಿಗೆ ಸ್ವಲ್ಪವೂ ಅವಕಾಶವಿಲ್ಲ. ಬೌದ್ಧ ಧರ್ಮವು ಪ್ರತಿಬಂಧಕ ಯಾವುದೂ ಇಲ್ಲದೆ ಜೀವರಾಶಿಯ ಅಖಂಡತೆಯ ನಿಸ್ಸಂಶಯ ಪ್ರತಿಪಾದನೆಯು ವಿಶ್ವಧರ್ಮವಾಗುವುದಕ್ಕೆ ಬೃಹತ್ ದ್ವಾರವನ್ನು ತೆಗೆಯಿತು. ಅದರಲ್ಲಿ ಸಾಂಪ್ರದಾಯಿಕ, ಶ್ರದ್ಧಾಪೋಷಿತ ಅಂಧ ಭಾವನೆಗಳಿಗೆ ಅವಕಾಶವಿಲ್ಲವಂತೆ, ಕೇವಲ ವಿಚಾರ ಮಾರ್ಗ ಪ್ರಚಲಿತವಾಯಿತು. ಈ ವಿಚಾರದಲ್ಲೂ ಜೀವನಕ್ಕೆ ನಿರುಪಯೋಗವಾದ ಮತ್ತು ಪರ್ಯವಸಾನವಿಲ್ಲದ ಶುಷ್ಕ ತರ್ಕ ಮತ್ತು ಕಲ್ಪನೆಗಳಿಗೆ ಸ್ಥಾನವಿಲ್ಲ. ಪ್ರಯೋಜನಕಾರಿ ಮತ್ತು ಯುಕ್ತಿಯುಕ್ತ ಧರ್ಮಸ್ವರೂಪವು ಬುದ್ಧನಿಂದ ನಿರೂಪಿತವಾಯಿತು. ವಿಚಾರ ಬಾಹಿರ ಆಚಾರ ಪಾರಲೌಕಿಕ ಪುರಾಣಗಳು ತ್ಯಜಿಸಲ್ಪಟ್ಟವು. ವಿಶ್ವವ್ಯಾಪಿ, ವಿಚಾರ ಪ್ರಕಾಶಿತ, ಜೀವನದ ನಿಕಟ ಸಂಕಟಗಳ ಪರಿಹಾರ ರೂಪವಾದ ಮಹಾ ಮಾರ್ಗವು ಬುದ್ಧನಿಂದ ಪ್ರಚಾರಿತವಾಯಿತು.

ಈ ಉಪದೇಶದ ಸಾರವನ್ನು ಬುದ್ಧನು ತನ್ನ ಜೀವನವೆಲ್ಲಾ ದೇಶಾಟನೆ ಮಾಡಿ ಹರಡಿದನು. ಬಹಳ ಸಮರ್ಥ ಅನುಯಾಯಿಗಳನ್ನು ಸಂಘಟಿಸಿ ತ್ಯಾಗಶೀಲ ಉಪದೇಶಕ

ಸಂಘವನ್ನು ನಿರ್ಮಾಣ ಮಾಡಿದನು. ತನ್ನ ಮೊದಲನೆಯ ಸಂದೇಶದಲ್ಲಿ ಖಚಿತವಾಗಿ ಧರ್ಮತತ್ತ್ವಗಳನ್ನು ನಿರೂಪಿಸಿದನು.

ನಮ್ಮ ಜೀವನವು ಮಧ್ಯಮ ಮಾರ್ಗವನ್ನು ಅವಲಂಬಿಸಬೇಕು. ಯಥೇಚ್ಛವಾದ ಭೋಗಜೀವನವು ಹಾನಿಕರ. ಹಾಗೆಯೇ ತೀವ್ರ ದೇಹ ದಂಡನೆಯೂ ದೌರ್ಬಲ್ಯಕಾರಕವಾಗಿ ಧಾರ್ಮಿಕ ಸಾಧನೆಗೆ ಸಹಾಯವಾಗಲಾರದು. ಈ ಮಧ್ಯಮ ಮಾರ್ಗವನ್ನು ಸ್ವಂತ ಪ್ರಯೋಗದಿಂದಲೆ ಬುದ್ಧನು ಕಂಡುಹಿಡಿದನು.

ಬೋಧನೆಯನ್ನೆಲ್ಲಾ 'ಆರ್ಯ ಸತ್ಯಚತುಷ್ಟಯ' ವೆಂಬ ಚೌಕಟ್ಟಿನಲ್ಲಿ ಪ್ರತಿಪಾದನೆ ಮಾಡಲಾಗಿದೆ. ಜೀವನ ದುಃಖಮಯ. ಈ ಸ್ಥಿತಿ ಕಾರಣರಹಿತವಾಗಿಲ್ಲ. ಮನುಷ್ಯನ ಅಜ್ಞಾನ ಮತ್ತು ತನ್ಮೂಲಕವಾದ ಕಾಮನೆಯಿಂದ ಬಂದಿದೆ. ಇದು ನಿಷ್ಕಾರಣವೂ ಅಲ್ಲ, ಯಾವ ಅನಿಷ್ಟ ಅದೃಷ್ಟದಿಂದಲೂ ಅಲ್ಲ. ಆಗಂತುಕವಾಗಿ ಸ್ವಯಂಕೃತವಾಗಿ ಬಂದಿರುವ ಈ ದುಃಸ್ಥಿತಿಯನ್ನು ನಿವಾರಣೆ ಮಾಡಬಹುದು. ಹಾಗೆ ಮಾಡಿದರೆ ಒದಗುವ ಶಾಂತಿಗೆ ನಿರ್ವಾಣವೆಂದು ಹೆಸರು. ನಿರ್ವಾಣವು ಮರಣಾನಂತರ ಬರುವ ಶ್ರೇಯಸ್ಸಲ್ಲ. ಜೀವಂತವಾಗಿಯೇ ಸಾಧಿಸಬಹುದಾದ ಪರಮ ಪುರುಷಾರ್ಥ. ಇದನ್ನು ಸಾಧಿಸಲು ಮಾರ್ಗ, ಉಪಾಯ, ಉಂಟು. ಅದಕ್ಕೆ ಆರ್ಯ ಅಷ್ಟಾಂಗ ಮಾರ್ಗವೆಂದು ಹೆಸರು. ಇದರಲ್ಲಿ ಕಾಮಜಯ, ಅಜ್ಞಾನನಿವೃತ್ತಿ, ಸದಾಚಾರ, ಸಂಯಮ, ಅಹಿಂಸೆ, ಸತ್ಯಪರಾಯಣತೆ ಇವೆಲ್ಲಾ ಸೇರಿಕೊಂಡು ಇವು ಸಮಾಧಿಯೆಂಬ ಪೂರ್ಣ ಜ್ಞಾನೋದಯವನ್ನು ಉಂಟುಮಾಡುತ್ತವೆ. ಬೌದ್ಧ ಧರ್ಮದ ಕೇಂದ್ರ ಈ ಮಾರ್ಗೋಪದೇಶ. ಇದು ಸಮ್ಯಕ್ ಜೀವನ. ಈ ಜೀವನದ ಕಲ್ಪನೆ ಭಾರತೀಯ ಸಂಸ್ಕೃತಿಯ ಮೇಲೆ ವ್ಯಾಪಕವಾದ ಪ್ರಭಾವವನ್ನು ಬೀರಿ, ಬೇರೆಲ್ಲ ಪಂಥಗಳೂ ಇದನ್ನು ಸಮಾವೇಶಗೊಳಿಸುವಂತೆ ಮಾಡಿದೆ.

ಬುದ್ಧನ ಉಪದೇಶ ವಾಸ್ತವಿಕವಾದ ದುಃಖ ದರ್ಶನದಿಂದ ಪ್ರಾರಂಭಿಸಿ, ಅದರ ನಿವಾರಣೆಯ ಸಮಗ್ರ ಯೋಜನೆಯಲ್ಲಿ ಪರ್ಯವಸಾನ ಹೊಂದುತ್ತದೆ. ಇದು ಮಂದಪ್ರಜ್ಞೆಯ ಆಶಾವಾದವೂ ಅಲ್ಲ, ಅನಾರೋಗ್ಯಕರದ ನಿರಾಶಾವಾದವೂ ಅಲ್ಲ, ಉಚ್ಚಧ್ಯೇಯವನ್ನು ಚಿತ್ರೀಕರಿಸಿ, ಅದನ್ನು ಸಮರ್ಥವಾಗಿ ಸಾಧಿಸುವ ಪ್ರಗತಿ ಮಾರ್ಗ. ಆದುದರಿಂದಲೇ ಬುದ್ಧಂ ಶರಣಂ ಗಚ್ಛಾಮಿ–ಧರ್ಮಂ ಶರಣಂ ಗಚ್ಛಾಮಿ–ಎಂಬುವ ಮಹಾಸಂಕಲ್ಪ ಶತಮಾನ, ಶತಮಾನಗಳಿಂದ ಘೋಷಿಸುತ್ತಿರುವುದು.

ಕಾರುಣ್ಯ

ಪ್ರಪಂಚದ ಗಂಭೀರ ಸಾಹಿತ್ಯವೆಲ್ಲಾ ಕರುಣಾರಸಪ್ರಧಾನವಾಗಿದೆ. ಗ್ರೀಕರ ಮತ್ತು ಆಧುನಿಕ ಐರೋಪ್ಯರ ಭವ್ಯ ನಾಟಕಗಳೆಲ್ಲಾ ಕಾರುಣ್ಯದಲ್ಲಿ ಜೀವನದಲ್ಲಿ ವ್ಯಾಪಿಸಿರುವ ದುಃಖದ ದರ್ಶನದಲ್ಲಿ ಪರ್ಯವಸಾನ ಹೊಂದುವಂತಿದೆ. ಆಳವಾಗಿ ಬದುಕನ್ನು ವಿಮರ್ಶಿಸಿದಷ್ಟೂ ಅದರಲ್ಲಿ ಪ್ರಧಾನವಾಗಿ ನೆಲೆಸಿರುವ ದುಃಖಾಂಶ ಸ್ಫುಟ

ವಾಗುತ್ತದೆ. ವಿನೋದದ ಅಮಲು ಇದನ್ನು ಮರೆಯಲು ಹೂಡಿರುವ ಕೃತಕ, ತಾತ್ಕಾಲಿಕ ಉಪಶಮನವೆಂದು ಭಾಸವಾಗುತ್ತದೆ. ರಾಮಾಯಣದ ಮೂಲ ರಸ ಕರುಣವೆನ್ನುವುದು ವಿಮರ್ಶಕಸಾಹಿತ್ಯದಲ್ಲಿ ಪ್ರಸಿದ್ಧವಾಗಿದೆ. ಅದರಲ್ಲಿ ಶೋಕವೇ ಶ್ಲೋಕವಾಗಿ ಬಂದಿದೆ. ಇದನ್ನು ಮಹಾಕವಿ ಭವಭೂತಿ ಸ್ಪಷ್ಟಪಡಿಸುತ್ತಾನೆ. ಭಗವಾನ್ ಬುದ್ಧನು ಉಪದೇಶಿಸಿದ ಪ್ರಥಮ 'ಆರ್ಯಸತ್ಯ' ದುಃಖ ದರ್ಶನ. ಕ್ರಿಸ್ತ ಧರ್ಮವನ್ನು Sanctuary of Sorrow ದುಃಖಗಳ ದೇಗುಲವೆಂದು ವರ್ಣಿಸ ಲಾಗಿದೆ.

ದುಃಖದ ಅಸ್ತಿತ್ವ ನಿಶ್ಚಿತವಾದಾಗ, ಮೂರು ವಿಧದ ಪ್ರತಿಕ್ರಿಯೆ ಸಾಧ್ಯ. ಅದು ತನ್ನನ್ನು ಸ್ಪರ್ಶಿಸುವುದಿಲ್ಲವೆಂದು ತಿಳಿದು ಅದನ್ನು ಉಪೇಕ್ಷಿಸಿ ಔದಾಸೀನ್ಯದಿಂದ ಇರ ಬಹುದು. ಅದರಿಂದ ಇತರರು ಮಾತ್ರ ಆಕ್ರಮಿತರಾಗಿರುವರೆಂದು ಹರ್ಷವನ್ನೇ ಅವಲಂಬಿಸಬಹುದು. ಶಕ್ತಿ ಇದ್ದರೆ ಅದನ್ನು ಉಂಟುಮಾಡಲು ಅಥವಾ ವೃದ್ಧಿಪಡಿಸಲು ಯತ್ನಿಸಬಹುದು. ಇಂತಹ ಚಿತ್ತವೃತ್ತಿ ಅಸಾಮಾನ್ಯವಲ್ಲ. ಮೂರನೆಯ ಪ್ರತಿಕ್ರಿಯೆ ಉದಾತ್ತಪ್ರಕೃತಿಯವರಿಗೆ ಉಂಟಾಗುತ್ತದೆ. ಅವರು ಪರದುಃಖದಿಂದ ದುಃಖಿಸುತ್ತಾರೆ. ಶ್ರೀ ರಾಮ 'ವ್ಯಸನೇಷು ಮನುಷ್ಯಾಣಾಂ ಭೃಶಂ ಭವತಿ ದುಃಖಿತಃ' ಎಂದು ವರ್ಣಿತ ನಾಗಿದ್ದಾನೆ. ಇದೀಗ ಕಾರುಣ್ಯ.

ಎಲ್ಲ ಧರ್ಮಬೋಧಕರೂ ಕಾರುಣ್ಯವನ್ನು ಮೂಲಭೂತ ಧರ್ಮವೆಂದು ಉಪ ದೇಶಿಸುತ್ತಾರೆ. ದುಃಖಕ್ಕೆ ಕಾರಣವೇನಿದ್ದರೂ ದುಃಖಿಗಳ ವಿಷಯದಲ್ಲಿ ಅನುಕಂಪನೆಗೆ ಚ್ಯುತಿ ಇರಬಾರದು. ಒಬ್ಬ ಮಹಾತ್ಮ ಹೀಗೆನ್ನುತ್ತಾನೆ. "ದುಃಖಿಯನ್ನು ನೋಡಿದಾಗ ಅವನ ಕರ್ಮದಿಂದ ಈ ಸ್ಥಿತಿಯನ್ನು ತಂದುಕೊಂಡಿದ್ದಾನೆಂದು ನಿರ್ಲಿಪ್ತನಾದವನು ಆಸ್ತಿಕನೇ ಅಲ್ಲ. ಅದು ಯಾವ ಕಾರಣದಿಂದ ಬಂದಿರಲಿ, ಅದರ ನಿವಾರಣೆಯಲ್ಲಿ ಯಾವನು ಒಡನೆಯೇ ತೊಡಗುತ್ತಾನೆಯೋ ಅವನು ನಿಜವಾದ ಆಸ್ತಿಕ. ಭಗವಂತನ ಗುಣಗಳಲ್ಲಿ ಇದು ಮೂಲ ಗುಣವೆಂದು ಮತ್ತೊಬ್ಬರು ಹೇಳುತ್ತಾ, 'ಅವನು ಸರ್ವಜ್ಞನಾಗಿರ ಬಹುದು, ಸರ್ವಶಕ್ತನಾಗಿರಬಹುದು' ಅವನಿಗೆ ಕಾರುಣ್ಯವಿಲ್ಲದಿದ್ದರೆ ಆ ಎಲ್ಲ ಮಹತ್ವವೂ ಘೋರವಾದ ಅನಿಷ್ಟವೇ ಆಗುತ್ತಿತ್ತು' ಎನ್ನುತ್ತಾರೆ.

ಔದಾಸೀನ್ಯವೂ ಹರ್ಷವೂ ಇಲ್ಲದೆ ಪರರ ಸಂಕಟ ನೋಡಿದಾಗ ತಾನೂ ಸಂಕಟ ಪಡುವುದು ಕಾರುಣ್ಯವೆಂದರೆ ಸಾಲದಂತೆ ಕಾಣುತ್ತದೆ. ಕಾರುಣ್ಯದ ಅರ್ಥವಿಶ್ಲೇಷಣೆ ಇನ್ನೂ ಮುಂದೆ ಹೋಗಬೇಕೆನ್ನಿಸುತ್ತದೆ. ಕಾರುಣ್ಯ ಸ್ವಾರ್ಥರಹಿತವಾಗಿರಬೇಕು. ಕರುಣಾಜನಕ ಸ್ಥಿತಿಯು ಪೋಷಕನ ಜೀವಿತದಲ್ಲಿ ಯಾವ ಧಕ್ಕೆಯನ್ನೂ ತಂದಿರಬಾರದು. ಆಗ ಇದು ನಿಷ್ಕಲಂಕ ಕಾರುಣ್ಯ. ಹೀಗೆ ಪರ ದುಃಖದಲ್ಲಿ ತಾನೂ ಸ್ವಾರ್ಥಸ್ಪರ್ಶವಿಲ್ಲದೆ ದುಃಖಿಯಾದರೆ, ಅನುಕಂಪೆಯಲ್ಲಿ ಮಗ್ನನಾದರೆ ಸಾಕೇ? ಆ ದುಃಖದ ಪರಿಹಾರಕ್ಕೆ ಸಾಧ್ಯವಾದ ಎಲ್ಲ ಪ್ರಯತ್ನವನ್ನೂ ಮಾಡಲು ಹೋರಾಡಲು ಅವನು ಸಿದ್ಧನಾಗಿರ ಬೇಡವೇ? ಇದು ಸಕ್ರಿಯ ಕಾರುಣ್ಯ. ನಿಷ್ಕ್ರಿಯ ಕಾರುಣ್ಯ ಸತ್ಯವಾಗಿರಬಹುದು, ಆದರೆ

ಅದು ಪ್ರಕೃತ ಕ್ಲೇಶವನ್ನು ಶಮನ ಮಾಡಲಾರದು. ದುಃಖಿಗೆ ಅದರಿಂದ ಯಾವ ಪರಿಹಾರವೂ ಸಿಕ್ಕುತ್ತಿಲ್ಲ. ಅವನು ಇತರರು ತನ್ನೊಡನೆ ಗೋಳಿಡುವುದನ್ನು ನೋಡಿ, ಅದು ಅಪರಿಹಾರ್ಯವೆಂದು ತಿಳಿದು ಇನ್ನೂ ಹೆಚ್ಚಾಗಿ ದುಃಖಿಯಾಗಬಹುದು. ಅದು ಸಕ್ರಿಯ ವಾದರೆ, ಕರುಣೆಯು ತನ್ನ ಸತ್ಯವನ್ನೆಲ್ಲಾ ಅದರ ನಿವಾರಣೆಗೆ ಬಳಸಿಕೊಂಡು ನಿರ್ವಂಚನೆ ಯಿಂದ ಉದ್ಯೋಗಶೀಲನಾದರೆ ಅದು ಪೂರ್ಣವಾದ ಕಾರುಣ್ಯ. ಎಲ್ಲ ಮಹಾತ್ಮರ ಜೀವನದಲ್ಲೂ ಇಂತಹ, ಕ್ರಿಯಾತ್ಮಕ ಕಾರುಣ್ಯವನ್ನು ನೋಡಬಹುದು ಅದು ಕೇವಲ ಸಹಾನುಭೂತಿಯ ಕಣ್ಣೀರಲ್ಲ. ಕಣ್ಣೀರನ್ನು ತೊಡೆಯಲು ಮಾಡುವ ಉದ್ವಿಗ್ನ ಪ್ರವೃತ್ತಿ. ತನ್ಮುಖವಾದ ಕೃತಿ ಸಾಲದಿರಬಹುದು. ಆದರೆ ಕರುಣೆಯ ಸರ್ವ ಶಕ್ತಿಯೂ ಕೃತಿಯಲ್ಲಿ ಸಮಾವೇಶವಾಗಬೇಕು. ಅವನು ಭಾವುಕನಾಗಿದ್ದರೆ ಸಾಲದು. ಅದರಿಂದ ಅವನಿಗೂ ಕ್ಲೇಶ, ಕಾರುಣ್ಯದ ಪಾತ್ರಕ್ಕೂ ಕ್ಲೇಶ. ಕ್ರಿಯಾನಿಷ್ಠ ಕಾರುಣ್ಯ ಇಬ್ಬರಿಗೂ ಅವಸಾನದಿಂದ ಮೋಚಕವಾಗಬಹುದು.

ಕೃತಜ್ಞತೆ

ಕೃತಜ್ಞತೆ ಎನ್ನುವ ಶಬ್ದದ ಅರ್ಥ ಎಲ್ಲರಿಗೂ ಗೊತ್ತು. ಇತರರಿಂದ ನಮಗಾದ ಉಪಕಾರವನ್ನು ಸ್ಮರಿಸುವುದು ಮತ್ತು ಅವಕಾಶ ಸಿಕ್ಕಿದರೆ ಅವರಿಗೆ ಪ್ರತ್ಯುಪಕಾರ ಮಾಡುವುದು. ಶಬ್ದಾರ್ಥ ಸುಲಭವಾಗಿದ್ದರೂ, ಅದು ಹೇಳುವ ಗುಣ ಮತ್ತು ನಡೆ ಬಹಳ ದುರ್ಲಭ. ಮಾನವೀಯತೆಗೆ ಆದರ್ಶರಾದ ಮಹಾನ್ ಈಶ್ವರಚಂದ್ರ ವಿದ್ಯಾ ಸಾಗರರಿಗೆ ಅವರ ಮಿತ್ರರೊಬ್ಬರು ಒಬ್ಬ ವ್ಯಕ್ತಿ ಅವರನ್ನು ವಿಶೇಷವಾಗಿ ನಿಂದಿಸಿದನೆಂದು ಹೇಳಿದರಂತೆ. ಅದಕ್ಕೆ ವಿದ್ಯಾಸಾಗರರು ಆಶ್ಚರ್ಯಪಟ್ಟು 'ಅವನ ವರ್ತನೆಗೆ ಕಾರಣವಿಲ್ಲವಲ್ಲ, ಅವನಿಗೆ ನಾನೇನೂ ಒಳ್ಳೆಯದನ್ನು ಮಾಡಿಲ್ಲವಲ್ಲ' ಅಂದರಂತೆ. ಉಪಕಾರ ಹೊಂದಿದ ವರಿಗೆ ತಾವು ಹೀನಸ್ಥಿತಿಯಲ್ಲಿದ್ದು ಉಪಕಾರ ಮಾಡಿದವನು ಉತ್ತಮಸ್ಥಿತಿಯಲ್ಲಿ ಯಲ್ಲಿದ್ದದ್ದನ್ನು ನೆನೆದುಕೊಂಡರೇ ವಿಷಾದ, ಕ್ರೋಧ, ದ್ವೇಷ ಬರಬಹುದು. ಉಪಕರಿ ಸಿದವನು, ತನ್ನ ಸ್ವಾರ್ಥಸಾಧನೆಯ ಅಂಗವಾಗಿ ಹಾಗೆ ಮಾಡಿದ್ದರೂ, ಪ್ರಯೋಜನ ಹೊಂದಿದವನಿಗೆ ವಿಸ್ಮೃತಿ ಬರಲಾರದು. ಹೀಗಿರುವಾಗ ಈಶ್ವರಸಾಗರದಂತಹವರ ಉಪ ಕಾರಕ್ಕೆ ವಿಪರೀತ ಪ್ರತಿಕ್ರಿಯೆ ಬರುತ್ತಿದ್ದದ್ದು ಮನುಷ್ಯ ಎಷ್ಟು ಕೆಳಗಿಳಿಯಬಲ್ಲ ಎನ್ನು ವುದನ್ನು ತೋರಿಸುತ್ತದೆ. ಇದಕ್ಕೆ ವಿರುದ್ಧವಾಗಿ ಪುರಾಣಪ್ರಸಿದ್ಧ ಸುಧಾಮ ಶ್ರೀ ಕೃಷ್ಣ ತನಗೆ ಏನನ್ನೂ ಕೊಡಲಿಲ್ಲವೆಂದು ತಿಳಿದಿದ್ದಾಗ ಕೃತಜ್ಞತೆಯನ್ನು ಸಲ್ಲಿಸುತ್ತಾನೆ. ರಬೀಂದ್ರರು ನಿರಾಕರಣೆಗೆ ಕೃತಜ್ಞತೆಯನ್ನು ಹಾಡಿದ್ದಾರೆ.

ಯಾವ ವ್ಯಕ್ತಿಯೂ ತಾನು ಜೀವನದಲ್ಲಿ ಪಡೆದಿರುವ ಸಹಾಯ ಪರಂಪರೆಯನ್ನು ನೆನೆದರೆ ಕುಗ್ಗಿ ಹೋಗಬೇಕು. ತಂದೆತಾಯಿಗಳಿಂದ, ಕುಟುಂಬದ ಇತರರಿಂದ, ವಿದ್ಯಾ ಗುರುಗಳಿಂದ, ಉಪಕಾರಶೀಲ ಸಮಾಜದಿಂದ, ರಾಷ್ಟ್ರದ ಸೌಕರ್ಯದಿಂದ ಇಡೀ ಪ್ರಪಂಚ ದಿಂದ ತಮ್ಮ ಕಷ್ಟಕ್ಕೆ, ನೋವಿಗೆ ಆದ ದಯಾಳುಗಳಿಂದ, ತಮ್ಮ ಏಳಿಗೆಗೆ ಕಾರಣವಾದ

ರಿಂದ ಆದ ಉಪಕಾರಗಳ ಬೃಹದ್ರೂಪವನ್ನು ಸ್ಮರಿಸಿಕೊಂಡರೆ, ಆ ನೆನಪಿನ ಭಾರವನ್ನು ಹೊರಲೇ ಆಗುವುದಿಲ್ಲ. ನಾವು ಜೀವನದಲ್ಲಿ ಕೊಡುವುದಕ್ಕಿಂತ ಪಡೆದಿರುವುದು, ಪಡೆಯುತ್ತಿರುವುದು ಹೆಚ್ಚು. ಈ ಭಾವ ದೃಢವಾಗಿ ನಿಂತರೆ, ನಮ್ಮ ನಮ್ಮ ಪರಿಮಿತಿ ಅರ್ಥವಾಗಿ ನಮ್ರತೆ ಬರಬಹುದು ಪ್ರತ್ಯುಪಕಾರದ ಬುದ್ಧಿಯೂ ಯಾವಾಗಲಾದರೂ ಬರಬಹುದು. ಆದರೆ ನಮಗೆ ಉಪಕರಿಸಿದವರಿಗೇ ಪ್ರತ್ಯುಪಕಾರ ಮಾಡಬಹುದಾದ ಅವಕಾಶ ಇಲ್ಲ. ಅವರು ಉಪಲಬ್ಧರಿಲ್ಲದೇ ಇರಬಹುದು, ಅವರಿಗೆ ಉಪಕಾರದ ಅವಶ್ಯಕತೆ ಇಲ್ಲದಿರಬಹುದು. ಆದರೂ ಅವರಿಗೆ ನಾವು ಋಣಿಗಳು ಎಂದು ತಿಳಿದಿರುವುದು ಒಳ್ಳೆಯದು. ಇಂತಹ ಸಂದರ್ಭದಲ್ಲಿ ಕರ್ತವ್ಯ ಏನೆಂದು ವಿವೇಚಿಸಬೇಕು. ನಾವು ಹುಟ್ಟಿ ಬೆಳೆದು, ಮುಂದಕ್ಕೆ ಬಂದುದಕ್ಕೆ ಕಾರಣವಾದ ಮಾನವವರ್ಗವನ್ನೆಲ್ಲಾ ಒಂದು ಬೃಹದ್ದೇವತೆಯೆಂದು ಅನುಸಂಧಾನಮಾಡಿ, ಆ ಬೃಹದ್ದೇವತೆಯ ಕುಟುಂಬಕ್ಕೆ ಸೇರಿದ ಇತರರು ನಾವಿದ್ದ ದೀನ ಸ್ಥಿತಿಯಲ್ಲಿದ್ದರೆ, ಉಪಕಾರದ ಅವಶ್ಯಕತೆ ಇರುವವರಾಗಿದ್ದರೆ, ಅವರಿಗೆ ನಮ್ಮಿಂದಾಗುವ ಉಪಕಾರವನ್ನು ಸಲ್ಲಿಸಿ, ಅವರ ನೋವು ಮತ್ತು ಕಷ್ಟಗಳಿಗೆ ನೆರವಾದರೆ, ನಾವು ಋಣವಿಮೋಚನೆಯನ್ನು ಸಾಧಿಸಿದಂತೆ. ಸಮಾಜ ಮಾತೆಯಿಂದ ಬಂದದ್ದನ್ನು, ನಮ್ಮ ಕೈಲಾದಷ್ಟು ಅವಳಿಗೆ ಒಪ್ಪಿಸಿದರೆ—ಪೂರ್ತಿಯಾಗಿ ಎಂದೂ ಆಗುದಿಲ್ಲ—ಇದು ಸಾಧ್ಯವಾದಷ್ಟು ಕೃತಜ್ಞತೆಯೆನ್ನಬಹುದು. ಆದರೂ, ಇಷ್ಟರಲ್ಲಿ ತೃಪ್ತಿ ಹೊಂದಬಾರದು. ನಮ್ಮ ಅಲ್ಪಸಹಾಯ ಅನವಶ್ಯಕವಾಗುವಂತೆ ಇತರರ ಸಂಪತ್ತು, ಕ್ಷೇಮ ಮತ್ತು ಶಾಂತಿಯನ್ನು ಹಾರೈಸಬೇಕು. ಯಾವ ಮಾನವೀಯತೆಗೆ ತಾನು ಋಣಿಯೋ ಅದನ್ನು ತನ್ನ ಜೀವನದಲ್ಲಿ ಕ್ರಿಯಾರೂಪದಿಂದ, ಶುಭಾಕಾಂಕ್ಷೆಯ ರೂಪದಲ್ಲಿ ಅನುಷ್ಠಾನಕ್ಕೆ ತರಬೇಕು. ಈ ಮಂಗಳ ಸಂಕಲ್ಪವೇ ಧನ್ಯತೆ.

ಶ್ರೀ ರಾಮಚಂದ್ರ ವಾಲ್ಮೀಕಿ ರಾಮಾಯಣದಲ್ಲಿ ಕೊನೆಯಸಲ ಆಂಜನೇಯನನ್ನು ಬೀಳ್ಕೊಡುವಾಗ ಅವರಲ್ಲಿ ನಡೆದ ಸಂವಾದವನ್ನು ಇಲ್ಲಿ ಜ್ಞಾಪಿಸಿಕೊಳ್ಳೋಣ.

"ಏಕೈಕಸ್ಯೋಪಕಾರಸ್ಯ ಪ್ರಾಣಾನ್ ದಾಸ್ಯಾಮಿ ಹೇ ಕಪೇ ।
ಶೇಷಸ್ಯೋಪಕಾರಾಣಾಂ ಭವಾಮ ಋಣಿನೋ ವಯಂ ॥
ಮದಂಗೇ ಜೀರ್ಣತಾಂ ಯಾತು ಯತ್ವಯೋಪಕೃತಂ ಕಪೇ ।
ನರಃ ಪ್ರತ್ಯುಪಕಾರಾಣಾಂ ಆಪತ್ಸು ಆಯಾತಿ ಪಾತ್ರತಾಂ ॥

ನಿನ್ನ ಒಂದೇ ಒಂದು ಉಪಕಾರಕ್ಕೆ ನನ್ನ ಪ್ರಾಣವನ್ನೆಲ್ಲಾ ಅರ್ಪಿಸುತ್ತೇನೆ. ಮಿಕ್ಕ ಉಪಕಾರಕ್ಕೆ ನಾನೇನೂ ಕೊಡಲಾರೆ. ನಿನಗೆ ಋಣಿಯಾಗಿಯೇ ಉಳಿಯುತ್ತೇನೆ. ಇದನ್ನು ಆಶಿಸುತ್ತೇನೆ. ನನ್ನ ಪ್ರತ್ಯುಪಕಾರಕ್ಕೆ ನಿನ್ನನ್ನು ಪಾತ್ರ ಮಾಡುವ ವಿಪತ್ತು ನಿನಗೆ ಎಂದಿಗೂ ಬರದಿರಲಿ. ವಿಪತ್ತಿನಲ್ಲಲ್ಲವೇ ಪ್ರತ್ಯುಪಕಾರ ಬೇಕಾಗುವುದು.

ಹನುಮಂತನು ಪ್ರೇಮಪೂರಿತನಾಗಿ ರಾಘವನಿಗೆ ಹೀಗೆ ಹೇಳಿದನು.

ಸ್ನೇಹೊ ಮೇ ಪರಮೋ ರಾಜನ್ ತ್ವಯಿ ನಿತ್ಯಂ ಪ್ರತಿಷ್ಠಿತಃ |
ಭಕ್ತಿಶ್ಚ ನಿಯತಾ ವೀರಾ ಭಾವೋ ನಾನ್ಯತ್ರ ಗಚ್ಛತಿ ||
ಯಾವದ್ರಾಮಕಥಾ ವೀರ ಚರಿಷ್ಯತಿ ಮಹೀತಲೇ |
ತಾವತ್ ಶರೀರೇ ವತ್ಸ್ಯಂತಿ ಪ್ರಾಣಾ ಮಮ ನ ಸಂಶಯಃ ||

ನಿನ್ನಲ್ಲಿ ನನಗೆ ಪರಮ ಸ್ನೇಹವು ನಿತ್ಯವಾಗಿ ಪ್ರತಿಷ್ಠಿತವಾಗಿದೆ. ಎಲೈ ವೀರನೇ, ನಿನ್ನಲ್ಲಿ ನನ್ನ ಭಕ್ತಿಯು ಅಚಲವಾಗಿದೆ. ನನ್ನ ಭಾವವೂ ಮತ್ತೆಲ್ಲೂ ಹೋಗುವುದಿಲ್ಲ. ಎಲ್ಲಿಯವರೆಗೆ ಈ ಪ್ರಪಂಚದಲ್ಲಿ ರಾಮಕಥೆ ಉಳಿದಿರುತ್ತದೆಯೋ, ಅಲ್ಲಿಯವರೆಗೆ ಮಾತ್ರ ನನ್ನ ಪ್ರಾಣಗಳು ನನ್ನ ಶರೀರದಲ್ಲಿ ಉಳಿದಿರುತ್ತವೆ.

(ಉತ್ತರಕಾಂಡ, ಸರ್ಗ 40)

ಸುಧಾಕರರಾವ್

ಬ್ರಿಟಿಷರ ಆಳ್ವಿಕೆಯಲ್ಲಿ ಭಾರತೀಯ ಶಿಕ್ಷಣ

ಪ್ರಸ್ತುತ ಭಾರತದಲ್ಲಿರುವ ಶಿಕ್ಷಣದ ಕ್ರಮಕ್ಕೆ ಭದ್ರ ಬುನಾದಿ ರಚಿಸಿದ ಕೀರ್ತಿ ಬ್ರಿಟಿಷರದ್ದಾಗಿದೆ. ನಮ್ಮನ್ನು ಹಲವು ದಶಕಗಳ ಕಾಲ ಆಳಿದ ಬ್ರಿಟಿಷರು ಶಿಕ್ಷಣ ಕ್ಷೇತ್ರದಲ್ಲಿ ಬಹಳಷ್ಟು ಮಾರ್ಪಾಟುಗಳನ್ನು ಮಾಡಿರುತ್ತಾರೆ.

ಐರೋಪ್ಯರು ಭಾರತದತ್ತ ದೃಷ್ಟಿ ಹಾಯಿಸಿದಾಗ ಭಾರತದಲ್ಲಿ ಅನಕ್ಷರತೆಯು ತಾಂಡವವಾಡುತ್ತಿತ್ತು. ಇದನ್ನು ಕಂಡ ಅವರು ಭಾರತೀಯರನ್ನು ಮಂಕುಗೊಳಿಸಲು ಆ ಸಂದರ್ಭವನ್ನು ಉಪಯೋಗಿಸಿಕೊಂಡರು. ಮುಸಲ್ಮಾನರ ಅವಿವೇಕತನದಿಂದ ಭಾರತದ ಸ್ಥಿತಿ ಅಧೋಗತಿಗಿಳಿದಾಗ ಬ್ರಿಟಿಷ್ ಜನತೆ ಎಲ್ಲಾ ಕಡೆಗಳಲ್ಲಿ ಎಲ್ಲಾ ರೀತಿಯಿಂದ ಭಾರತದ ಮೇಲೆ ಒತ್ತಡವನ್ನು ಹೇರಲಾರಂಭಿಸಿತು. ಭಾರತದ "ಸಮೃದ್ಧಿ"ಯನ್ನು ತಮ್ಮದಾಗಿಸಿಕೊಳ್ಳಬೇಕಾದರೆ, ಭಾರತೀಯರಿಗೂ ಪ್ರಾಥಮಿಕ ವಿದ್ಯಾಭ್ಯಾಸ ಅನಿವಾರ್ಯವೆಂದು ತಿಳಿದುಕೊಂಡ ಅವರು—ಆ ಅಗತ್ಯದ ಸೀಮಾರೇಖೆಯೊಳಗೆ ಇರುವಂತೆ—ಭಾರತೀಯರಿಗೆ ವಿದ್ಯೆ ನೀಡಿದರು. ಶಿಕ್ಷಣ ನೀಡಿಕೆಯಲ್ಲೂ ಸ್ವಾರ್ಥತೆಯನ್ನು ಸಾಧಿಸಿದರೂ, ಭಾರತದಲ್ಲಿ ಪಾಶ್ಚಿಮಾತ್ಯ ಮಾದರಿಯ ಶಿಕ್ಷಣ ಕ್ರಮವನ್ನು ಪರಿಚಯಿಸಿ ಹೊಸಕ್ರಾಂತಿಯನ್ನು ಉಂಟುಮಾಡಿದ ಬ್ರಿಟಿಷರು ಸ್ತುತ್ಯರು.

ಬ್ರಿಟಿಷರ ಆಗಮನದ ಮೊದಲಿನ ಕೆಲವು ಶತಮಾನದಲ್ಲಾದ ಪ್ರಗತಿಗಿಂತ ಬ್ರಿಟಿಷರ ಪದಾರ್ಪಣೆಯ ನಂತರದ ಕೆಲವು ದಶಕಗಳಲ್ಲಾದ ಅಭಿವೃದ್ಧಿಯು ಹೆಚ್ಚು ವೈಶಿಷ್ಟ್ಯಪೂರ್ಣವಾದುದು. ಐರೋಪ್ಯರು ಭಾರತವನ್ನು ಆಕ್ರಮಿಸಿದ ಉದ್ದೇಶ ಬೇರೆ ಇದ್ದರೂ, ಶಿಕ್ಷಣವನ್ನು ಊರ್ಜಿತಗೊಳಿಸಿದ ಅದರ ಉದಾತ್ತ ಸೇವೆಯನ್ನು ಕೊಂಡಾಡದಿದ್ದರೆ ನಾವು ಸ್ಥಿತಪ್ರಜ್ಞರೆನ್ನುವುದು ಸುಳ್ಳಾಗುವುದು.

೧. ಮೆಕಾಲೆಯ ಪ್ರಯತ್ನ

ಭಾರತದಲ್ಲಿ ವಿದ್ಯಾಭ್ಯಾಸದ ಪ್ರಗತಿಗೆ ದುಡಿದ ಬ್ರಿಟಿಷರ ಕುರಿತು ವಿವೇಚಿಸುವಾಗ 'ಮೆಕಾಲೆ'ಯ ಸ್ಮರಣೆ ಅಗತ್ಯ. 1834ರಲ್ಲಿ ವೈಸರಾಯ್ ಆಗಿದ್ದ ಲಾರ್ಡ್ ವಿಲಿಯಂ ಬೆಂಟಿಕ್ ವಿದ್ಯಾಪ್ರೇಮಿಯಾಗಿದ್ದ. ಅಂತೆಯೇ ಭಾರತದ ಶಿಕ್ಷಣ ವ್ಯವಸ್ಥೆಯಲ್ಲಿ ಮಾಡ

ಬಹುದಾದ ಬದಲಾವಣೆಗಳನ್ನು ಗುರುತಿಸಿ, ಶಿಫಾರಸು ಮಾಡಲು ನೇಮಿಸಲ್ಪಟ್ಟ ಲಾರ್ಡ್ ಮೆಕಾಲೆ—ಈಗಿನ ಶಿಕ್ಷಣ ಕ್ರಮದ ಜನ್ಮದಾತ. ಕೇವಲ ಪಾಶ್ಚಾತ್ಯ ಹಾಗೂ ಐರೋಪ್ಯ ಶಿಕ್ಷಣಗಳ ಬಗ್ಗೆ ತಿಳಿಯ ಹೇಳುವುದು 'ಪ್ರಿನ್ಸೆಪ್'ನ ಸಲಹೆಯಾಗಿತ್ತು. ಆದರೆ ಮೆಕಾಲೆಯ ದೃಷ್ಟಿಯಲ್ಲಿ ಇದು ಪರಿಪೂರ್ಣವೆನಿಸಿರಲಿಲ್ಲ. ಹಾಗಾಗಿ, ಭಾರತೀಯರಿಗೂ ಶಿಕ್ಷಣವನ್ನು ಜಾಗತಿಕ ಮಾಧ್ಯಮವಾಗಿರುವ ಇಂಗ್ಲಿಷಿನಲ್ಲಿ ನೀಡಬೇಕೆಂದು ಸರಕಾರಕ್ಕೆ ಸಲಹೆ ಮಾಡಿದನು. ಮೆಕಾಲೆಯ ಈ ಯತ್ನ ಸಫಲವಾಗಿರದಿದ್ದಲ್ಲಿ, ಬಹುಶಃ ಭಾರತೀಯರಿಗೆ ಇಂಗ್ಲಿಷ್ ಎಂಬುದೂ ಇಂದಿಗೂ ಕಬ್ಬಿಣದ ಕಡಲೆಯಾಗಿಯೇ ಉಳಿಯುತ್ತಿತ್ತೋ ಏನೋ ? ಅಂತೂ ಅವನ ಸಲಹೆಯನ್ನು ಅಂಗೀಕರಿಸಿದ ಲಾರ್ಡ್ ವಿಲಿಯಂ ಬೆಂಟಿಕ್ ಭಾರತದಲ್ಲಿ ಆ ತನಕ ಬ್ರಿಟಿಷರ ಗುರಿಯಾಗಿದ್ದ ಧರ್ಮ ಪ್ರಚಾರದ ಕಾರ್ಯವನ್ನು ಸ್ವಲ್ಪಮಟ್ಟಿಗೆ ಬದಲಾಯಿಸಿದನು.

ಅವಶ್ಯಕವಾದ ಶಿಕ್ಷಣ ಮತ್ತು ಅದರ ಔಚಿತ್ಯ ಅದರ ಪೂರೈಕೆ ಹಾಗೂ ನಿರ್ವಹಣೆಯ ಬಗ್ಗೆ ಸುವ್ಯವಸ್ಥಿತ ತಿಳುವಳಿಕೆಯನ್ನಿತ್ತ ಮೆಕಾಲೆಯ ನಂತರ ಸುಮಾರು ಎರಡು ದಶಕಗಳ ಕಾಲ ಯಾವೊಂದು ಗಣನೀಯ ಮಾರ್ಪಾಟೂ ನಡೆಯಲಿಲ್ಲ, ಆದರೆ ಪುನಃ 1854ರಲ್ಲಿ ವಿದ್ಯಾರಂಗ ಮತ್ತೊಮ್ಮೆ ಪ್ರಗತಿಯ ಮರೀಚಿಕೆಯನ್ನು ಕಂಡಿತು. ಈ ಹಿಂದಿನ ಹತ್ತು-ಹನ್ನೆರಡು ವರುಷಗಳಲ್ಲಿ ವರ್ಷವೊಂದಕ್ಕೆ ಸುಮಾರು ಹತ್ತು ಲಕ್ಷಗಳಷ್ಟನ್ನು ಸರಕಾರವು ವಿದ್ಯಾಭ್ಯಾಸಕ್ಕಾಗಿ ವ್ಯಯಿಸುತ್ತಿತ್ತು. ಇದರಿಂದ ಬ್ರಿಟಿಷರು ಕೂಡ ಭಾರತೀಯರ ಶಿಕ್ಷಣದ ಬಗ್ಗೆ ಕೊಂಚ ಆಸ್ಥೆ ತೋರಿಸುತ್ತಿದ್ದರು ಎಂಬುದು ವ್ಯಕ್ತವಾಗುತ್ತದೆ.

೨. ಪಾರ್ಲಿಮೆಂಟರಿ ಕಮಿಟಿಯ ಶಿಫಾರಸು

ಭಾರತದಲ್ಲಿ ವಿದ್ಯಾಭ್ಯಾಸ ಪೂರೈಕೆಯನ್ನು ಅಲಕ್ಷಿಸಬಾರದೆಂದೂ ಅದು ಬ್ರಿಟಿಷ್ ಆಧಿಪತ್ಯಕ್ಕೆ ಯಾವ ರೀತಿಯಲ್ಲೂ ತೊಂದರೆ ಕೊಡುವುದಿಲ್ಲವೆಂದೂ, ಬದಲಾಗಿ ಇನ್ನಷ್ಟು ಸಹಕರಿಸುತ್ತದೆ ಎಂದೂ-ಮೆಕಾಲೆ ಹಾಗೂ ಹಲವು ಶಿಕ್ಷಣ ಸಮಿತಿಗಳು ವರದಿ ಮಾಡಿದಂತೆ ಈಸ್ಟ್ ಇಂಡಿಯಾ ಕಂಪೆನಿಯು ಈ ಬಗ್ಗೆ ಇನ್ನಷ್ಟು ಹೆಚ್ಚಿನ ಪರಿಶೀಲನೆ ನಡೆಸಲು 'ಪಾರ್ಲಿಮೆಂಟರಿ ಕಮಿಟಿ' (1854) ಯನ್ನು ನೇಮಿಸಿತು. ಆದರ ಚೇರ್‌ಮೆನ್‌ರಾದ ಶ್ರೀ ವುಡ್‌ರವರ ವರದಿ ಭಾರತೀಯ ಶಿಕ್ಷಣದ ಪುನರುಜ್ಜೀವನಕ್ಕೆ ಬಹಳಷ್ಟು ಸಹಕಾರಿಯಾಗಿತ್ತು.

ವುಡ್‌ರವರ ಸುದೀರ್ಘ ವರದಿ ಪ್ರಸ್ತುತ ಈಗಿರುವ ಹಲವು ಹತ್ತು ಕ್ರಮಗಳಿಗೆ ಅಂದೇ ಶಿಫಾರಸು ಮಾಡಿತ್ತು-“ಭಾರತೀಯ ಶಿಕ್ಷಣ ಬ್ರಿಟಿಷರ ಜವಾಬ್ದಾರಿಯಾಗಿರುತ್ತದೆ, ಬೌದ್ಧಿಕ ಹಾಗೂ ನೈತಿಕ ಅಭಿವೃದ್ಧಿಯು ಶಿಕ್ಷಣದ ಮೂಲ ಧ್ಯೇಯವಾಗಿದೆ. ಸಂಸ್ಕೃತ, ಅರೇಬಿಕ್ ಹಾಗೂ ಪರ್ಶಿಯನ್ ಭಾಷೆಗಳು ಐಚ್ಛಿಕವಾಗಿಯೂ ಇಂಗ್ಲೀಷ್ ಶಿಕ್ಷಣವು ಕಡ್ಡಾಯವಾಗಿಯೂ ನಿಗದಿ ಪಡಿಸಬೇಕು. ಭಾರತೀಯ ಭಾಷೆ

ಗಳಲ್ಲಿ ಶಿಕ್ಷಣಕ್ಕೆ ಬೇಕಾಗುವ ಪುಸ್ತಕಗಳ ಕೊರತೆ ಇರುವುದರಿಂದ ಇಂಗ್ಲೀಷನ್ನೇ ಶಿಕ್ಷಣ ಮಾಧ್ಯಮವಾಗಿ ಪರಿಗಣಿಸಬಹುದು. ಶಿಕ್ಷಣಕ್ಕೇ ಪ್ರತ್ಯೇಕವಾದ ಇಲಾಖೆಯನ್ನು ನೇಮಿಸಿ, ಶಿಕ್ಷಣ ಮಂತ್ರಿ, ಅವರ ಸಹಾಯಕರುಗಳು, ಶಿಕ್ಷಣ ನಿರ್ದೇಶಕ, ಉಪನಿರ್ದೇಶಕ ಗಳು. . . . ಹೀಗೆ ಪ್ರತಿಷ್ಠಿತ ಪದವಿಗಳ ನೇಮಕವಾಗಬೇಕು. ಕಲ್ಕತ್ತ, ಮುಂಬಾಯಿ, ಮದ್ರಾಸುಗಳಲ್ಲಿ ವಿಶ್ವವಿದ್ಯಾನಿಲಯಗಳ ಸ್ಥಾಪನೆಯಾಗಬೇಕು. ಪ್ರಾಥಮಿಕ, ಮಾಧ್ಯ ಮಿಕ ಶಾಲೆಗಳು ಪ್ರೌಢ ಶಿಕ್ಷಣಾಲಯಗಳು—ಕಾಲೇಜುಗಳು ವಿಶ್ವವಿದ್ಯಾನಿಲಯಗಳು—ಈ ಹಂತದಲ್ಲಿ ಶಿಕ್ಷಣ ಕೇಂದ್ರಗಳನ್ನು ರಚಿಸಬೇಕು. ಸಾರ್ವಜನಿಕ ಶಿಕ್ಷಣ ಸೌಲಭ್ಯವಿರ ಬೇಕು. ಖಾಸಗಿ ಶಾಲೆಗಳಿಗೆ ಗ್ರಾಂಟ್ ನೀಡುವ ಯೋಜನೆಯನ್ನು ಅಳವಡಿಸಿಕೊಳ್ಳ ಬೇಕು. ಉಪಾಧ್ಯಾಯ ವೃತ್ತಿ ಕೈಗೊಳ್ಳುವವರಿಗೆ ಪೂರ್ವ ತರಬೇತಿ ನೀಡಬೇಕು. ಸ್ತ್ರೀ ಶಿಕ್ಷಣ ಕಡ್ಡಾಯವಾಗಿರಬೇಕು. ಸರಕಾರೀ ಕಾರ್ಯಾಲಯಗಳಲ್ಲಿ ಮಹಿಳೆಯ ರಿಗೂ ಆದ್ಯತೆ ನೀಡಬೇಕು. ಮುಸಲ್ಮಾನರು ಶಿಕ್ಷಣದಲ್ಲಿ ಬಹಳ ಹಿಂದುಳಿದವರಾಗಿದ್ದ ರಿಂದ ಅವರ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಔದ್ಯೋಗಿಕ ಶಿಕ್ಷಣ ಕ್ರಮವನ್ನು ಅನುಸರಿಸಿ ಉದ್ಯೋಗ ಮತ್ತು ಸೇವೆಗಳಲ್ಲಿ ಶಿಕ್ಷಣಕ್ಕೆ ಪ್ರಾಮುಖ್ಯ ಸ್ಥಾನ ನೀಡಬೇಕು. ಉದ್ಯೋಗಾವಕಾಶದಲ್ಲಿ ಸೂಕ್ತ ಅಭ್ಯರ್ಥಿಯನ್ನು ಆರಿಸುವಾಗ ಯೋಗ್ಯ ಶೈಕ್ಷಣಿಕ ಹಿನ್ನೆಲೆಯನ್ನು ಹೊಂದಿರುವವನ್ನೇ ಆರಿಸಬೇಕು. ಮುಖ್ಯವಾಗಿ ಸರಕಾರಿ ಕಾರ್ಯಾ ಲಯಗಳಲ್ಲಿ ಉನ್ನತ ಪದವಿಯನ್ನು ಅಲಂಕರಿಸುವ ವ್ಯಕ್ತಿಯು ಶೈಕ್ಷಣಿಕವಾಗಿ ಶ್ರೇಷ್ಠ ನಾಗಿರಬೇಕು . . . . " ಇವೇ ಮೊದಲಾದವುಗಳು ವುಡ್ ಶಿಫಾರಸಿನ ಮುಖ್ಯಾಂಶ ಗಳಾಗಿರುತ್ತವೆ.

ಭಾರತದ ಶಿಕ್ಷಣ ಇತಿಹಾಸದಲ್ಲಿ ಈ ವರದಿಗೆ ಪ್ರಮುಖ ಸ್ಥಾನವಿದೆ. ಏಕೆಂದರೆ, ಬ್ರಿಟಿಷರು ಭಾರತೀಯರಿಗೆ ನೀಡುತ್ತಿದ್ದ ಶಿಕ್ಷಣದಲ್ಲಿ ಪರಿಣಾಮಕಾರಿ ಬದಲಾವಣೆಗಳನ್ನು ಮಾಡಲು ಈ ವರದಿಯೇ ಪ್ರಮುಖ ಕಾರಣವಾಗಿತ್ತು. ಆದರೂ ಇದು ಕೆಲವು ನ್ಯೂನತೆ ಗಳನ್ನೊಳಗೊಂಡಿತ್ತು.

೩. ಹಂಟರ್ ಆಯೋಗ — ಕರ್ಜನ್ ಧೋರಣೆ

19ನೆಯ ಶತಮಾನದ ಕೊನೆಯ ನಾಲ್ಕು ದಶಕಗಳಲ್ಲಿ (ವುಡ್ ವರದಿ ನಂತರ) ನಡೆದ ಮಹತ್ತರದ ಘಟನೆಗಳಲ್ಲಿ 1882 ರ ಹಂಟರ್ ಕಮೀಷನ್ ನೇಮಕ ಹಾಗೂ 1902-1904ರ ಕರ್ಜನ್ ಧೋರಣೆ ಹಾಗೂ ವಿಶ್ವವಿದ್ಯಾನಿಲಯ ಕಾಯಿದೆಗಳು ಮುಖ್ಯವಾದುವುಗಳು, ಲಾರ್ಡ್ ರಿಪ್ಪನ್‌ನ ಅಧಿಕಾರಾವಧಿಯಲ್ಲಿ, ನೇಮಕವಾದ ಪ್ರಪ್ರಥಮ ಭಾರತೀಯ ಶಿಕ್ಷಣ ಆಯೋಗವಾದ ಹಂಟರ್ ಕಮೀಷನ್ ಶಿಕ್ಷಣದ ಎಲ್ಲಾ ಹಂತದ ಬೆಳವಣಿಗೆಗೆ ಸೂಕ್ತ ಸಲಹೆ ನೀಡಿತ್ತು, ಅಂತೆಯೇ 1904 ರ ವಿಶ್ವವಿದ್ಯಾ ನಿಲಯ ಮಸೂದೆ ಅಥವಾ ಕರ್ಜನ್ ಧೋರಣೆ ಭಾರತದಲ್ಲಿ ವಿಶ್ವವಿದ್ಯಾನಿಲಯಗಳ ಸ್ಥಾಪನೆಗೆ ಸಹಕಾರಿಯಾಯಿತು. ಈ ನಡುವೆ 1885 ರಲ್ಲಿ ರಾಷ್ಟ್ರೀಯ ಕಾಂಗ್ರೆಸ್‌ನ

ಸ್ಥಾಪನೆಯಾಯಿತು. ಇದರಿಂದ ಭಾರತೀಯರಿಗೆ ತಮ್ಮ ಅನಿಸಿಕೆಗಳ ಅಭಿವ್ಯಕ್ತಿಗೆ ಸೂಕ್ತ ಮಾಧ್ಯಮ ಹಾಗೂ ಸಾಂಘಿಕ ಬೆಂಬಲ ದೊರಕಿದಂತಾಯಿತು. ಕಾಂಗ್ರೆಸ್ ನೇತಾರರು ಕೇವಲ ಸ್ವಾತಂತ್ರ್ಯದತ್ತ ಮಾತ್ರ ದೃಷ್ಟಿಯಿರಿಸಿರಲಿಲ್ಲ. ಜೊತೆಗೆ ಶಿಕ್ಷಣ ದತ್ತಲೂ ತಮ್ಮ ನೋಟ ಬೀರಿದ್ದರು.

೪. ರಾಷ್ಟ್ರೀಯ ಕಾಂಗ್ರೆಸ್‌ನ ಒತ್ತಡ

ಭಾರತದ ಸ್ವಾತಂತ್ರ್ಯಕ್ಕೆ ದುಡಿದ ಗೋಪಾಲಕೃಷ್ಣ ಗೋಖಲೆ ಶಿಕ್ಷಣ ರಂಗ ದಲ್ಲೂ ಬಹಳಷ್ಟು ಕ್ರಾಂತಿಯನ್ನುಂಟು ಮಾಡಿದ್ದರು. 1911 ರಿಂದ 1913ರ ತನಕದ ನಡುವಿನ ಕಾಲದಲ್ಲಿ ಗೋಖಲೆಯವರು ನಡೆಸಿದ ಚಳುವಳಿ ತುಂಬಾ ಸಹಕಾರಿಯಾ ಗಿತ್ತು. ಗೋಖಲೆ ಓರ್ವ ಉಗ್ರಗಾಮಿ ಕಾಂಗ್ರೆಸಿಗರಾದ್ದರಿಂದ ಅವರ ಕ್ರಾಂತೀಕಾರಿ ಹೆಜ್ಜೆಗಳು ಭಾರತ ಶಿಕ್ಷಣ ಪಥದಲ್ಲಿ ಒಂದೊಂದು ಮೈಲಿಗಲ್ಲಾಗಿ ಪರಿಣಮಿಸಿದವು.

೫. ಗೋಖಲೆ ಮನವಿ

1906 ರಲ್ಲಿ ಬಡೋದಾ ಮಹಾರಾಜರಾಗಿದ್ದ ಸಯ್ಯಾಜಿರಾವ್ ಗಾಯಕ ವಾಡರು ತಮ್ಮ ಆಡಳಿತ ವ್ಯಾಪ್ತಿಯೊಳಗೆ ಪ್ರಾಥಮಿಕ ಶಿಕ್ಷಣವು ಕಡ್ಡಾಯ ಹಾಗೂ ಉಚಿತವಾಗಿ ದೊರಕುವಂತೆ ಮಾಡಿದರು. ಇದು ಗೋಖಲೆಯವರಿಗೆ ಹೊಸ ಪ್ರೇರಣೆ ಯಾಯಿತು. ಇದೇ ಸೌಲಭ್ಯವು ಭಾರತದಾದ್ಯಂತ ದೊರಕುವಂತಾಗಬೇಕೆಂದು ಬಯಸಿ ದರು. 'ಇಂಪೀರಿಯಲ್ ಲೆಜಿಸ್ಲೇಟಿವ್ ಕೌನ್ಸಿಲ್‌ನ ಸದಸ್ಯರಾಗಿದ್ದ ಗೋಖಲೆಯವರು 19·3·1910 ರಂದು ಮನವಿಯೊಂದನ್ನು ಸರ್ಕಾರದ ಮುಂದಿಟ್ಟರು. ಎಲ್ಲರಿಗೂ ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು ನೀಡಬೇಕು. 35% ಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳನ್ನು ಹೊಂದಿರುವ ಪ್ರದೇಶಗಳಲ್ಲಿ ಹೊಸ ಶಿಕ್ಷಣ ಕೇಂದ್ರಗಳನ್ನು ಸ್ಥಾಪಿಸ ಬೇಕು. ಶಿಕ್ಷಣದ ವೆಚ್ಚವನ್ನು ಸರಕಾರ ಹಾಗೂ ಸ್ಥಳೀಯ ಸಂಸ್ಥೆಗಳು ಹಂಚಿಕೊಳ್ಳ ಬೇಕು. ಪ್ರಾಥಮಿಕ ಶಿಕ್ಷಣದ ಸಂಘಟನೆ ಹಾಗೂ ಮೇಲ್ವಿಚಾರಣೆಗೆ ಓರ್ವ ಕಾರ್ಯ ದರ್ಶಿಯ ನೇಮಕವಾಗಬೇಕು. ಕೇಂದ್ರ ಸರಕಾರದಲ್ಲಿ ಪ್ರಾಥಮಿಕ ಶಿಕ್ಷಣಾಲಯಗಳ ಸ್ಥಾಪನೆ ಹಾಗೂ ಅವರ ಕಾರ್ಯ ನಿರ್ವಹಣೆಗೆ ಹೊಸ ವಿಭಾಗವೊಂದನ್ನು ಆರಂಭಿಸ ಬೇಕು, ಎಂದು ಈ ಮನವಿಯಲ್ಲಿ ಅಪೇಕ್ಷಿಸಲಾಯಿತು.

ಸರಕಾರವು ಇದರ ಬಗ್ಗೆ ಪರಿಶೀಲಿಸುವುದಾಗಿ ಭರವಸೆಯನ್ನಿತ್ತುದರಿಂದ, ಗೋಖಲೆಯವರು ಮುಂಡಿಸಿದ್ದ ಠರಾವನ್ನು ಹಿಂದಕ್ಕೆ ತೆಗೆದುಕೊಂಡರು. ಸರಕಾರವು ಎಲ್ಲಾ ಅಂಶಗಳನ್ನು ಒಪ್ಪಿದಾಗ, ಉಚಿತ ಶಿಕ್ಷಣ ನೀತಿಯನ್ನು ಒಪ್ಪಲಿಲ್ಲ. ನಿಜವಾಗಿ ಇದೇ ಗೋಖಲೆಯವರ ಮುಖ್ಯ ಗುರಿಯಾಗಿತ್ತು. ಅದರಂತೆ ಹಿಡಿದ ಛಲವನ್ನು ಬಿಡದೆ ಗೋಖಲೆಯವರು ಪುನಃ 16–3–1911 ರಂದು ತಮ್ಮ ಮನವಿಯನ್ನು ಸರಕಾರದ ಮುಂದಿಟ್ಟರು. ಶಿಕ್ಷಣ ಉಚಿತ ಹಾಗೂ ಕಡ್ಡಾಯವಾಗಿ ಕೆಲವು ಕಡೆಗಳಲ್ಲಾದರೂ

ಜಾರಿಯಾಗಬೇಕು. ಈ ಸ್ಥಳಗಳ ಆಯ್ಕೆಯನ್ನು ಗವರ್ನರ್ ಜನರಲ್-ಇನ್-ಕೌನ್ಸಿಲ್ ಇವರು ನಡೆಸಬೇಕು. ಹೀಗೆ ಆರಿಸಿದ ಸ್ಥಳಗಳ ಆಯ್ಕೆ ಸಮಂಜಸವಾದಲ್ಲಿ ಅಲ್ಲಿ ವಿದ್ಯಾ ಕೇಂದ್ರಗಳ ಸ್ಥಾಪನೆಗೆ ಅಲ್ಲಿಯ ಸ್ಥಳೀಯ ಸಂಸ್ಥೆಗಳು ಪ್ರಯತ್ನಿಸಬೇಕು. ಅಲ್ಲಿನ ಶಿಕ್ಷಣ ಪೂರೈಕೆ ಹಾಗೂ ಪ್ರಗತಿಯ ಹೊಣೆಯನ್ನು ಅವುಗಳಿಗೇ ಬಿಡಬೇಕು. ಶಿಕ್ಷಣಕ್ಕೆ ತಗಲುವ ವೆಚ್ಚವನ್ನು 1:2 ರ ಅನುಪಾತದಲ್ಲಿ ಸ್ಥಳೀಯ ಸಂಸ್ಥೆಗಳು ಹಾಗೂ ಸರಕಾರ ಹಂಚಿ ಕೊಳ್ಳಬೇಕು. 6 ರಿಂದ 10 ವರ್ಷದ ಮಕ್ಕಳನ್ನು ಶಾಲೆಗೆ ಕಳುಹಿಸುವ ಜವಾಬ್ದಾರಿ ಹೆತ್ತವರದ್ದಾಗಿದ್ದು ಪ್ರಾಥಮಿಕ ಶಿಕ್ಷಣವು ಹುಡುಗಿಯರಿಗೂ ಕಡ್ಡಾಯವಾಗಿರಬೇಕು.- ಎಂದು ಇದರಲ್ಲಿ ವಿವರಿಸಿದ್ದರು. ಗೋಖಲೆಯವರ ಮನವಿ ಆಗ ತಿರಸ್ಕರಿಸಲ್ಪಟ್ಟಿತಾದರೂ, ಭಾರತೀಯ ಶಿಕ್ಷಣದ ಪುನಶ್ಚೇತನಕ್ಕೆ ಅದು ಬಹಳಷ್ಟು ಸಹಕರಿಸಿತು ಎಂಬುದು ದಿಟ.

೬. ಸೆಡ್ಲರ್ ಆಯೋಗ

1917 ರಿಂದ 1919 ರ ತನಕ ಅಸ್ತಿತ್ವದಲ್ಲಿದ್ದ ಸೆಡ್ಲರ್ ಕಮಿಷನ್ ಅಥವಾ ಕಲ್ಕತ್ತ ವಿಶ್ವವಿದ್ಯಾನಿಲಯ ಕಮಿಷನ್ನಿನ ಸೇವೆ ಬಹಳ ಅಮೂಲ್ಯವಾದುದು. 1916 ರಲ್ಲಿ ಕಾಶಿ ವಿಶ್ವವಿದ್ಯಾಲಯ, 1918 ರಲ್ಲಿ ಉಸ್ಮಾನಿಯಾ ವಿಶ್ವವಿದ್ಯಾನಿಲಯ ಸ್ಥಾಪಿಸಲ್ಪಟ್ಟವು. ಇವುಗಳ ನಡುವೆ 1917 ರಲ್ಲಿ ಒಂದು ಆಯೋಗವು ನೇಮಿಸಲ್ಪ ಟ್ಟಿದ್ದು ಸೆಡ್ಲರ್ ಅದರ ಚೇರಮನ್ ಆಗಿದ್ದರು. ಈ ಸೆಡ್ಲರ್ ಆಯೋಗವು ಮೂಲತಃ ಕಲ್ಕತ್ತ ವಿಶ್ವವಿದ್ಯಾನಿಲಯದ ಬಗೆಗಿನ ಆತಂಕಗಳ ನಿವಾರಣೆಗೆ ಮಾಡಬಹುದಾದ ಪ್ರತಿಬಂಧಕ ನಿವಾರಣೆಗಳನ್ನು ಸರಕಾರದ ಗಮನಕ್ಕೆ ತರ ಬಯಸುವುದಕ್ಕೋಸ್ಕರ ನೇಮಕವಾಗಿತ್ತು. ಆದರೆ ಪ್ರಾಥಮಿಕ ಶಿಕ್ಷಣದೊಡನೆ ಪ್ರೌಢ ಹಾಗೂ ಔದ್ಯೋಗಿಕ ಶಿಕ್ಷಣಗಳ ಬಗೆಗೂ ಈ ಆಯೋಗ ವಿಶೇಷ ಸಲಹೆಗಳನ್ನು ನೀಡಿತು.

ಪ್ರಾಥಮಿಕ ಶಿಕ್ಷಣವು ಪ್ರೌಢ ಶಿಕ್ಷಣದಿಂದ ಹಿಂಬಾಲಿಸ್ಪಡಬೇಕಾದುದರಿಂದ ವಿಶ್ವ ವಿದ್ಯಾಲಯಗಳ ಸ್ಥಾಪನೆಯೂ ಒಂದು ಮುಖ್ಯ ಶೈಕ್ಷಣಿಕ ಅವಶ್ಯಕತೆಯಾಗಿದೆ. ವಿಶ್ವ ವಿದ್ಯಾನಿಲಯಗಳ ಮೆಟ್ಟಲೇರಬೇಕಾದರೆ ಅಭ್ಯರ್ಥಿ ಪ್ರೌಢ ಹಾಗೂ ಪದವಿ ಪೂರ್ವ ಶಿಕ್ಷಣ ವನ್ನು ಪಡೆದಿರಬೇಕು. ವಿಶ್ವವಿದ್ಯಾನಿಲಯಗಳ ಮಟ್ಟದಲ್ಲಿ ಮೂರು ವರ್ಷಗಳ ಶಿಕ್ಷಣ ನೀಡಬೇಕು. ಈಶಿಕ್ಷಣಾವಧಿಯಲ್ಲಿ ಆರೋಗ್ಯ ಶಾಸ್ತ್ರ, ತಾಂತ್ರಿಕ ಶಿಕ್ಷಣ, ಕೃಷಿ ವಿಜ್ಞಾನ, ವಾಣಿಜ್ಯ ಶಾಸ್ತ್ರ, ವಿಜ್ಞಾನ ಪಾಠ ಹಾಗೂಕಲಾಶಿಕ್ಷಣಗಳನ್ನು ನೀಡಬೇಕು. ಈ ಶಿಕ್ಷಣವು ಮಾತೃಭಾಷೆಯಲ್ಲಿ ನೀಡಬೇಕು. ವಿಶ್ವವಿದ್ಯಾನಿಲಯಗಳ ಸುಲಲಿತ ಕಾರ್ಯ ನಿರ್ವ ಹಣೆಗಾಗಿ ವಿಶೇಷ ಆರ್ಥಿಕ ನೆರವನ್ನು ಕೇಂದ್ರ ಸರಕಾರ ತೆಗದಿರಿಸಬೇಕು. ಇದಕ್ಕೆ ಸಂಬಂಧಿಸಿದ ಕಾರ್ಯ ನಿರ್ವಾಹಕರುಗಳನ್ನು ನೇಮಿಸಬೇಕು. ವಿಶ್ವವಿದ್ಯಾನಿಲಯಗಳ ಮೇಲಿನ ಸರಕಾರದ ಹಿಡಿತ ಸಡಿಲವಾಗಿರಬೇಕು. ಅಧ್ಯಾಪಕರುಗಳಿಗೂ ಅವರ ಕಾರ್ಯದ ಬಗ್ಗೆ ತರಬೇತಿ ನೀಡುವ ಸೌಲಭ್ಯವನ್ನು ಕಲ್ಪಿಸಬೇಕು. ಮುಖ್ಯ ಕೇಂದ್ರಗಳಲ್ಲಿ ಶಿಕ್ಷಣ ನಿರ್ದೇಶನಾಲಯಗಳನ್ನು ಸ್ಥಾಪಿಸಬೇಕು. ಸ್ತ್ರೀಯರಿಗೂ ಶಿಕ್ಷಣ ಪೂರೈಯಿಸಬೇಕು.

ಎಲ್ಲಾ ಮಟ್ಟದಲ್ಲಿ ಸ್ತ್ರೀ ಶಿಕ್ಷಣ ಲಭ್ಯವಾಗಿರಬೇಕು. ತಾಂತ್ರಿಕ, ಔದ್ಯೋಗಿಕ ಹಾಗೂ ವ್ಯಾವಹಾರಿಕ ಶಿಕ್ಷಣಗಳು ಪ್ರಾಮುಖ್ಯವಾಗಿರುವುದರಿಂದ ಅವುಗಳನ್ನು ಪೂರೈಸಬೇಕು."–ಎಂಬ ಸೆಡ್ಲರ್ ಆಯೋಗದ ಈ ವರದಿ, ಆಗಿನ ಕಾಲದ ಹಲವು ತಜ್ಞರುಗಳಿಂದ ವಿಮರ್ಶಿಸಲ್ಪಟ್ಟಿತು. ಆದರೆ ಸರಕಾರ ಆ ಮನವಿಯನ್ನು ಅಂಗೀಕರಿಸಿ, ನಮೂದಿಸಿದ ಬದಲಾವಣೆಗಳನ್ನು ತತ್‌ಕ್ಷಣ ಮಾಡಿತು. ಈ ದೃಷ್ಟಿಯಿಂದ ಸೆಡ್ಲರ್ ಆಯೋಗ ಭಾರತೀಯ ಶಿಕ್ಷಣದ ಔನ್ನತ್ಯಕ್ಕೆ ಬಹಳಷ್ಟು ಸಹಕರಿಸಿತು ಎಂದರೆ ಸುಳ್ಳಾಗದು.

೭. ಹಾರ್ಟೊಗ್ ಸಮಿತಿ

ದ್ವಿತೀಯ ಮಹಾಯುದ್ಧದ ಸಂದರ್ಭದಲ್ಲಿ ಭಾರತೀಯರು ಸಹಕರಿಸಿದರೆ, ಮುಂದೆ ಸ್ವಾತಂತ್ರ್ಯವನ್ನು ನೀಡುವುದಾಗಿ ಬ್ರಿಟಿಷರು ಭರವಸೆಯನ್ನಿತ್ತಿದ್ದರು. ಆದರೆ ಇವೆಲ್ಲಾ ಬರೇ ಸುಳ್ಳಿನ ಕಂತೆಯಾಯಿತು. ವಿಶ್ವ ಸಮರ ಮುಗಿದ ಕಾಲದಲ್ಲಿ, ಪ್ರಚಲಿತವಾಗಿದ್ದ ರಾಜಕೀಯ ನಿರ್ಬಂಧಗಳು ವಿದ್ಯಾರಂಗವನ್ನು ಬಹಳಷ್ಟು ಬಾಧಿಸಿದವು. ಕೇಂದ್ರ ಸರಕಾರವು ವಿದ್ಯಾಭ್ಯಾಸದ ಹೊಣೆಯನ್ನು ಸಂಪೂರ್ಣವಾಗಿ ಪ್ರಾಂತ ಸರಕಾರದ ಮೇಲೆ ಹೇರಿತು. ಆದರೆ ಪ್ರಾಂತೀಯ ಸರಕಾರಗಳು ತಮ್ಮಲ್ಲಿರುವ ಮಿತವಾದ ಸೌಲಭ್ಯ ಮತ್ತು ಸಂಪತ್ತುಗಳಿಂದ ಉಚ್ಚ ಮಟ್ಟದ ಶಿಕ್ಷಣ ನೀಡುವುದು ಕಷ್ಟ ಸಾಧ್ಯವಾಗಿತ್ತು. ಸರಕಾರದ ಈ ಬಳಸು ಕ್ರಮಕ್ಕೆ ಭುಗಿಲೆದ್ದ ಜನತೆ ಸುಯೋಗ್ಯ ಶಿಕ್ಷಣ ಕ್ರಮವನ್ನು ಜಾರಿಗೆ ತರಬೇಕೆಂದು ಸರಕಾರವನ್ನು ಒತ್ತಾಯಿಸಿತು. ಇದಕ್ಕೆ ಅಖಿಲ ಭಾರತೀಯ ಕಾಂಗ್ರೆಸ್ ಪಕ್ಷ ಬೆಂಬಲ ನೀಡಿದಾಗ ಸರಕಾರ ಕ್ಷಿಪ್ರ ಕ್ರಮ ಕೈಗೊಳ್ಳಲೇಬೇಕಾಯಿತು. ಅಂತೆಯೇ ಶಿಕ್ಷಣದ ಸಮಸ್ಯೆಗಳನ್ನು ಚರ್ಚಿಸಲು ಸೈಮನ್ ಕಮಿಶನ್‌ಗೆ ಸಹಾಯಕವಾಗಿ ಹಾರ್ಟೊಗ್ ಆಯೋಗದ ನೇಮಕವಾಯಿತು. ಢಾಕ್ಕಾ ವಿಶ್ವವಿದ್ಯಾನಿಲಯದ ಉಪಕುಲಪತಿಯಾಗಿದ್ದ ಹಾರ್ಟೊಗ್‌ರ ಅನುಭವಿ ಅಧ್ಯಕ್ಷತೆಯಲ್ಲಿ ಈ ಆಯೋಗ ತನ್ನ ಕಾರ್ಯದಲ್ಲಿ ಸಾಫಲ್ಯಗಳಿಸಬಹುದೆಂದು ನಂಬಲಾಗಿತು. 1929 ರ ಸೆಪ್ಟೆಂಬರ್‌ನಲ್ಲಿ ಅಸ್ತಿತ್ವಕ್ಕೆ ಬಂದ ಈ ಆಯೋಗ ಕ್ಷೀಣಿಸುತ್ತಿರುವ ಶಿಕ್ಷಣ ಪದ್ಧತಿಗೆ ಪ್ರಾಣವಾಯುವನ್ನು ನೀಡಿತು.

ಪ್ರಾಥಮಿಕ ಶಿಕ್ಷಣ ಮಟ್ಟದಲ್ಲಾಗುವ ದುರುಪಯೋಗ, ದುರ್ವ್ಯಯಗಳನ್ನು ಮನಗಂಡ ಆಯೋಗ ಈ ನಿಟ್ಟಿನಲ್ಲಿ ಅಭಿವೃದ್ಧಿಯನ್ನು ಬಯಸಿತು. ಭಾರತದ ಬಹುತೇಕ ಜನತೆ ಹಳ್ಳಿಗಳಲ್ಲಿ ನೆಲೆಯಾಗಿರುವುದರಿಂದ ಶಿಕ್ಷಣವು ನಗರಗಳಿಗಿಂತಲೂ ಹೆಚ್ಚಾಗಿ ಹಳ್ಳಿಗಳಲ್ಲಿ 'ಕೊರತೆ' ಎಂದು ತಿಳಿದು ಬಂದಿತು. ಕುಲ ಕಸುಬನ್ನು ಬಿಟ್ಟು ಶಿಕ್ಷಣದತ್ತ ಒಲವು ತೋರಿಸದಂತೆ ಅಶಿಕ್ಷಿತರ ದಿಗ್ಬಂಧನವಿತ್ತು. ಮಾತ್ರವಲ್ಲ, ಉದ್ಯೋಗದಿಂದ ತೆರವು ಮಾಡಿ ಶಾಲೆಗೆ ಕಳಿಸಿದಲ್ಲಿ ಆಗುವ ಆರ್ಥಿಕ ನಷ್ಟವನ್ನು ಭರಿಸುವುದು ಈ ರಕ್ಷಕರುಗಳಿಗೆ ಅಹಿತಕರವೆನಿಸುತ್ತಿತ್ತು. ಸಂಚಾರ ಹಾಗೂ ಸಂಪರ್ಕ ಸಾಧನಗಳ ಅಸೌಕರ್ಯದಿಂದಾಗಿ ಮಳೆಗಾಲದಲ್ಲಿ ಶಾಲೆಗಳನ್ನು ನಡೆಸಲು ಸುರಕ್ಷಿತ ವ್ಯವಸ್ಥೆ ಇಲ್ಲವಾಗಿತ್ತು. ಹಳ್ಳಿಗರ ನೈರ್ಮಲ್ಯ

ಹಾಗೂ ಆರೋಗ್ಯದತ್ತ ಕ್ಷುಲ್ಲಕ ದೃಷ್ಟಿ ಬೀರುತ್ತಿದ್ದುದರಿಂದ ಏಕಪ್ರಕಾರವಾಗಿ ಎಡೆ ಬಿಡದೆ ಶಾಲೆಗೆ ಹಾಜರಾಗುತ್ತಿರಲಿಲ್ಲ. ಆದರೂ ಈ ಹಳ್ಳಿಗಳಲ್ಲಿ ಕೆಲವು ಶಾಲೆಗಳು ನಡೆಯುತ್ತಿದ್ದವು. ಅವುಗಳಲ್ಲಿ ಶೇಕಡಾ ಅರುವತ್ತಕ್ಕಿಂತ ಹೆಚ್ಚಿನ ಶಾಲೆಗಳು 'ಏಕೋಪಾಧ್ಯಾಯ ಶಾಲೆಗಳಾಗಿದ್ದವು ಮಾತ್ರವಲ್ಲ, ನಿರೀಕ್ಷಿತ ತರಬೇತಿಯನ್ನು ಹೊಂದಿರದ ಅಧ್ಯಾಪಕರುಗಳಿಂದ ಶಾಲೆಗಳು ನಡೆಸಲ್ಪಡುತ್ತಿದ್ದುವು. ಹಾಗಾಗಿ ಶಿಕ್ಷಣದ ವ್ಯವಸ್ಥೆ ಅಷ್ಟು ಉತ್ತಮವಾಗಿರಲಿಲ್ಲ. ಕಡ್ಡಾಯ ಹಾಜರಾತಿ ಬಳಕೆಯಲ್ಲಿರಲಿಲ್ಲ. ಒಡತನವು ಶಿಕ್ಷಣಮಟ್ಟದ ಕುಸಿತಕ್ಕೆ ಕಾರಣವಾಗಿತ್ತು. ಇದನ್ನೆಲ್ಲಾ ಪರಿಶೀಲಿಸಿ ವಿಮರ್ಶಿಸಿದ ಹಾರ್ಟೆಜ್ ಆಯೋಗ ಸರಕಾರಕ್ಕೆ ಯೋಗ್ಯ ಸಲಹೆಯನ್ನು ನೀಡಿತು. ಶಿಕ್ಷಣವು ಕಡ್ಡಾಯವಾಗಿದ್ದರೂ. ಅವಸರದ ಒತ್ತಡ ಹೇರಬಾರದು. ಕೇಂದ್ರ ಸರಕಾರವೇ ಶಿಕ್ಷಣದ ಹೊಣೆಯನ್ನು ಹೊರಬೇಕು. ಪ್ರಾಥಮಿಕ ಶಿಕ್ಷಣಗಳ ಸಂಖ್ಯೆಯನ್ನು ಹೆಚ್ಚಿಸುವ ಬಗ್ಗೆ ಗಮನ ಹರಿಸುವುದಕ್ಕಿಂತ ಹೆಚ್ಚು-ಶಿಕ್ಷಣ ಕ್ರಮದ ಮಟ್ಟವನ್ನು ಊರ್ಜಿತಗೊಳಿಸುವಲ್ಲಿ ಯತ್ನಿಸಿ ಯಶಸ್ವಿಯಾಗಬೇಕು. ಕನಿಷ್ಠ ಪಕ್ಷ ನಾಲ್ಕು ವರ್ಷಗಳಷ್ಟಾದರೂ, ಪ್ರಾಥಮಿಕ ಶಿಕ್ಷಣವನ್ನು ವಿದ್ಯಾರ್ಥಿ ಪಡೆಯಬೇಕು. ಉಪಾಧ್ಯಾಯ ಹಾಗೂ ವಿದ್ಯಾಲಯಗಳ ಪರಿಸ್ಥಿತಿಯ ಪ್ರಗತಿ ಅತ್ಯಗತ್ಯ ಎಂದು ಹ್ಹಾರ್ಟೆಜ್‌ಆಯೋಗ ಶಿಫಾರಸು ಮಾಡಿತು.

೮. ಹಾರ್ಟೆಜ್ ಸಮಿತಿಯ ಅನುಮೋದನೆ

ಮಾಧ್ಯಮಿಕ ಶಿಕ್ಷಣವು ಕೇವಲ ಮೆಟ್ರಿಕ್ ಪರೀಕ್ಷೆಯನ್ನು ಪಾಸು ಮಾಡಬೇಕೆನ್ನುವ ಏಕೈಕ ಉದ್ದೇಶದಿಂದ ಕಲಿಸಲ್ಪಡುತ್ತಿತ್ತು. ಮಾತ್ರವಲ್ಲ'ಮೆಟ್ರಿಕ್'ಎಂಬುದು ಶಿಕ್ಷಣದ ಒಂದು ಪ್ರಮುಖ ಮೆಟ್ಟಿಲು ಎಂಬ ದೃಷ್ಟಿಯಿಂದ ಮೆಟ್ರಿಕ್ ಪರೀಕ್ಷೆಗೆ ಹೆಚ್ಚಿನ ಪ್ರಾಶಸ್ತ್ಯವನ್ನೀಯುತ್ತಿದುದರಿಂದ ತೇರ್ಗಡೆಯಾಗಲು ಬಹಳಷ್ಟು ಕಷ್ಟಪಡಬೇಕಾಗುಗುತ್ತಿತ್ತು. ತತ್ಪರಿಣಾಮವಾಗಿ, ಸಮಿತಿಯು ತನ್ನ ಶಿಫಾರಸಿನಲ್ಲಿ ಕೇವಲ ಶಿಕ್ಷಣ ಒಂದೇ ವಿದ್ಯಾರ್ಥಿಗೆ ಸಹಕರಿಸದು. ಆದುದರಿಂದ ವಿದ್ಯಾರ್ಥಿಯ ಭಾವೀ ಜೀವನಕ್ಕೆ ಸಹಕರಿಸುವ ಔದ್ಯೋಗಿಕ ಮಾರ್ಗದರ್ಶನವನ್ನು ನೀಡುವಲ್ಲಿ ಮಾಧ್ಯಮಿಕ ಶಿಕ್ಷಣವು ನೆರವಾಗಬೇಕೆಂದು ಘೋಷಿಸಿತು. ಪ್ರೌಢ ಶಿಕ್ಷಣವು ಕೊರತೆಗಳಿಂದ ಹೊರತಾಗಿರಲಿಲ್ಲ. ದುರ್ವ್ಯಯ, ದುರಾಡಳಿತ ಹಾಗೂ ಅನಾವ್ಯಕವಾದ ಪೈಪೋಟಿಗಳಿಂದ ಶಿಕ್ಷಣದ ಮಟ್ಟವು ಕುಸಿಯುತ್ತಿದ್ದುದನ್ನು ಕಂಡು ಹಲವು ಮಾರ್ಪಾಟುಗಳನ್ನು ಮಾಡಲ್ಪಟ್ಟಿತು. ಮುಖ್ಯವಾಗಿ ಶಿಕ್ಷಣ ಮಾಧ್ಯಮವಾಗಿದ್ದ ಇಂಗ್ಲೀಷ್ ಭಾಷೆಯು ತೀರ ಕೆಳಮಟ್ಟದಲ್ಲಿತ್ತು. ಮಂಜೂರಾದ ಹಣದ ದುರುಪಯೋಗವು ನಡೆಯುತ್ತಿದುದರಿಂದ ಫಲಿತಾಂಶ ಸಾಧಾರಣವಾಗಿತ್ತು. ಶಿಕ್ಷಣದ ಮಟ್ಟವನ್ನು ಕ್ಷೀಣಿಸಿ ತನ್ಮೂಲಕ ವಿದ್ಯಾರ್ಥಿಗಳನ್ನು ಆಕರ್ಷಿಸಿ. ಹಣ ಸುಲಿಯುವ ಕರಾಳ ಕೃತ್ಯಗಳು ನಡೆಯುತ್ತಿದ್ದವು. ವಿಶ್ವವಿದ್ಯಾನಿಲಯಗಳ ಸಂಖ್ಯೆ ಕಡಿಮೆಯಾಗಿದ್ದುದರಿಂದ ವಿದ್ಯಾರ್ಥಿಗಳು ತುಂಬಿ ತುಳುಕುತ್ತಿದ್ದರು.

ವಿದ್ಯಾರ್ಥಿಗಳ ಸಂಖ್ಯೆಗೆ ಸಾಕಾಗುವಷ್ಟು ಸುಸಜ್ಜಿತವಾದ ಗ್ರಂಥಾಲಯಗಳಾಗಲಿ, ಆಟದ ಬಯಲಾಗಲಿ ಅಲ್ಲಿರುತ್ತಿರಲಿಲ್ಲ.

ಪ್ರೌಢ ಶಿಕ್ಷಣದ ಮಟ್ಟವು ಊರ್ಜಿತವಾಗಬೇಕಾದರೆ, ಪ್ರಾಥಮಿಕ ಮಟ್ಟದ ಪ್ರಗತಿ ಅನಿವಾರ್ಯವೆನಿಸಿತು. ಆದರೆ ಪ್ರೌಢ ಶಿಕ್ಷಣ ಮಟ್ಟವನ್ನು ಉತ್ತಮಪಡಿಸುವುದೊಂದೇ ಧ್ಯೇಯವಾದಲ್ಲಿ ಅರ್ಹ ವಿದ್ಯಾರ್ಥಿಗೆ 'ಉದ್ಯೋಗ ನೀಡಿಕೆ'ಯೂ ಒಂದು ಸಮಸ್ಯೆಯಾಗಿತ್ತು. ಅದಕ್ಕೋಸ್ಕರ ಕಾಲೇಜುಗಳಲ್ಲಿ ತಾಂತ್ರಿಕ ಜ್ಞಾನವನ್ನು ಹಾಗೂ ಔದ್ಯೋಗಿಕ ತರಬೇತಿಯನ್ನು ನೀಡಲು ಆದೇಶಿಸಿತು. ಮಾತ್ರವಲ್ಲ "ಉದ್ಯೋಗ ಕೇಂದ್ರ"ವೊಂದನ್ನು ಕಾಲೇಜುಗಳಲ್ಲಿ ತೆರೆಯಲು ನಿರ್ಧರಿಸಲಾಯಿತು. ಶೈಕ್ಷಣಿಕ ವಿಹಾರಗಳು ಬಳಕೆಯಲ್ಲಿ ಬಂದವು. ಅಗ ವಾಡಿಕೆಯಲ್ಲಿದ್ದ ಅಸ್ಪೃಶ್ಯತೆಯನ್ನು ಶಿಕ್ಷಣ ರಂಗದಲ್ಲಿ ನಿರ್ಬಂಧಿಸಲು ಹಾರ್ಟೆಜ್ ಆಯೋಗ ಬಯಸಿತು. ಹರಿಜನರು, ಗಿರಿಜನರು ಸಾರ್ವಜನಿಕರೊಡನೆ ಬೆರೆತು ಶಿಕ್ಷಣವನ್ನು ಪಡೆಯಲು ಅವಕಾಶವನ್ನು ನೀಡಿತು. ಸ್ತ್ರೀ ಶಿಕ್ಷಣವು ಬಳಕೆಯಲ್ಲಿದ್ದು ಉದ್ಯೋಗ ವರ್ತುಲಗಳಲ್ಲಿ, ತರಬೇತಿ ನೀಡಿಕೆಯಲ್ಲೂ ಸ್ತ್ರೀಯರಿಗೆ ಆದ್ಯತೆಯನ್ನೀಯುತ್ತಿತ್ತು. ಪ್ರಸ್ತುತ ಪರಿಸ್ಥಿತಿಯಲ್ಲಿ ನಿರ್ಲಕ್ಷಿಸಲ್ಪಟ್ಟಿದ್ದ ಮಹಮ್ಮದೀಯರನ್ನು ಆಯೋಗ ಗುರುತಿಸಿ ಸಮಾನ ಆದ್ಯತೆ ನೀಡಿತ್ತು.

ಈ ಪ್ರಕಾರ ಆಗಿನ ಪರಿಸ್ಥಿತಿಯ ಹಲವಾರು ಸಮಸ್ಯೆಗಳತ್ತ ಕ್ಷ-ಕಿರಣ ಬೀರಿ ಅವುಗಳಿಗೆ ಯೋಗ್ಯ ಉತ್ತರವನ್ನು ದೊರಕಿಸುವಲ್ಲಿ ಯಶಸ್ವಿಯಾದ ಹಾರ್ಟೆಜ್ ಆಯೋಗ ಭಾರತೀಯ ಶಿಕ್ಷಣದ ಇತಿಹಾಸದಲ್ಲಿ ಚಿರಸ್ಮರಣೀಯ ಅಧ್ಯಾಯವನ್ನು ನಿರ್ಮಿಸಿತು.

೯. ದ್ವಿಪ್ರಭುತ್ವದಲ್ಲಿ ವಿದ್ಯಾಭ್ಯಾಸ

ದ್ವಿತೀಯ ವಿಶ್ವಸಮರದ ನಂತರ —"ಬ್ರಿಟಿಷರಿಗೆ ಭಾರತಕ್ಕೆ ಸ್ವಾತಂತ್ರ್ಯ ನೀಡಬೇಕೆನ್ನುವ ಬಯಕೆ ಇದೆ"—ಎಂದು ತೋರಿಸುವುದಕ್ಕಾಗಿ ನಡೆಸಿದ ನಾಟಕೀಯ ವಿದ್ಯಾಮಾನಗಳಲ್ಲಿ ಮಾಂಟೆಗೋ ಚೆಲ್ಮ್ಸ್‌ಫರ್ಡ್ ಸಮಿತಿಯ ನೇಮಕ ಮುಖ್ಯವಾದುದು. ಅಂತೆಯೇ ಆ ಸಮಿತಿ ನಿರ್ಧರಿಸಿದ ಕಾನೂನೊಂದನ್ನು 1921ರಲ್ಲಿ ಜಾರಿಗೆ ತಂದ ಬ್ರಿಟಿಷ್ ಸರಕಾರ ಭಾರತದಲ್ಲಿ 'ದ್ವಿಪ್ರಭುತ್ವ'ಕ್ಕೆ (Diarchy) ನಾಂದಿಯನ್ನು ಹಾಡಿತು. ತತ್ಪರಿಣಾಮವಾಗಿ ಆಡಳಿತದ ಅಂಗಗಳು ಎರಡಾಗಿ ವಿಭಾಗಿಸಲ್ಪಟ್ಟವು. ಒಂದು ಭಾಗ ಕೇವಲ ರಾಜ್ಯಪಾಲ ಹಾಗೂ ಅವರ ಸಲಹಾ ಸಮಿತಿಯ ಆಡಳಿತಕ್ಕೊಳಪಟ್ಟಿದ್ದರೆ, ಇನ್ನೊಂದು ವಿಭಾಗವು ಮಂತ್ರಿಗಳ ಕೈಯಲ್ಲಿರುತ್ತಿತ್ತು. ಈ ಮಂತ್ರಿಗಳು ಜನತಾ ಪ್ರತಿನಿಧಿಗಳಾದುದರಿಂದ ಅದು ಸಾರ್ವಜನಿಕರ ಆಡಳಿತಕ್ಕೊಳಪಟ್ಟಂತಿತ್ತು.

ಶಿಕ್ಷಣವು ಜನತಾ ಪ್ರತಿನಿಧಿಗಳ ಹಸ್ತವನ್ನು ಅಲಂಕರಿಸಿತ್ತಾದರೂ, ಅದಕ್ಕೆ ಪ್ರಮುಖವಾದ ಆರ್ಥಿಕ ಖಾತೆಯು ರಾಜ್ಯಪಾಲರ ನಿರ್ಬಂಧಕ್ಕೆ ಒಳಪಟ್ಟಿತ್ತು. ಹಾಗಾಗಿ ವಿದ್ಯಾಭ್ಯಾಸಕ್ಕಾವಶ್ಯಕವಾದ ಆರ್ಥಿಕ ಸೌಲಭ್ಯವು ದೊರಕುತ್ತಿರಲಿಲ್ಲ. ಅನಾವಶ್ಯಕ

ಅಡೆತಡೆಗಳಿಂದಾಗಿ ಶಿಕ್ಷಣವು ಕುಂಠಿತವಾಗುತ್ತಿತ್ತು. ಯೋಗ್ಯ ನೆರವುಗಳು ಅಲಭ್ಯವಾದುದರಿಂದ ಖಾಸಗಿ ವಿದ್ಯಾಸಂಸ್ಥೆಗಳು ತಮ್ಮ ಸೇವೆಯಲ್ಲಿ ಹಿಂಜರಿಯುವಂತಾಯಿತು. ವಿದ್ಯಾ ಸಲಹಾ ಸಮಿತಿಗಳು ಕೂಡ ಸಮರ್ಪಕವಾಗಿ ಕಾರ್ಯವೆಸಗುತ್ತಿರಲಿಲ್ಲ. ಐ. ಸಿ. ಎಸ್. ನಂತಹ ಉನ್ನತ ಪದವೀಧರರು ಸಲಹಾ ಸಮಿತಿಯಲ್ಲಿದ್ದರೂ ಪ್ರಾಥಮಿಕ ಶಿಕ್ಷಣದ ವಿಮರ್ಶೆಯಲ್ಲಿ ಕೂಲಂಕಷವಾಗಿ ಅವರು ವ್ಯವಹರಿಸುತ್ತಿರಲಿಲ್ಲ. ಮಾತ್ರವಲ್ಲ ಪರಿಸ್ಥಿತಿಯ ನ್ಯೂನತೆಗಳು ಅವರಿಗೆ ತಿಳಿಯುತ್ತಿರಲಿಲ್ಲ. ಅದನ್ನು ಜನತೆ ತೀವ್ರವಾಗಿ ಪ್ರತಿಭಟಿಸಲು ನಿರ್ಧರಿಸಿತು. ಅತ್ಯಂತ ಹೆಚ್ಚಿನ ಸಂಘಟನಾಶಕ್ತಿ ಹಾಗೂ ಅಭಿವ್ಯಕ್ತಿಯ ತಂತ್ರವನ್ನು ಹೊಂದಿದ್ದ ಕಾಂಗ್ರೆಸ್ ಪಕ್ಷದ ನೇತಾರತ್ವದಲ್ಲಿ ಜನತೆಯ ಪ್ರತಿಭಟನೆ ತೀವ್ರವಾದಾಗ ಸರಕಾರವು ಬಲವಂತವಾಗಿ ಕಣ್ಣು ತೆರೆಯಬೇಕಾಯಿತು. ತತ್ಪರಿಣಾಮವಾಗಿ ನಡೆದ ಬದಲಾವಣೆಗಳು ಜನರ ಬೇಡಿಕೆಗಳನ್ನು ಸಂಪೂರ್ಣವಾಗಿ ಈಡೇರಿಸದಿದ್ದರೂ ಅವರಲ್ಲಿ ಕನಿಷ್ಠ ತೃಪ್ತಿಯನ್ನು ಹುಟ್ಟಿಸುವಲ್ಲಿ ಯಶಸ್ವಿಯಾಯಿತು ಎನ್ನಬಹುದು.

೧೦. ಕಡ್ಡಾಯ ಶಿಕ್ಷಣ ಕಾಯಿದೆ

ದ್ವಿಪ್ರಭುತ್ವದ ಅವಧಿಯಲ್ಲಿ ಕಡ್ಡಾಯ ಶಿಕ್ಷಣ ಕಾಯಿದೆಯೊಂದು ಜಾರಿಗೆ ಬಂದಿತು. ಬೊಂಬಾಯಿಯಲ್ಲಿ ಇದು 1923ರಲ್ಲೂ, ಅಸ್ಸಾಮ್ ಹಾಗೂ ಉತ್ತರ ಪ್ರದೇಶಗಳಲ್ಲಿ 1930ರಲ್ಲೂ ಅನುಷ್ಠಾನಕ್ಕೆ ಬಂದಿತು. ಈ ಕಾನೂನಿನ ಪ್ರಕಾರ ಶಿಕ್ಷಣ ನೀಡುವ ಹೊಣೆ ಹಾಗೂ ಅಧಿಕಾರವನ್ನು ಸ್ಥಳೀಯ ಸಂಸ್ಥೆಗಳಿಗೆ ನೀಡಲಾಯಿತು. ಇದಕ್ಕೆ ತಗಲುವ ವೆಚ್ಚದ ನಿರ್ವಹಣೆಗಾಗಿ 'ತೆರಿಗೆ' ವಿಧಿಸುವುದಕ್ಕೆ ಅನುಮತಿ ನೀಡಲಾಯಿತು. ವಿದ್ಯಾಕಾರ್ಯಗಳ ವಿತರಣೆ ಹಾಗೂ ಪ್ರಗತಿಗಾಗಿ ಬೇಕಾಗುವ ಆರ್ಥಿಕ ಸಾಲವನ್ನು ಸರ್ಕಾರಿ ಅಂಗಗಳು ನೀಡುತ್ತಿದ್ದವು. 6 ರಿಂದ 10 ವರ್ಷಗಳ ನಡುವಿನ ಅವಧಿಯಲ್ಲಿ ಶಿಕ್ಷಣ ಕೇಂದ್ರಗಳಿಗೆ ಮಕ್ಕಳನ್ನು ಕಳುಹಿಸದಿದ್ದಲ್ಲಿ, ಹೆತ್ತವರಿಗೆ ಕೂಡ ದಂಡ ವಿಧಿಸಬಹುದಾಗಿತ್ತು.

ಈ ತರಹದ ಒತ್ತಾಯದಿಂದ ಶಿಕ್ಷಣದ ಪ್ರಗತಿ ಸ್ವಲ್ಪಮಟ್ಟಿಗೆ ಸಾಧ್ಯವಾಯಿತು. 1937ರ ಸುಮಾರಿಗೆ ಒಟ್ಟು 4001 ಸ್ಥಳಗಳಲ್ಲಿ ಶಿಕ್ಷಣ ಕೇಂದ್ರಗಳು ಕಾರ್ಯವೆಸಗುತ್ತಿದ್ದವು. ಖಾಸಗೀ ಶಿಕ್ಷಣ ಶಾಲೆಗಳು ಪುನಶ್ಚೇತನಗೊಂಡವು. 1921ರಲ್ಲಿ ಇದ್ದ 7530 ಶಿಕ್ಷಣ ಕೇಂದ್ರಗಳು 1937ರಲ್ಲಿ 13056ಕ್ಕೇರಿತು. 1929ರಲ್ಲಿ 66,258 ವಿದ್ಯಾರ್ಥಿಗಳು ಕಾಲೇಜು ಶಿಕ್ಷಣವನ್ನು ಪಡೆದಿದ್ದರು. 1937ರಲ್ಲಿ ಈ ಸಂಖ್ಯೆ 1,26,228ನ್ನು ತಲುಪಿತು. ಆಗ ಸುಮಾರು 11 ವೈದ್ಯಕೀಯ ಕಾಲೇಜುಗಳೂ, 14 ಕಾನೂನು ಕಾಲೇಜುಗಳೂ 6 ತಾಂತ್ರಿಕ ಶಿಕ್ಷಣಾಲಯಗಳೂ 14 ಶಾಲೆಗಳೂ 537 ಔದ್ಯೋಗಿಕ ತರಬೇತಿ ಕೇಂದ್ರಗಳೂ, 8 ವಾಣಿಜ್ಯ ಕಾಲೇಜುಗಳೂ – ಅಸ್ತಿತ್ವದಲ್ಲಿದ್ದವು. ಸ್ತ್ರೀ ಶಿಕ್ಷಣಕ್ಕೆ ವಿಶೇಷ ಪ್ರೋತ್ಸಾಹ ನೀಡಲಾಗುತ್ತಿತ್ತು. ಹೈನುಗಾರಿಕೆ, ದೈಹಿಕ ಶಿಕ್ಷಣ, ವ್ಯವಸಾಯ, ವೈದ್ಯಕೀಯ, ಕಾನೂನು, ಸೈನಿಕ ತರಬೇತಿ, ತಾಂತ್ರಿಕ

ಹಾಗೂ ಔದ್ಯೋಗಿಕ ತರಬೇತಿಗಳು ವಿಶೇಷ ಪ್ರಾಶಸ್ತ್ಯ ಗಳಿಸಿದುವು.

ಹೀಗೆ 1937ರ ಸುಮಾರಿಗೆ ದ್ವಿಪ್ರಭುತ್ವ ಆಡಳಿತದ ನಡುವೆ ಶಿಕ್ಷಣವು ನಿರೀಕ್ಷಿತ ಮಟ್ಟವೇರದಿದ್ದರೂ, ಪ್ರಗತಿಯ ಒಂದು ಮೆಟ್ಟಿಲನ್ನಾದರೂ ಏರಿತು ಎಂಬುದು ಖಂಡಿತ.

೧೧. ಎಬೋಟ್ - ವುಡ್ ಪರಿಶ್ರಮ :

ಕೇಂದ್ರ ಶಿಕ್ಷಣ ಸಲಹಾ ಮಂಡಳಿಯು 1921ರಲ್ಲಿ ರಚಿಸಲ್ಪಟ್ಟಿದ್ದರೂ, ಆರ್ಥಿಕ ಮುಗ್ಗಟ್ಟಿನಿಂದ, ಅದು ಕಾರ್ಯವೆಸಗುತ್ತಿರಲಿಲ್ಲ. ಆದರೆ ಹಾರ್ಟಿಜ್ ಸಮಿತಿಯ ಸಲಹೆಯಂತೆ ಅದನ್ನು ಪುನರ್ಜಾಗೃತಿಗೊಳಿಸಲಾಯಿತು. ದೇಶದ ವಿವಿಧ ಪ್ರಾಂತಗಳ ವಿದ್ಯಾ ಪ್ರತಿನಿಧಿಗಳು ಸೇರಿದ ಪ್ರಥಮ ಸಭೆಯಲ್ಲಿ – ಶಿಕ್ಷಣ ಕ್ರಮದ ಪ್ರಗತಿಗೆ ಸರಕಾರವು ಗಣನೀಯವಾಗಿ ಶ್ರಮಿಸಬೇಕೆಂದು ನಿರ್ಧರಿಸಿತು. ಕೇವಲ ಶೈಕ್ಷಣೀಕ ತರಬೇತಿಯು ಸಾಕಾಗುವುದಿಲ್ಲ ; ಬದಲಾಗಿ ಅದರೊಡನೆ ಮುಂದಿನ ಜೀವನಕ್ಕೆ ಸಹಕರಿಸುವ ಔದ್ಯೋಗಿಕ ಶಿಕ್ಷಣವನ್ನು ನೀಡುವುದು ಅಗತ್ಯ ಎಂದು ಮತ್ತೊಮ್ಮೆ ಜ್ಞಾಪಿಸಿತು. ಭಾರತದ ಪ್ರಚಲಿತ ಕ್ರಮ ಹಾಗೂ ಅಪೇಕ್ಷಿತ ಸುಧಾರಣೆಗಳ ಬಗ್ಗೆ ಸಮೀಕ್ಷೆ ನಡೆಸುವುದಕ್ಕಾಗಿ ಇಂಗ್ಲೆಂಡಿನ ಶ್ರೇಷ್ಠ ಶಿಕ್ಷಣ ತಜ್ಞರಾದ ಶ್ರೀ ಎಬ್ಬೋಟ್ ಹಾಗೂ ಶ್ರೀ ಎಸ್.ಎಚ್. ವುಡ್ ರನ್ನು ಆಮಂತ್ರಿಸಲಾಯಿತು. 1931ರಿಂದ ಶಿಕ್ಷಣಕ್ಷೇತ್ರದಲ್ಲಿ ಆರ್ಥಿಕ ಮುಗ್ಗಟ್ಟಿನ ಕೊಳಚೆ ಶೇಖರವಾಗುತ್ತಿತ್ತು. ತತ್ಪರಿಣಾಮವಾಗಿ ನಿರುದ್ಯೋಗವು ಜನಿಸಿತು. ಪದವೀಧರರಿಗೆ ಸಮರ್ಪಕವಾದ ಉದ್ಯೋಗ ದೊರಕದೆ ಸುಮ್ಮನಿರುತ್ತಿದ್ದರು. ಈ ನಿರುದ್ಯೋಗಕ್ಕೊಂದು ರಾಮಬಾಣ ಒದಗಿಸಲು, ಶಿಕ್ಷಣ ಕ್ರಮದಲ್ಲಿ ನಿರ್ವಹಣಾ ವ್ಯವಸ್ಥೆಯನ್ನು ಸಂಘಟಿಸಲು ಸಹಾಯಕವಾಗುವ ಸಲಹೆಯನ್ನು ನೀಡಲು ಎಬ್ಬೋಟ್–ವುಡ್ ನಾಯಕತ್ವದ ಸಲಹಾ ಮಂಡಲಿಯನ್ನು ವಿನಂತಿಸಲಾಯಿತು. ಸಮಯಾಭಾವದಿಂದ ಕೇವಲ ಪಂಜಾಬ್, ಡೆಲ್ಲಿ, ಆಗ್ರ ಕ್ಷೇತ್ರಗಳನ್ನು ಮಾತ್ರ ಸಂದರ್ಶಿಸಿದ ಎಬ್ಬೋಟ್ ಹಾಗೂ ವುಡ್ ತಮ್ಮ ವರದಿಯನ್ನು 1936ರಲ್ಲಿ ಸರಕಾರಕ್ಕೆ ಒಪ್ಪಿಸಿದರು. ಸಾಮಾನ್ಯ ಶಿಕ್ಷಣ ಹಾಗೂ ವೃತ್ತಿಪರ ಶಿಕ್ಷಣದ ಬಗ್ಗೆ ಬೇರೆ ಬೇರೆಯಾಗಿ ತಯಾರಿಸಿದ ವರದಿಯಲ್ಲಿ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು.

ಪ್ರಾಥಮಿಕ ಶಿಕ್ಷಣವು ಇಡೀ ಶಿಕ್ಷಣ ವ್ಯವಸ್ಥೆಯ ಮೂಲ ಅಡಿಗಲ್ಲಾಗಿರುವುದರಿಂದ, ಆ ಅವಧಿಯಲ್ಲಿ ಅರ್ಥಪೂರ್ಣವಾಗಿ, ಸ್ವಾರಸ್ಯಕರವಾಗಿ ವಿದ್ಯಾರ್ಥಿಗಳ ಇಚ್ಛೆಗೆ ಅನುಗುಣವಾಗಿ ಹಾಗೂ ವೈಜ್ಞಾನಿಕವಾಗಿ ಈ ಶಿಕ್ಷಣ ನೀಡಬೇಕು. ವಿದ್ಯಾರ್ಥಿಯು ಮುಂದಿನ ಶಿಕ್ಷಣದ ಬಗ್ಗೆ ಆಶಾವಾದಿಯಾಗುವಂತೆ ಪ್ರಚೋದಿಸಬೇಕು. ಇದಕ್ಕೆ ಉತ್ತಮ ತರಬೇತಿ ಹೊಂದಿದ ಮಹಿಳಾ ಶಿಕ್ಷಕರುಗಳನ್ನು ಗೊತ್ತುಪಡಿಸಬೇಕು. ನಾಲ್ಕು ವರ್ಷಗಳ ಪ್ರಾಥಮಿಕ ಶಿಕ್ಷಣ, ನಾಲ್ಕು ವರ್ಷಗಳ ಮಾಧ್ಯಮಿಕ ಶಿಕ್ಷಣ, ಮೂರು ವರ್ಷಗಳ ಪ್ರೌಢ ಶಿಕ್ಷಣ ಹಾಗೂ ಮೂರು ವರ್ಷಗಳ ವಿ. ವಿ. ಶಿಕ್ಷಣ (4+4+3+3) ಅವಧಿಯನ್ನು ನಿಗದಿಪಡಿಸಬೇಕು. ಇಂಗ್ಲೀಷ್ ಭಾಷೆಯು ಶಿಕ್ಷಣ ಮಾಧ್ಯಮವೆನಿಸಿ

ಕೊಂಡು ಒತ್ತಡ ಹೇರುವುದರ ಬದಲು–ಐಚ್ಛಿಕ ಭಾಷೆಯಲ್ಲಿ ಶಿಕ್ಷಣ ನೀಡುವುದರ ಜೊತೆಗೆ ಇಂಗ್ಲೀಷನ್ನು ಒಂದು ಕಡ್ಡಾಯ ವಿಷಯವಾಗಿ ನೀಡಬೇಕು. ತೋಟಗಾರಿಕೆ ಶ್ರಮದಾನಗಳಂತಹ ದೈಹಿಕ ಕ್ರಿಯಾತ್ಮಕ ಚಟುವಟಿಕೆಗಳ ಸೌಲಭ್ಯವನ್ನು ನೀಡ ಬೇಕು. ಶಿಕ್ಷಕ ಹಾಗೂ ಶಿಕ್ಷಕಿಯಾಗುವವರು ಅಪೇಕ್ಷಿತ ತರಬೇತಿಯನ್ನು ಹೊಂದಿದವ ರಾಗಬೇಕು. ಶಿಕ್ಷಣದ ಮೇಲೆ ಸರಕಾರ ಹೆಚ್ಚಿನ ಹಸ್ತಕ್ಷೇಪ ನಡೆಸಬೇಕು. ಅಂದರೆ ಶಿಕ್ಷಣ ಖಾತೆಯ ಮೂಲಕ, – ಶಿಕ್ಷಣ ನಿರ್ವಹಣಾಧಿಕಾರಿಗಳ ನೇಮಕದೊಡನೆ ಅಧ್ಯಾ ಪಕ ವಿದ್ಯಾರ್ಥಿಗಳ ಅರ್ಹತೇ ಪರೀಕ್ಷೆ ಗಾಗಿ ಶಿಕ್ಷಣ ಇನ್‌ಸ್ಪೆಕ್ಟರರುಗಳ ನೇಮಕ – ಇವುಗಳಿಂದ ಹೆಚ್ಚಿನ ಪ್ರತಿಫಲವನ್ನು ನಿರೀಕ್ಷಿಸಬಹುದು ಎಂದು ಎಬ್ಬೊಟ್ ವುಡ್ ವರದಿ ಸಾಮಾನ್ಯ ಶಿಕ್ಷಣದ ಕುರಿತು ಸಲಹೆ ನೀಡಿತು.

೧೨. ಔದ್ಯೋಗಿಕ ಶಿಕ್ಷಣ ಶಿಫಾರಸು :

ನಿರುದ್ಯೋಗ ನಿರ್ಮೂಲನದ ಏಕೈಕ ದೃಷ್ಟಿಯಿಂದ ಪ್ರತ್ಯೇಕವಾಗಿ ವೃತ್ತಿಪರ ಶಿಕ್ಷಣ ವರದಿಯನ್ನು ತಯಾರಿಸಲಾಗಿತ್ತು. ಭಾರತದಲ್ಲಿ ಉದ್ಯೋಗಾಕಾಂಕ್ಷಿಗಳ ಸಂಖ್ಯೆ ಉದ್ಯೋಗ ಪೂರೈಕೆಯ ಸಂಖ್ಯೆಗಿಂತ ಬಹಳಷ್ಟು ಹೆಚ್ಚಿದೆ ಎಂಬುವುದು ಬಹುಶಃ ಪ್ರಪ್ರಥಮವಾಗಿ ಗುರುತಿಸಲ್ಪಟ್ಟಿದ್ದು 1936ರಲ್ಲಿ. ವೈಜ್ಞಾನಿಕ ಮಾದರಿಯಲ್ಲಿ ನಿರು ದ್ಯೋಗ ನಿರ್ಮೂಲನ ಮಾಡುವ ಉದ್ದೇಶದಿಂದ ಶಿಕ್ಷಣ ಕ್ರಮವನ್ನು ಪುನರ್‌ರೂಪಿಸಲು ಎಬ್ಬೋಟ್‌ವುಡ್ ವರದಿ ಆದೇಶಿಸಿತು. ಭಾರತದ ಔದ್ಯೋಗಿಕ ಸ್ಥಿತಿಯನ್ನು ಊರ್ಜಿತ ಗೊಳಿಸಿದಲ್ಲಿ ನಿರುದ್ಯೋಗ ನಿರ್ಮೂಲನ ಸಾಧ್ಯವೆಂದೂ, ದೇಶದಲ್ಲಿನ ನೈಸರ್ಗಿಕ ಸಂಪ ತ್ತಿನ ಬಳಕೆಯಿಂದ ಉದ್ಯೋಗರಂಗದಲ್ಲಿ ಮುಂದುವರೆದಲ್ಲಿ ನಿರುದ್ಯೋಗವನ್ನು ತಡೆಗಟ್ಟು ವುದರಲ್ಲಿ ಯಶಸ್ಸು ಸಿಗುವುದು ಸಾಧ್ಯವೆಂದೂ ಈ ವರದಿ, ತನ್ನ ಅನಿಸಿಕೆಯನ್ನು ವ್ಯಕ್ತ ಪಡಿಸಿತು. 'ವೃತ್ತಿಪರತೆ' ಶಿಕ್ಷಣದ ಮೂಲ ಉದ್ದೇಶವಾಗಿರಬೇಕು. ದೇಶದ ಉತ್ಪಾದನಾ ಶಕ್ತಿ ಹೆಚ್ಚಿಸಲು ವೃತ್ತಿಪರ ಶಿಕ್ಷಣ ಹೆಚ್ಚು ನೆರವು ನೀಡುತ್ತದೆ ಅದುದರಿಂದ ಅದರತ್ತ ವಿಶೇಷ ಗಮನ ಹರಿಸಬೇಕು. ಅವಶ್ಯಕವಾದ ಸಲಹಾ ಮಂಡಳಿ, ತರಬೇತಿ ಕೇಂದ್ರಗಳನ್ನು ತೆರೆಯಬೇಕು ; ಶಿಕ್ಷಣ ಕ್ರಮವನ್ನು ಇದಕ್ಕೆ ಹೊಂದುವಂತೆ ಪುನರ್ಸಂ ಯೋಜಿಸಬೇಕು ; ತಾಂತ್ರಿಕ ಹಾಗೂ ಕೈಗಾರಿಕಾ ಶಿಕ್ಷಣ ತರಬೇತಿ ಕೇಂದ್ರಗಳನ್ನು ಮುಖ್ಯವಾಗಿ ಹಳ್ಳಿಗಳಲ್ಲಿ (5000 ಕ್ಕಿಂತ ಕಡಿಮೆ ಜನಸಂಖ್ಯೆ ಹೊಂದಿದ ಪ್ರದೇಶಗಳಲ್ಲಿ) ತೆರೆದು ಜನಸಾಮಾನ್ಯನೂ ಇದರ ಪ್ರಯೋಜನ ಪಡೆಯುವಂತಾಗಬೇಕು ಎಂದು ವರದಿ ತಿಳಿಸಿತು. ಮಾನವ ತನ್ನ ಅಭ್ಯುದಯಕ್ಕೆ ಅತ್ಯಂತ ಅವಶ್ಯವಾದ ವೃತ್ತಿಯನ್ನು ಕೈ ಗೊಳ್ಳಲು ಸಹಕರಿಸುವ ಔದ್ಯೋಗಿಕ ಶಿಕ್ಷಣವನ್ನು ಶಾಲಾದಿನಗಳಲ್ಲಿ ನೀಡಬೇಕೆಂದು ಒತ್ತಾಯಿಸಿತು. ಹಾಗಾಗಿ ಸಾಮಾನ್ಯ ಶಿಕ್ಷಣ ಹಾಗೂ ವೃತ್ತಿಪರ ಶಿಕ್ಷಣ ಒಂದ ಕ್ಕೊಂದು ಪರಿಪೂರಕವಾಗಿದ್ದು – ಎರಡರ ಸಮರ್ಪಕ ಸೌಲಭ್ಯ ದೊರಕಿದಲ್ಲಿ ವಿದ್ಯೆಯು ಸಂಪೂರ್ಣ ಪ್ರಯೋಜನ ಪಡೆಯುವುದು. ವಿದ್ಯಾರ್ಥಿಗೂ ಹಾಗೂ ಸರಕಾರಕ್ಕೂ

ಸಾಧ್ಯವಾದೀತು ಎಂದು ಎಬ್ಬೋಟ್ ವುಡ್ ವರದಿ ತಿಳಿಸಿತು.

ಸಮಯಾಭಾವದ ದೃಷ್ಟಿಯಿಂದ ಜರೂರಾಗಿ ಸಮೀಕ್ಷೆ ನೀಡಲು ತಯಾರಿಸಿದ ಈ ವರದಿಯಲ್ಲಿ ದೇಶದ ಸಂಪೂರ್ಣ ಶಿಕ್ಷಣ ವ್ಯವಸ್ಥೆಯನ್ನು ಪ್ರತಿಬಿಂಬಿಸದಿದ್ದರೂ – ಅವಶ್ಯಕವಾದ ಬೇಡಿಕೆಗಳನ್ನು ಗುರುತಿಸಿ, ಸರಕಾರ ಅದನ್ನು ಅಂಗೀಕರಿಸುವಂತೆ ವಿಶೇಷ ಸಲಹೆ ಮಾಡಿತು. ಹಾಗಾಗಿ ಎಬ್ಬೋಟ್ ವುಡ್ ವರದಿ (1937) ಭಾರತೀಯ ಶಿಕ್ಷಣದ ಪುನಶ್ಚೇತನಕ್ಕೆ ಒಂದು ಉಜ್ವಲ ಕೊಡುಗೆ ಎನಿಸಿತು.

೧೩. ವರ್ಧಾ ಶಿಕ್ಷಣ ನೀತಿ

1935ರ "ಭಾರತ ಸರಕಾರ ಕಾಯಿದೆ" – ದ್ವಿಪ್ರಭುತ್ವಕ್ಕೆ ಮಂಗಳವನ್ನು ಹಾಡಿತು. 1937ರಲ್ಲಿ ಪ್ರಾಂತೀಯ ಸರಕಾರಗಳು ವ್ಯವಸ್ಥೆಗೊಳಿಸಲ್ಪಟ್ಟವು. 11 ಪ್ರಾಂತ್ಯಗಳ ಪೈಕಿ 7 ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಸರಕಾರವು ಪಟ್ಟವನ್ನೇರಿದವು. ಆಯಾಯಾ ಪ್ರಾಂತ್ಯಗಳಲ್ಲಿನ ರಾಜ್ಯಭಾರ ವ್ಯವಸ್ಥೆಯನ್ನು ಆಯಾಯ ಆಡಳಿತ ಸಮಿತಿಗೆ ಬಿಟ್ಟು ಬಿಡಲಾಗಿತ್ತು. ತತ್ಪರಿಣಾಮವಾಗಿ ಕಾಂಗ್ರೆಸ್ಸಿಗರಿಗೂ ರಾಜ್ಯಾಡಳಿತದ ಸಂದರ್ಭ ಒದಗಿ ಬಂತು. ಈ ಕಾಲದಲ್ಲಿ ಶಿಕ್ಷಣವಲ್ಲಾದ ಪ್ರಮುಖ ವ್ಯತಿರಿಕ್ತತೆಯನ್ನು ವರ್ಧಾ ಶಿಕ್ಷಣಾ ವ್ಯವಸ್ಥೆ" ಅಥವಾ "ಬುನಾದಿ ಶಿಕ್ಷಣ"ವೆನ್ನುತ್ತಾರೆ.

ಶಿಕ್ಷಣ ವ್ಯವಸ್ಥೆಯ ರಕ್ಷಣೆಯು ಕಾಂಗ್ರೆಸ್ಸಿಗರ ಕೈಗೆ ಬಂದಾಗ ಹೊಸ ಶಿಕ್ಷಣ ಪದ್ಧತಿಯೊಂದನ್ನು ಅಳವಡಿಸಲು ಅವರು ಬಯಸಿದರು. ಅಂತೆಯೇ 'ಗಾಂಧೀ ಯೋಜನೆ' ಯನ್ವಯ ಹೊಸ ಶಿಕ್ಷಣ ವ್ಯವಸ್ಥೆಯನ್ನು ಪರಿಚಯಿಸಲಾಯಿತು. ಮಹಾತ್ಮ ಗಾಂಧಿ ಯವರು ತಮ್ಮ ಪತ್ರಿಕೆಯಾದ "ಹರಿಜನ"ದಲ್ಲಿ 'ಭಾರತೀಯರಿಗೆ ಯಾವ ರೀತಿಯ ಶಿಕ್ಷಣ ವ್ಯವಸ್ಥೆ ಬೇಕಾಗಿದೆ ?'– ಎನ್ನುವ ಬಗ್ಗೆ ವಿಚಾರಪೂರಿತ ಲೇಖನಗಳನ್ನು ಬರೆಯು ತ್ತಿದ್ದರು. ಇವುಗಳಲ್ಲಿ ಜುಲೈ 31, 1937 ರಂದು ಬರೆದ ಲೇಖನ ಹೆಚ್ಚು ಪರಿಣಾಮ ಕಾರಿಯಾಗಿತ್ತು. ಅಂತೆಯೇ ಅಕ್ಟೋಬರ್ 2 ರಂದು ಬರೆದ ಲೇಖನವೊಂದರಲ್ಲಿ— ಶಿಕ್ಷಣದ ಪುನರ್ವ್ಯವಸ್ಥೆಗಾಗಿ ರಾಷ್ಟ್ರೀಯ ಸಮ್ಮೇಳನ ಕರೆಯುವುದಾಗಿ ಸಾರಿದರು. 1937 ಅಕ್ಟೋಬರ್ 22 ಹಾಗೂ 23 ರಂದು ನಡೆದ ಈ ಶಿಕ್ಷಣ ಸಮ್ಮೇಳನ "ವರ್ಧಾ ಶಿಕ್ಷಣ ಸಮ್ಮೇಳನ" ಎನಿಸಿತು. ಈ ಸಮ್ಮೇಳನದಲ್ಲಿ ದೇಶದ ಎಲ್ಲಾ ಕಡೆ ಗಳಿಂದ ಬಂದ ಶಿಕ್ಷಣ ತಜ್ಞರು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು. ತತ್ಪರಿಣಾಮ ವಾಗಿ ಅಂಗೀಕರಿಸಿದ ಠರಾವಿನಲ್ಲಿ "ಮೊದಲು ಏಳು ವರ್ಷಗಳ ಶಿಕ್ಷಣ ಉಚಿತ ಹಾಗೂ ಕಡ್ಡಾಯವಾಗಿರಬೇಕು. ಮಾತೃಭಾಷೆ ಶಿಕ್ಷಣ ಮಾಧ್ಯಮವಾಗಿರಬೇಕು. ವಿದ್ಯಾ ಕೇಂದ್ರಗಳಲ್ಲಿ ಪಠ್ಯಪುಸ್ತಕಗಳ ಶಿಕ್ಷಣದ ಜೊತೆ, ವೃತ್ತಿಪರ ತರಬೇತಿಯನ್ನು ನೀಡಬೇಕು. ಹೀಗೆ ಶಿಕ್ಷಣ ವ್ಯವಸ್ಥೆ ರೂಪಿಸಿಕೊಂಡಲ್ಲಿ ಉತ್ತಮ ಫಲಿತಾಂಶವನ್ನು ನಿರೀಕ್ಷಿಸುವುದು ಸಾಧ್ಯ"—ಎಂದು ವಿವರಿಸಲಾಗಿತ್ತು. ಈ ಠರಾವಿನ ಸಾಧ್ಯತೆ, ಬಾಧ್ಯತೆಗಳ ಬಗ್ಗೆ ಪರಿಶೀಲನೆ ನಡೆಸುವುದಕ್ಕಾಗಿ ಡಾ|| ಜಾಕೀರ್ ಹುಸೇನ್‌ರ ನೇತೃತ್ವದಲ್ಲಿ ಸಮಿತಿ

ಯೊಂದನ್ನು ರೂಪಿಸಲಾಯಿತು. ಅಧ್ಯಕ್ಷರ ಹೊರತಾಗಿ ಒಂಬತ್ತು ಮಂದಿ ಸದಸ್ಯರನ್ನು ಹೊಂದಿದ್ದ ಈ ಸಮಿತಿಯಲ್ಲಿ ಆಚಾರ್ಯ ವಿನೋಬಾಭಾವೆ ಹಾಗೂ ಕಾಕಾ ಕಾಲೇಲಕರರೂ ಇದ್ದರು. ಈ ಸಮಿತಿ 1937ರ ಡಿಸೆಂಬರ್‌ನಲ್ಲಿ ಹಾಗೂ, 1938ರ ಏಪ್ರಿಲ್‌ನಲ್ಲಿ ಹೀಗೆ ಎರಡು ವರದಿಗಳನ್ನು ಒಪ್ಪಿಸಿತ್ತು, ಪ್ರಥಮ ವರದಿಯಲ್ಲಿ ವರ್ಧಾ ಶಿಕ್ಷಣ ಯೋಜನೆಯ ರೂಪರೇಖೆ, ಕಾರ್ಯನಿರ್ವಹಣೆ, ಜೊತೆಗೆ ಇತರ ಕರಕುಶಲ ಕೈಗಾರಿಕೆಗಳಾದ ನೂಲುವುದು, ನೇಯುವುದು – ಇತ್ಯಾದಿ– ಕುರಿತು ವಿವರಿಸಲಾಗಿತ್ತು. ನಂತರದ ಮತ್ತೊಂದು ವರದಿಯಲ್ಲಿ ಕೃಷಿ, ಗಣಿಗಾರಿಕೆ, ಮರದ ವಿನ್ಯಾಸ ಹಾಗೂ ಇತರ ಕುಶಲ ಕೈಗಾರಿಕೆಗಳ ಕುರಿತು ವಿವರಿಸಲಾಯಿತು. 1938ರಲ್ಲಿ ಹರಿಪುರದಲ್ಲಿ ನಡೆದ ಕಾಂಗ್ರೆಸ್ ವಾರ್ಷಿಕ ಸಮ್ಮೇಳನದಲ್ಲಿ ಈ ಕುರಿತು ವ್ಯಾಪಕವಾಗಿ ಚರ್ಚಿಸಲಾಯಿತು. ಮಾತ್ರವಲ್ಲ ಅಖಿಲ ಭಾರತ ರಾಷ್ಟ್ರೀಯ ಶಿಕ್ಷಣ ಮಂಡಲಿ (ಬುನಾದಿ ಶಿಕ್ಷಣ)ಯು ಅಸ್ತಿತ್ವಕ್ಕೆ ಬಂದಿತು.

ಸಾಧಾರಣವಾಗಿ, ಗಾಂಧೀ ಯೋಜನೆಯನ್ನು ಅಳವಡಿಸಿ ಕೊಂಡಿದ್ದ ಈ ಯೋಜನೆಯ ಪ್ರಕಾರ ಪ್ರಥಮ ಏಳು ವರ್ಷಗಳು ಶಿಕ್ಷಣ ಹುಡುಗರಿಗೂ ಹುಡುಗಿಯರಿಗೂ ಉಚಿತವಾಗಿತ್ತು. ಶಿಕ್ಷಣ ಮಾಧ್ಯಮ ಮಾತೃಭಾಷೆಯಾಗಿತ್ತು. ವಿದ್ಯಾರ್ಥಿಗಳ ನಿರೀಕ್ಷೆಗೆ ತಕ್ಕಂತಹ ತರಬೇತು ನೀಡಲಾಗುತ್ತಿತ್ತು. ಶಿಕ್ಷಣವು ವಿದ್ಯಾರ್ಥಿಯ ಪರಿಸರ ಹಾಗೂ ಪರಿಸ್ಥಿತಿಯ ಸಾಮಿಪ್ಯವನ್ನು ಹೊಂದಿರಬೇಕಿತ್ತು. ಕರಕುಶಲ ಕೈಗಾರಿಕೆಗಳಿಗೆ ವಿಶೇಷ ಪ್ರೋತ್ಸಾಹ ನೀಡಲಾಗುತ್ತಿತ್ತು. ಈ ಯೋಜನೆಯ ಪ್ರಕಾರ 5ನೇಯ ತರಗತಿಯ ತನಕ ಸಹ ಶಿಕ್ಷಣ ಲಭ್ಯವಾಗುತ್ತಿತ್ತು. ಮಾತ್ರವಲ್ಲ ಈ ಅವಧಿಯಲ್ಲಿ, ಕುಶಲ ಕೈಗಾರಿಕೆ, ನೇಯ್ಗೆ, ಕೃಷಿ, ಚರ್ಮದ ಕೆಲಸ, ತೋಟಗಾರಿಕೆ, ಫಲ ಸಂರಕ್ಷಣೆ, ಮೀನುಗಾರಿಕೆ ಹಾಗೂ ಭೌಗೋಳಿಕ ಅಂಶಗಳಿಗೆ ಸಹಕರಿಸುವ ಚಟುವಟಿಕೆಗಳು ಲಭಿಸುತ್ತಿದ್ದವು. ಆದರೆ 6ನೆಯ ತರಗತಿಯಿಂದ ವಿದ್ಯಾರ್ಥಿನಿಯರು ಇದರ ಬದಲಾಗಿ 'ಗೃಹ ವಿಜ್ಞಾನ'ವನ್ನು ಆರಿಸಿಕೊಳ್ಳಬಹುದಾಗಿತ್ತು. ಹಿಂದಿ ಭಾಷೆ ಕಡ್ಡಾಯವಾಗಿತ್ತು, ಶಿಕ್ಷಣವು ದೇಶಭಕ್ತಿ ದೇಶಪ್ರೇಮಗಳನ್ನು ಹುಟ್ಟಿಸುತ್ತಿದ್ದವು. ಕೇವಲ ತರಬೇತಿ ಹೊಂದಿದ ಶಿಕ್ಷಕರು ಮಾತ್ರ ಅಧ್ಯಾಪಕ ವೃತ್ತಿಯನ್ನು ನಡೆಸಬಹುದಾಗಿತ್ತು. ಭಾವೀ ಸಮಾಜಕ್ಕೊಂದು, ದೇಶಪ್ರೇಮ, ಸತ್ಪ್ರಜೆ, ಹಾಗೂ ಜವಾಬ್ದಾರಿಯುತ ನಾಗರಿಕನನ್ನು ತಯಾರು ಮಾಡುವಲ್ಲಿ ಈ ಶಿಕ್ಷಣಕ್ರಮ ವಿಶೇಷ ಆಸ್ಥೆವಹಿಸಿತು.

ವರ್ಧಾ ಶಿಕ್ಷಣ ಯೋಜನೆಯು ನ್ಯೂನತೆಗಳಿಂದ ಹೊರತಾಗಿರಲಿಲ್ಲ. ಈ ಶಿಕ್ಷಣ ಕ್ರಮ ಕೇವಲ ಹಳ್ಳಿಯ ಅವಶ್ಯಕತೆಗಳನ್ನು ಪೂರೈಯಿಸುವುದಕ್ಕೆ ಮಾತ್ರ ರೂಪಿಸಿದಂತಿತ್ತು. ಕೇವಲ ಪ್ರಾಥಮಿಕ ವ್ಯವಸ್ಥೆಯತ್ತಲೇ ಹೆಚ್ಚಿನ ಮಹತ್ವವನ್ನು ನೀಡುತ್ತಿದ್ದರು. ವಿಶ್ವದ ಎಲ್ಲಾ ರಾಷ್ಟ್ರಗಳೂ ಪ್ರಗತಿಪಥದತ್ತ ಹೆಜ್ಜೆ ಇಡುತ್ತಿರುವಾಗ ನೂಲುವಿಕೆಯಂತಹ ಅನಾಗರಿಕ ಪದ್ಧತಿಯನ್ನು ಉಳಿಸಿ ಬೆಳಸುವುದು ಕೆಲವರಿಗೆ ಸರಿ ಬೀಳಲಿಲ್ಲ. 288 ದಿನಗಳ ಶಾಲಾ ದಿನಗಳು ವಿದ್ಯಾರ್ಥಿಯನ್ನು ಮಾನಸಿಕವಾಗಿ

ಬಹಳಷ್ಟು ಬಳಲಿಸುತ್ತದೆ ಎಂಬ ಅಭಿಪ್ರಾಯ ಹಲವರದು. ಕೇವಲ ಕುಶಲ ಕೈಗಾರಿಕೆಗೇ ಹೆಚ್ಚಿನ ಆದ್ಯತೆ ನೀಡಿ ಅರ್ಥಕ್ಕಿಂತಲೂ ಹೆಚ್ಚಿನ ಸಮಯವನ್ನು ವ್ಯರ್ಥಪಡಿಸುವುದು ಕೆಲವರ ಅಸಮಾಧಾನಕ್ಕೆ ಕಾರಣವೆನಿಸಿತ್ತು.

೧೪. ಸಾರ್ಜೆಂಟ್ ವರದಿ :

ದ್ವಿತೀಯ ವಿಶ್ವಸಮರದ ನಂತರ ಭಾರತದ ಆಡಳಿತದ ಜೊತೆಗೆ, ಎಲ್ಲಾ ವ್ಯವಸ್ಥೆಗಳನ್ನು ಸಂಪೂರ್ಣವಾಗಿ ಬದಲಿಸಿ, ಪ್ರಗತಿ ನಿರೀಕ್ಷಿತ ಯೋಜನೆಗಳನ್ನು ಕೈಗೊಳ್ಳಲು ಬ್ರಿಟಿಷ್ ಸರಕಾರ ನಿರ್ಧರಿಸಿತು. ಇದರನ್ವಯ ಶಿಕ್ಷಣವಲ್ಲಿ ಮಾಡಬಹುದಾದ ಬದಲಾವಣೆಗಳನ್ನು ನಿರ್ಧರಿಸಲು ಸರ್ ಜೋನ್ ಸಾರ್ಜೆಂಟ್‌ರನ್ನು ನೇಮಿಸಲಾಯಿತು, 1944ರಲ್ಲಿ ಸರಕಾರಕ್ಕೆ ಒಪ್ಪಿಸಿದ ಈ ವರದಿಯಲ್ಲಿ ಸಾರ್ಜೆಂಟ್ ತನ್ನ ಅಭಿಪ್ರಾಯವನ್ನು ವಿವರಿಸಿದ್ದು ಈ ವರದಿಯನ್ನು ಸಾರ್ಜೆಂಟ್ ವರದಿ ಎನ್ನುತ್ತಾರೆ.

ವಿದ್ಯಾಭ್ಯಾಸವನ್ನು ಆರಂಭಿಸುವ ಅವಧಿಯನ್ನು ಆರು ವರ್ಷದಿಂದ, ಮೂರು ವರ್ಷಕ್ಕಿಳಿಸಿ, ಪ್ರಥಮ ಮೂರು ವರ್ಷಗಳಲ್ಲಿ, ಅತ್ಯಂತ ಸರಳವಾಗಿ ಶಿಕ್ಷಣದ ಔಚಿತ್ಯತೆಯ ಬಗ್ಗೆ ವಿವರಿಸಿ, ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ತರಬೇತು ಪಡಿಸುವ ಸಲಹೆಯನ್ನು ಈ ವರದಿಯಲ್ಲಿ ವಿಶ್ಲೇಷಿಸಲಾಯಿತು. ಅದಕ್ಕೋಸ್ಕರ ಬಾಲವಾಡಿಗಳನ್ನು ಶಿಶುವಿಹಾರಗಳನ್ನು ತೆರೆಯಲು ಅಪೇಕ್ಷಿಸಿತು. ಈ ಕೇಂದ್ರಗಳು ಹಳ್ಳಿಗಳಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಕೇಂದ್ರಗಳೊಡನೆ ಇರಬಹುದಾಗಿದ್ದರೂ ಈ ಎರಡರ ನಡುವೆ ಯಾವುದೇ ತರಹದ ಹಸ್ತಕ್ಷೇಪ ನಿಷಿದ್ಧವಾಗಿದ್ದಿತು. ವಿದ್ಯಾರ್ಥಿಯ ಮಾನಸಿಕ ಹಾಗೂ ಬೌದ್ಧಿಕವಾಗಿ ಶಿಕ್ಷಣ ಕಣಕ್ಕೆ ಉತ್ತಮ ಹುರಿಯಾಳಾಗುವಂತೆ ತರಬೇತು ನೀಡುವ ಈ ಶಾಲೆಗಳು ಉಚಿತವಾಗಿರಬೇಕು.

ಪ್ರಾಥಮಿಕ ಶಾಲೆಗಳನ್ನು ಕಿರಿಯ ಬುನಾದಿ ಶಾಲೆ (6 ರಿಂದ 11 ವರ್ಷ ವಯಸ್ಸಿನ ಮಕ್ಕಳು) ಗಳೆಂದು ವಿಂಗಡಿಸಬೇಕು. ಕಿರಿಯ ಬುನಾದಿ ಶಾಲೆಯಲ್ಲಿ ಇಂಗ್ಲೀಷ್ ಭಾಷೆ ಅನಿವಾರ್ಯವಾಗಿದ್ದು 25 ವಿದ್ಯಾರ್ಥಿಗಳಿಗೆ ಓರ್ವ ಉಪಾಧ್ಯಾಯರು ಇರಬೇಕಾಗಿತ್ತು.

ಮಾಧ್ಯಮಿಕ ಶಾಲೆಯ ಪ್ರವೇಶಕ್ಕೆ 11 ವರ್ಷ ಕಳೆದಿರಬೇಕು. ಕೊನೆಯ ಪಕ್ಷ ಮೂರು ವರ್ಷಗಳನ್ನು ಈ ಮಾಧ್ಯಮಿಕ ಶಾಲೆಯಲ್ಲಿ ಕಳೆಯಬೇಕು. 50% ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡಬೇಕು. ಐಶ್ವರ್ಯದ ಅಂತಸ್ತಿಗೆ ಅನುಗುಣವಾಗಿ, ಶಿಷ್ಯವೇತನಗಳನ್ನು ನೀಡಬೇಕು.

ಪಠ್ಯಕ್ರಮಗಳಿಗನುಗುಣವಾಗಿ, ಶಾಲೆಗಳನ್ನು, ಶೈಕ್ಷಣಿಕ ಹಾಗೂ ತಾಂತ್ರಿಕ ಕೇಂದ್ರಗಳಾಗಿ ವಿಭಾಗಿಸಬೇಕು. ಶಿಕ್ಷಣ ಮಾಧ್ಯಮ ಮಾತೃಭಾಷೆಯಾಗಿರಬಹುದಾದರೂ, ಇಂಗ್ಲೀಷ್ ಭಾಷೆ ದ್ವಿತೀಯ ಕಡ್ಡಾಯ ಭಾಷೆಯಾಗಿ ಕಲಿಸಲ್ಪಡಬೇಕು. ವಿಶ್ವವಿದ್ಯಾನಿಲಯಗಳ ಶಿಕ್ಷಣ ಮಟ್ಟವನ್ನು ಹೆಚ್ಚಿಸುವ ಉದ್ದೇಶದಿಂದ 'ಪ್ರವೇಶ'

(Admission)ದಲ್ಲಿ ಹೆಚ್ಚಿನ ಎಚ್ಚರಿಕೆ ವಹಿಸಬೇಕು. ಮಾಧ್ಯಮಿಕ ಶಿಕ್ಷಣ ಮುಗಿಸಿದ ಸಂಖ್ಯೆಯ 7%ರಷ್ಟು ವಿದ್ಯಾರ್ಥಿಗಳು ಮಾತ್ರ ವಿಶ್ವವಿದ್ಯಾನಿಲಯ ಪ್ರವೇಶಕ್ಕೆ ಅರ್ಹರು. ವಿಶ್ವವಿದ್ಯಾನಿಲಯಗಳ ಅಧ್ಯಾಪಕರುಗಳಿಗೆ ಸಂಬಳ ಸವಲತ್ತುಗಳನ್ನು ಹೆಚ್ಚಿಸುವುದರ ಮೂಲಕ ಇನ್ನು ಹೆಚ್ಚಿನ ಸೇವೆಯನ್ನು ನಿರೀಕ್ಷಿಸಬಹುದು.

ಕೇವಲ ಶೈಕ್ಷಣಿಕ ವಿದ್ಯಾಭ್ಯಾಸವತ್ತ ಮಾತ್ರ 'ಸಾರ್ಜೆಂಟ್ ವರದಿ' ಬೆಳಕು ಬೀರಲಿಲ್ಲ. ಬದಲಾಗಿ ಅವರ ಜೊತೆಗೆ ವೃತ್ತಿಪರ, ತಾಂತ್ರಿಕ, ಔದ್ಯೋಗಿಕ ಹಾಗೂ ಕೈಗಾರಿಕಾ ಶಿಕ್ಷಣಗಳ ಔಚಿತ್ಯದ ಬಗೆಗೂ ವಿಶೇಷ ಸಲಹೆಗಳನ್ನು ನೀಡಿತು. ಪ್ರಾಥಮಿಕ ಮಟ್ಟದಲ್ಲಿ ಶೈಕ್ಷಣಿಕ ವಿದ್ಯಾಭ್ಯಾಸ ಪಡೆದರೂ ಆನಂತರ ತಾಂತ್ರಿಕ ಶಿಕ್ಷಣವನ್ನು ಪಡೆಯುವುದು ಅರ್ಹವೆನಿಸುವಂತೆ ಸೂಕ್ತವಾದ ಬದಲಾವಣೆಗಳನ್ನು ನಿರ್ದೇಶಿಸಿತು. ಶಿಕ್ಷಣ ತರಬೇತಿ ಕೇಂದ್ರಗಳನ್ನು ತೆರೆಯಲು ನಿರ್ಧರಿಸಿತು. ಉದ್ಯೋಗ ಸಲಹಾ ವಿಭಾಗಗಳನ್ನು ವಿಶ್ವವಿದ್ಯಾನಿಲಯಗಳ ಆವರಣದಲ್ಲಿಯೇ ತೆರೆಯಲು ಶಿಫಾರಸು ಮಾಡಿತು.

'ಸಾರ್ಜೆಂಟ್ ವರದಿ'—ಈ ರೀತಿಯ ಹಲವು ಸೂಕ್ತ ಸಲಹೆಗಳನ್ನಿತ್ತರೂ ಆಗಿನ ಶಿಕ್ಷಣ ತಜ್ಞರ ಅಭಿಪ್ರಾಯದಂತೆ—ಈ ವರದಿಯಲ್ಲಿ ನ್ಯೂನತೆ ಇಲ್ಲವಾದರೂ ನವ್ಯತೆ ಏನೂ ಇರಲಿಲ್ಲ. ಆ ಹಿಂದೆ ಕಳೆದು ಹೋದ ಹಲವು ವರದಿಯಂತೆ ಇದು ಒಂದು ನಿರಾಶಾದಾಯಕವಾಗಿತ್ತು. ಶಿಕ್ಷಣದ ಮೂಲಭೂತ ಸಮಸ್ಯೆಯನ್ನು ಚರ್ಚಿಸಲು ವಿಫಲವಾದದ್ದು. ಶಿಕ್ಷಣ ತಜ್ಞರ "ಸಮಾಧಾನಕ್ಕೆ ಕಾರಣವಾಗಿತ್ತು" ಎನಿಸಿದ್ದರೂ— ಈ ವರದಿ ಭಾರತದಲ್ಲಿ ಬ್ರಿಟಿಷ್ ಅಡಳಿತದ ಕೊನೆಯ ಶೈಕ್ಷಣಿಕ ವರದಿಯಾಗಿತ್ತು. ಮತ್ತು ಸ್ವಾತಂತ್ರ್ಯಪೂರ್ವದ ಶಿಕ್ಷಣ ಸುಧಾರಣೆಯ ಅಂತಿಮ ಹೆಜ್ಜೆಯಾಗಿತ್ತು.

ಗ್ರಂಥಋಣ

1. B. C. Rai : *History of Indian Education*
2. K. M. Panikar : *A Survey of Indian History*
3. A. D. Pandey : *Early Medieval India*
4. Thompson & Garrett : *Rise and Fulfillment of British Rule in India*

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

—o—

- ಮಾನವಿಕ ಕರ್ಣಾಟಕ
- ವಿಜ್ಞಾನ ಕರ್ಣಾಟಕ
- ಪ್ರಬುದ್ಧ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ನಾಲ್ಕು ರೂಪಾಯಿ
ಇತರರಿಗೆ	....	ಆರು ರೂಪಾಯಿ
ಸಂಸ್ಥೆಗಳಿಗೆ	....	ಎಂಟು ರೂಪಾಯಿ

(ಆಜೀವ ಸದಸ್ಯತ್ವ : ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ಡೈರೆಕ್ಟರ್
'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು—೫೭೦ ೦೦೬